ಯಕ್ಷಗಾನ ಪ್ರಸಂಗಗಳು

ಸಂಪುಟ ೧೧

ಪ್ರಕಾಶಕರು :

ಲಕ್ಷ್ಮೀನಾರಾಯಣ ಟ್ರಸ್ಟ್, ಮುಂಬಯಿ

ಮತ್ತು

ಪದವೀಧರ ಯಕ್ಷಗಾನ ಸಮಿತಿ, ಮುಂಬಯಿ

೧೯೯೧

Scanned by CamScanner

S. k

ಯಕ್ಷಗಾನ ಪ್ರಸಂಗಗಳು

ಸಂಪುಟ ೧೧

ಸಂಗ್ರಾಹಕರು :
ಎಚ್. ಬಿ. ಎಲ್. ರಾವ್, ಮುಂಬಯಿ

ಪ್ರಕಾಶಕರು :
ಲಕ್ಷ್ಮೀನಾರಾಯಣ ಟ್ರಸ್ಟ್, ಮುಂಬಯಿ
ಮತ್ತು
ಪದವೀಧರ ಯಕ್ಷಗಾನ ಸಮಿತಿ, ಮುಂಬಯಿ

Scanned by CamScanner

YAKSHAGANA PRASANGAS of Different Authors. Edited by H. B. L. Rao, Bombay

First Impression : 1991

All rights reserved

Publishers : "Lakshminarayana Trust"
141 'Kailas' Sion (west)
Bombay - 400 022
and
Padaveedhara Yakshagana Samithi (Regd.)
Sudama Sadana, Mulund (west)
Bombay - 400 080

Printers : Gurukula Printers
P. O. PERLA - 671 552
Kasaragod Dist.

Price : **Rs. 25-00**

1991

ಪ್ರಸಂಗಗಳು

	ಹೆಸರು	ಒದಗಿಸಿದವರು	ಪುಟ
೧.	ಅಂಜನಾ ವಿಲಾಸ	ಶ್ರೀ ಬಲಿಪ ನಾರಾಯಣ ಭಾಗವತ	1
೨.	ಪದ್ಮಾಕ್ಷಿಕಲ್ಯಾಣ	,,	53
೩.	ವಿಶ್ರುತಾಂಕ ಚರಿತ್ರೆ	,,	125
೪.	ಧರ್ಮಪಾಲ ಚರಿತ್ರೆ	ಶ್ರೀ ಮೂಡಂಬೈಲು ಗೋಪಾಲಕೃಷ್ಣ ಶಾಸ್ತ್ರಿ ಶ್ರೀ ಮೂಡಂಬೈಲು ಮಹಾಬಲ ಶಾಸ್ತ್ರಿ (ಲೇಖಕರು)	155
೫.	ಸುಕನ್ಯಾ ಪರಿಣಯ	ಶ್ರೀ ಪಿ. ಶ್ರೀನಿವಾಸ ಭಟ್ ಕಟೀಲು	195
೬.	ರಾಮವಿಜಯ	ಶ್ರೀ ಅಮೃತ ಸೋಮೇಶ್ವರ, ಪುತ್ತೂರು	213

Scanned by CamScanner

ಅಂಜನಾವಿಲಾಸ

Scanned by CamScanner

ಉತ್ತರಖಾಂಡ ರಾಮಾಯಣದೊಳಗಣ

ಅಂಜನಾವಿಲಾಸ

ಶಾರ್ದೂಲವಿಕ್ರೀಡಿತ ವೃತ್ತ

ಶ್ರೀಗೌರೀಕುಚಕುಂಕುಮಾಂಕವಿಲಸದ್ವಿಸ್ತಾರ ವಕ್ಷಸ್ಥಳಂ । ನಾಗಾಧೀಶ ಸುರಾದ್ಯಮುಖ್ಯಹರಿಭಿರ್ವೇದಾರ್ಚನಾಲಂಕೃತಂ । ಶ್ರೀಗಂಗಾ ನಿಭೃತೋರ್ಧ್ವ ಚಂಚಲ ಜಟಾಜೂಟಾರ್ಕಕೋಟಿಪ್ರಭಂ । ಭೋಗಾನಂದ ಫಲಪ್ರದಂ ಶಶಿಧರಂ ಧ್ಯಾಯಾಮಿ ಚಿತ್ತೇ ಸದಾ ॥ ೧ ॥

ನಾಟಿ : ರೂಪಕ

ಶ್ರೀಮನ್ನಮರಗಣಾವಳಿ । ಪ್ರೇಮಂ ಹೇಮ ಪ್ರಭಾಕಲಿ ॥ ತಾಮು ಕುಟೋಜ್ವಲ ರಂಜಕ । ಸಾಮಜ ಮುಖ ಬೆನಕ ॥ ಪಲ್ಲ ॥ ಖದ್ಯೋತಾಮಿತ ಭಾಸುರ । ವಿದ್ಯಾ ವಿದ್ಯಾಗ್ರೇಸರ । ಸಾಧ್ಯಾಪ್ರವರ ವಿಸ್ತಾರಾ । ರಾಧ್ಯಾ ಶ್ರುತಿ ವೇದ್ಯಾ ॥ ಸಿದ್ಯಬ್ಜಾಳಿ ಪ್ರಭಾಕರ । ಬುಧ್ಯಭಿಮಾನಿ ಕೃಪಾಕರ । ಮುದ್ಯಮಮಿತೀ ಶುಭಕರ ಹೃದ್ಯಾ । ನಿರವಧಿ ಜಯ ॥ ೧ ॥ ಧಿಟ ಸರ್ವೋತ್ತಮ ಶ್ರೀಕರ । ಪಟು ಮುನಿ ವಿತತಮನೋಹರ । ಕುಟಿಲಭುಜಂಗಸುಪಸಿರಃ ಸ್ಫಟಿಕಾಂಗನ ಕುವಕರಿಣ ಪರಶ್ವಂಕುಶಧರ । ಘಟಪುರಿಚಂದನಪ್ರಿಯಕರ । ವಿಠಭುವನತ್ರಯ ಜೀವರ । ವಿಟ ಧರ ವಿಠದೇರಾ ॥ ಜಯ ॥ ೨ ॥ ಸಿಂಧುರಮೊಗಶೃತ ತಿಲಕವು । ಚಂದಿರಚಂದ್ರ ಕಳಂಕವು । ಬಂಧುರಪೂರ್ಣದಕಸ್ತೂರಿ । ಚಂದ್ರಿಕಮತ್ಕೀರ್ತಿ ॥ ಚಂದದ ಸಂಧರೆ ಯೊದ್ವಯ । ಚಂದ್ರರೆ ಹಾಯೆಂದೀರ್ಷೆಯೋ । ಳಿಂದುವ ಶಪಿಸಿದ ಶ್ರೀಪಲ । ಚಂದಿರವಾಂ ಪಾಹಿ ॥ ಜಯ ॥ ೩ ॥

ವಾರ್ಧಿಕ

ಕಡುಸುಪ್ರಸನ್ನನಂ ಕಡಲನುಲ್ಲಂಘನಂ । ದೃಢತರವಜ್ರಾಂಗನಂಧಡಿ ಗರಾಭಂಗನಂ । ಜಡಜಾಕ್ಷಸಂಗನಂ ಪೊಡಿವಿಗುತ್ತುಂಗನಂ ಶೃಂಗನಂ ನುತಶೃಂಗನಂ । ಜಡಜಸಖಭಾಸನಂ ನಿಡುಯಶಸ್ಯಾಸನಂ।ಜಡಿವಘವಿನಾಶನಂ ಕುಡುವಿಲ್ಲದೂಷನಂ । ಬಿಡುಗಂಣಸ್ತೋತ್ರನಂ ಮೃಡಸತ್ವಪಾತ್ರನಂ ಪೊಡವಡುವೆ ನಾ ಹನುಮನಂ ॥೧॥

ಭಾಮಿನಿ

ಚಂಡಚಂಡಮಯೂಖಸಮರ ಪ್ರ । ಚಂಡ ಗಂಡರಗಂಡ ಜಗದು । ದ್ದಂಡ ಕಾಶ್ಯಪಪಿಂಡ ರಿಪುಕುಲಗಂಡ ಭೇರುಂಡ ॥ ದಂಡಧರ ಪಿತಪಂಡಿತೋತ್ತಮ । ಖಂಡಲಾರ್ಚಿತ ಭಂಡಕಲ್ಮಶ । ತುಂಡಪೊರೆಮಾರ್ತಾಂಡ ಪದ್ಮಿನಿಗಂಡ ಶಿಖಿ ಖಂಡ ॥ ೧ ॥

Scanned by CamScanner

ಪಂತುವರಾಳಿ : ಮಟ್ಟೆ

ತಾಯೆ ಮಹಂಮಾಯೆ ಗುಹನ । ತಾಯೆ ಶಂಕರೀ । ತಾಯೆನಗೆ ಸುಸ್ಥಿತಿಯ ಮತಿಯ । ತಾಯೆ ಶುಭಕರಿ ॥ ಪ ॥ ಕಾಳಪನ್ನಗೇಂದ್ರ ವೇಣಿ । ಕಾಳಿ ಕಲ್ಯಾಣಿ । ತಾಳಮೇಳ ನೃತ್ಯಗೀತ । ಕೇಳಲಾಲಿಸೀತಾ ॥ ೧ ॥ ನಿಭೃತ ಶೂಲ ಪಾಣಿ ಸುಮಣಿ । ಋಭ್ರುಮಣಿ ಪ್ರಣೀ । ಭೂಭೃತ್ಕನ್ನೆ ಮುಕುರ ಚನ್ನೆ ಶುಭ್ರ ಪೈಜಣೀ ॥ ತಾ ॥ ೨ ॥ ಖಂಡ ಪರಮಪ್ರೀತೆ ಬ್ರ । ಹ್ಮಾಂಡದಾತ್ಮಿಕೇ । ಚಂಡ ಮುಂಡ ಮಹಿಷಮಥನೆ । ಚಂಡಿಕಾಂಬಿಕೆ ॥ ತಾ ॥ ೩ ॥

ವಾರ್ಧಿಕ

ಜಾಣೆಯಿಂ ಮಣಿವೆನಿಂಗಡಲಣುಗಿ ಶ್ರೀ ಚಕ್ರ । ಪಾಣಿಯಭಾಗ್ಯಮಂ ಪೆರೆದಲೆಯ ತ್ರಾಣಮಂ ಬಾಣಿಯಂ ಬಿಜ್ಜೆಯಂ । ಬಿದಿದೀರ್ಘಮಾಯುಮಂ ನಿಚ್ಚಲ ॥ ಕಾಣಿಕೆಯ ಮನ್ಮನಬುದಾಬ್ಜವನ ಕಲಹಂಸ । ತ್ರಾಣಿಮುನಿ ಶಾರ್ದೂಲ ವಾಲ್ಮೀಕರಿಂಗೆ ಕವಿ । ಶ್ರೇಣಿಗಂ ಮಿಗೆ ಬರ್ದುಣಿಗಳಂಘ್ರಿಗಂ ಮಳ್ಳರಿಂದಾನಪ್ಪೆ ಕಾಗೆ ॥ ೧ ॥

ಕಂದ

ಶಿಖಿ ಕೊಂಚಂದೀರ್ಶಗೆ । ಶಿಖಿಸಪ್ತಂಗಳನಟ್ಟಿದೆ ಮೆಟ್ಟಿದೆ ಶಿಖಿಯಾಗಲ್। ಶಿಖಿತತಿಗಾಂಪತಿಯೆಂದು । ಶಿಖಿಗಳನ್ನೇಡಿಪ ಶಿಖಿದೇರಂ ಪೊರೆದಲ್ ॥ ೧ ॥

ಭಾಮಿನಿ

ಭೂತಭವ್ಯಭವಾಬ್ಧಿ ಪೋತ ಘ । ವ್ರಾತ ಭೂ । ಭೃದ್ವಜರ್ಷಿಸಂ । ಘಾತಘಾತಖದ್ಯೋತ ಜಾತವಿಖ್ಯಾತ ಸುರ ಪ್ರಭವಾ ॥ ಮಾತುಳಾಂತ ಪ್ರೀತ ರಣರಣ । ಖಾತಿ ಧಾತು ವಿಘಾತ ಶ್ರೀಗುರು । ಭೂತಪತಿ ವಿಶ್ವೇಶ ಮಾಳ್ಕೆಮಗತಿ ಸಂಪದವ ॥ ೧ ॥

ದ್ವಿಪದಿ

ಶ್ರೀಮದ್ರಾಮಾಯಣೋತ್ತರ ಖಾಂಡ ಚರಿತಾ । ರಾಮಚಂದ್ರಗಗಸ್ತ್ಯ ಪೇಳ್ದ ಜನಜನಿತ ॥ ೧ ॥ ತತ್ಕಥಾಮಂಜರಿಯೊಳಾ ವಿರಂಚನಲೀ । ಸತ್ಕೀರ್ತಿಯುತ ಋಕ್ಷರಾಜನುದಿಸುತಲಿ ॥ ೨ ॥ ವಾಲಿಸುಗ್ರೀವಾಂಜನೆಯರ ತಾ ಪಡೆದಾ । ಮೇಲಂಜನೆಯಲಿ ಹನುಮಂತನುದಿಸಿದುದಾ ॥ ೩ ॥ ಮತ್ತೆ ಋಕ್ಷನು ಮೋಕ್ಷವಾಗೆ ಸುರಪಜನೂ । ವತ್ತಿಮಾಯಾವಿಯನು ಧುರದಿ ಗೆಲ್ದದನಾ ॥ ೪ ॥ ಸೂರ್ಯೇಂದ್ರ ಭವರ ಶತ್ರುತ್ವ ಕಾರಣವಾ । ಶೌರ್ಯನಿಧಿ ದುಂದುಭಿಯ ವಾಲಿಗೆಲ್ದರವಾ ॥ ೫ ॥ ಇನಿತಾದ ಕಥೆಯನಾಂ ಯಕ್ಷಗಾನದಲಿ । ವಿನಯದಿಂ ವಿರಚಿಸುವೆ ಬುಧರು ಕೈಗೊಳ್ಳಲಿ ॥ ೬ ॥ ಕಪಿಗಳ ಕಥಾಲಾಪವೆಂಬ ದೂಷಣಕೆ । ನಿಪುಣ ಹರಿಭಕ್ತ ಹನುಮಂತ ಹೊಣೆಯಿದಕೆ ॥ ೭ ॥ ನರಜನ್ಮವೆಲರದೀಪ್ತಿಕೆಯೆಂಬದರಿತೂ । ಸರ್ವ

ರಾಧರಿಸುವದು ಮತ್ಸರವ ಮರತು ॥ ೮ ॥ ತಪ್ಪೊಪ್ಪು ವಿಷಮ ಛಂದಸ್ಯತಿ ಗಣಾಳಿ । ವಪ್ಪುಗೊಂಡುದ್ಧರಿಪ ಗುರುಚಂದ್ರಮೌಳಿ ॥ ೯ ॥

ವಾರ್ಧಿಕ

ಪಾಲವುಂ ನೀರೆಡೆಯೊಳಾರ್ತರಾದಮರರಂ । ಪಾಲಿಸಲ್ದಶರಥಾತ್ಮಜನಾಗಿ ಪೋಗಿ ನಿಟಿಲೋಲಾಕ್ಷಿಗಾಗಿ ದಶಕಂಠಾದ್ಯರಂ ನೀಗಿ ಶರಣನಂ ಕ್ಯಾದು ಬಂದು ॥ ಮೇಲೂರ್ವಿಸುತೆ ಸಹಿತ ತಾಳ್ದಂ ಮುಹೂರ್ತದೊಳ್ । ಭೂಲೋಕಮಂ ರಾಮ ಪಟ್ಟಾಭಿಶೇಚನದ । ಕಾಲದೊಳ್ಕೊಂಡರು ಸಮಸ್ತ ಮುನಿಗೀರ್ವಾಣ । ನರನಾಗದನುಜರಂದು ॥ ೧ ॥

ಭಾಮಿನಿ

ಸಕಲರಾಜ ಶಿಖಂಡಶೇಖರ । ಪ್ರಕಟದಿಂ ಮೇಣ್ ಧರಣಿಯಾಳ್ತಿರೆ । ಸಕಲಮುನಿಕಮಲಾರ್ಕ ಕುಂಭಜನಿಂದ ಕರ್ಬುರರ ॥ ನಿಕರದೇಳ್ಗೆ ದಶಾನನನ ಕೌ । ತುಕ ಕಥಾಲಾಪವನು ಕೇಳ್ದಾ । ವ್ಯಕತ ಪರಮಾನಂದ ತುಂದಿಲನಾದ ಖಗದೇರ ॥ ೧ ॥

ಸೌರಾಷ್ಟ್ರ : ತ್ರಿವುಡೆ

ತರಣಿ ವಂಶಲಲಾಮ ಭೂ ಭೃ । ದ್ವರ ಶಿರೋಮಣಿ ರಾಘವೇಂದ್ರನು । ಪರಮಮುನಿ ಶಾರ್ದೂಲ ಕುಂಭಜ । ಗೆರಗಿ ನಗುತ ॥ ೧ ॥ ಒಂದು ದಿನ ಬೆಸಗೊಂಡನಾ ದಶ । ಕಂಧರಾದಿಗಳೇಳ್ಗೆ ಕಥನಗ । ಳಿಂದ ಪೇಳ್ದುದ ಕೇಳಿ ಮನಕಾನಂದವಾಯ್ತು ॥ ೨ ॥ ಕಡಲ ಕುಡಿದ ಮಹಾತ್ಮ ಕೇಳಾ । ದೊಡೆ ಮದೀಯ ಮನಃ ಚಕೋರಗ । ಳೊಡನೆರೆಯಳೆಸುವ ವ್ರತವ ನುಡಿ । ಯುಡುಪತಿಯನು ॥ ೩ ॥ ಆ ನಿಮಿತ್ತರು ಹೇ ಕೃಪಾನಿಧಿ । ಭಾನುಜಾದಿವನೌಕಸೋದ್ಭವ । ಮಾನನಿಧಿಗಳ ಶೌರ್ಯಬಿಂಕನಿ । ದಾನಸಹಿತಾ ॥ ಧುರಧುರಂಧರ ನೀ ಸಮೀರಜ । ನೆರೆ ಸಹಾಯಿಗನಿದ್ದು ಭ್ರುಪ್ಸಜ । ಅರಿಯೊಡನೆ ತಲೆಯೆತ್ತನ್ಯಾಕಾಪರಿಯದೆಂತೈ ॥ ೫ ॥ ಭೂರಿಭಟ ಮಾಯಾವಿ ದುಂದುಭಿ । ವೀರರಳಿದರದೆಂತು ಪೇಳೆಂ । ಬಾ ರಮೇಶನನಪ್ಪಿ ಮುದ್ದಿಸುತಾ ಋಷೀಂದ್ರ ॥ ೬ ॥ ಕಿರುನಗೆಯ ಕೇವಣಿಸಿ ಭಳಿರೇ । ನರಿಯಲಾ ನಿಧಿಟ ಜಗನ್ಮಯ । ನರಚರಿತ್ರೆಗೆ ಹಿತವಹಡೆ ಕೇ । ಳೊರವೆನಾಂದ ॥ ೭ ॥

ವಾರ್ಧಿಕ

ಇಕ್ಷ್ವಾಕು ಕುಲಶಿಖಾಮಣಿ ಕೇಳು ಮೊದಲುಂ ಮ । ಧೋಕ್ಷಜಂ ಲಯ ಸಲಿಲಮಧ್ಯದೊಳ್ ನಿದ್ರೆಯೀ । ವಕ್ಷಮಂ ವಟಪತ್ರದೊಳ್ ನೀಡುತೊರಗೀರ್ದ ರವನನಾಭೀ ಕಮಲದಿ ॥ ಕುಕ್ಷಿಯಿಂದಜನುದಿಸೆ ಹರಿಕರ್ನಕರ್ದಮ । ತಕ್ಷೀರದೊಳ್ ಬೀಳಲೊಗೆದು ಮಧುಕೈಟಭರು । ಕಕ್ಷಿಗಂಬರೆ ಭಯದಿ ನುತಿಸೆ ಮಾಯಾಸ್ತ್ರದಿಂ ।

ದೇಳ್ದಾಗ ತಾಳ್ದು ಕ್ರೋಧ ॥ ೧ ॥ ಮತ್ತೆ ಮಧುಕೈಟಭರ ಕೈತವಂ ಕೈತವ ದೊ । ಳೊತ್ತಿ ಜಗಮಂ ಸೃಜಿಸಿ ವಿಧಿಗೆ ಮೈಗೊಟ್ಟು ಮೇ । ಲತ್ತನಾ ಜ್ಞಾಪನೆಯ ಭುವನೊದೊಳ್ ಭುವನವಂ ಮಾಡೆನೆ ಹಸಾದವೆಂದು ॥ ಕುದ್ದಾದಿಭಾತಿ ಕಂಗಳನು ತೋರ್ಪಡಿಸಿಯು । ತ್ಪತ್ತಿಯಂನೆಗಳಲ್ಮರೀಚಾದಿ ಮೌನಿಗಣ । ಪೊತ್ತಿಗೀ ಜಾಂಬವಂ ಜನ್ಮಿಸಿದನ್ನೈ ದೇವ ಚಿತ್ತಾವಧಾನವೆಂದ ॥ ೨ ॥

ಭಾಮಿನಿ

ಕ್ಷಿತಿಪ ಕೇಳಾ ಮುನಿಮರೀಚಿಗೆ । ಸುತನು ಕಾಶ್ಯಪನವಗೆ ತನುಭವ । ಕುತಪದಿವಸೇಶ್ವರನಲಾ ಕೇಳ್ ಮೇಣಾ ಮೌನೀಂದ್ರಾ ॥ ಸತಿಯು ಶರದಿತಿ ಪ್ರಮುಖ ದಕ್ಷನ । ಸುತೆಯರನಿಬರುಮಾಗಲಮರ । ಪ್ರತತಿ ಕೆಲಬರುದಿಸಲದಿತಿಜ ಮಘವಪತಿಯಾದ ॥ ೧ ॥

ಕಂದ

ಇಂತು ವಿಜೃಂಭಣೆಯಿಂ ವಿಧಿ । ಸಂತತಿ ವಿಶ್ವಮಿದರಿಯೈ ಶ್ರೀಧರ ಕಾಕುಸ್ಥಂ । ಸಂತಾನೇಶ್ವರ ಕೇಳ್ ಸುರ । ತಿಂಥಿಣಿಗಮರಪನೊಂದಿನ ಪೇಳ್ದಂ ಮಂತಸ್ಥಾ ॥ ೧ ॥

ಕೇದಾರಗೌಳ : ಝಂಪೆ

ಚಿತ್ತಿವಿಸಿ ಸುಮನಸಾಳಿ । ಮದ್ವಚನ । ಕತ್ಯಧಿಕ ತೋಷ ತಾಳಿ । ಚತ್ತಜನ ಪಿತನ ದಯದಿ । ಭೋಗ ಸಂ । ಪತ್ತೊದಗಿತೆಮಗೆ ಜವದಿ ॥ ೧ ॥ ಆದಡೆ ಕೃತಘ್ನರಂತೆ ನಾವಿರೆ ಹ । ಸಾದವೇ ಪೇಳಿ ಮುಂತೇ । ಕಾದಲನಮರುತ ನಾರೀ । ಗೃಹಕೆ ಹಿತ । ವಾದಪಳೆ ಖರೆ ಬಿಕಾರಿ ॥ ೨ ॥ ಸೌಮ್ಯವಿದು ಸರಿಯೆ ನೋಡೀ । ನಾ ಬ್ರಹ್ಮ । ಸೌಮ್ಯ ಕೊಂಡಾಡಿ ಪಾಡೀ । ಕಾಮ್ಯಾರ್ಥ ಪಡೆಯ ದಿಂತು । ಜಡನಾಗೆ । ರಮ್ಯವೇ ಸಹಜ ಭ್ರಾಂತು ॥ ೩ ॥ ತತ್ಕಾರ್ಯ ಕದರಿ ನಿಂದ । ಪೋಗಿ ಬಹೆ । ತತ್ಕಾಂತೆ ನೀವಗ್ಗಳಿಂದಾ । ವೆಕ್ಕಸದಿ ಹೊಳಲನಿದರಾ । ಕಾದಿಹುದಿ । ದಕ್ಕಾಡದಿರಿಯುತ್ತರ ॥ ೪ ॥

ವೃತ್ತ

ಗೀರ್ವಾಣಗೋರೆದಿಂತು ನಿಂತು ಮಘವಂ ಸಣ್ಣಾಗ ಯಿಗಂಧಂಗಳಂ । ಸರ್ವೋತ್ತಂಸ ಸುಮಾಳಿಮಾಲಿಕೆಗಳಂ ಕೈಕೊಂಡುಮೇಣೆಲ್ಲವಂ ॥ ಪರ್ವತ್ಯೋಪ ಮದೇಭವೇರಿ ಭರದಿಂ ಬಂದೊಕ್ಕಜಾಲೋಕಮಂ । ಗೀರ್ವಾಣೇಶ ಸುಪದ್ಮಪೀಠ ದೊಳಗಂದಿರಲ್ ಕಂಡು ಸ್ತೋತ್ರವ-ಗೈದನು ॥ ೧ ॥

ಕಾಂಬೋದಿ : ತ್ರಿವುಡೆ

ಪಾಹಿ ಹಿರಣ್ಯಗರ್ಭ । ಮಾಂ ಪಾಲಯ । ಪಾಹಿ ಹಿರಣ್ಯಗರ್ಭವ್ಯೂಹ ಸ್ಥಾವರ ಜಂಗಮಾರ್ಚಿತ । ಪಾಹಿ ಹಿತಗುಣವಂತ ಭಾಸ್ಕರ । ಬಾಹು ಸಾಸಿರ ತುಲ್ಯ ಭಾಸುರ । ವ್ಯಾ ಹೃತಿಪೆನಾಂ ಶಾರದಾವರ ॥ ಪಾಹಿ ॥ ಪಲ್ಲ ॥ ಗಂಧರ್ವ ಗಾನಲೋಲಾ । ಸ್ವಚ್ಛಂದನ । ದಿಂದಲಾನಂದ ಶೀಲಾ । ತಂದೆ ಶ್ರೀಕಮಲ

ಬಾಲಾ । ಕರುಣಾಲವಾಲಾ । ಬಂಧುರ ಶ್ರುತಿಮೌಳಿ ಮುನಿಗಣ । ವಂದ್ಯಸಾಂದ್ರಾನಂದ ವರ್ಧನ । ತಂದೆ ತಂದೆ ಮಹಾನುಭಾವನೆ । ಯೆಂದಿಗೆಂದಿಗು ಮರೆಯೆ ಪದವನೆ ॥ ಪಾ ॥ ೧ ॥ ಶ್ರೀಕಾರ ಮೂರುತೀಯಾ । ಕಂಡಡೆ ಭಯ । ಶೋಕಾವಿನ್ನೆತ್ತ ಜೀಯಾ ॥ ಜಪಸರ ಕೈಯ್ಯಾ ಟೀಕು ಕಾಂಬಡೆ ವಿಸ್ಮಯಾ । ನೀ ಮಹರಾಯಾ । ಸಾಕಿ ಕೊಡೊ ಕಾಮಾರ್ಥಪದಗಳ । ನೀ ಕೊಡುವ ದಾತಾರ ಧನಿಕನು । ನಾಕ ಪದವೆನಗೀಯೊ ಶಾಶ್ವತ । ಮಾಕರಾ ಓಂಕಾರ ಶ್ರೀಕರ ॥ ಪಾ ॥ ೨ ॥ ಇದಕೋಪಾದವ ತೊಳದೇ । ಯಾವಾಹನ । ವಿಧಿಗಳ ವಿರಚಿಸಿದೇ । ಪೂಜೆಯ ಗೈದೇ । ವಿಧ ವಿಧ ಭಾವಿಸಿದೆ । ನವಭಕ್ತಿ ಮೆರದೇ । ಸದ್ಹೃದಯ ಶ್ರೀಹಂಸ ವಾಹನ । ಚದುರನಾಲ್ ಮೊಗನೆಂದು ಮಣಿದಾ ॥ ತ್ರಿದಶಪತಿಯಿರಲಾಗ ಯೋಗ । ಭ್ಯುದಮರದೆಚ್ಚರಿತನಾದ ಶ್ರೀ ॥ ಪಾ ॥ ೩ ॥

ಭಾಮಿನಿ

ಕಂದೆರೆದು ಕಂಡಾಗ ಪಾದ । ದ್ವಂದ್ವದೊಳು ಪೊರಳುವ ಬಿಡೌಜನ । ನಂದದಿಂತೆಗೆಯುತ್ತ ಮೈದಡವುತ್ತ ಕುಳ್ಳಿರಿಸಿ । ಬಂದೆಯಾ ಸೌಭಾಗ್ಯನಿಧಿ ನೀನಿಂದೆ ಸಗಿದುಪಚಾರ ಪೂಜೆಗೆ । ಳಂದಕಿದಕೊ ಪ್ರಸಾದವೆಂದಿಂತೆಂದ ವಿಧಿ ಪರಸಿ ॥ ೧ ॥

ದೇಶಿ : ಏಕ

ಓಹೋ ಬಲ್ ಬಲಾ ಸುರಪಾಲಕ ಮೆಚ್ಚಿದೆ ॥ ಪಲ್ಲ ॥ ಕಾಮಿತ ವಂತೇ । ತಾಮಸ ಹೊರತೇ । ಪ್ರೇಮದಿ ಕೊಡುವೆ ಸು । ತ್ರಾಮನೆ ಘನತೆ ॥ ೧ ॥ ಮನುವಿರುವನಕಾ । ನಿನಗಿದು ನಾಕ । ಘನತೆಯ ನಾಳು ಶ್ರೀಧನದತಿ ರೀಕಾ ॥ ೨ ॥ ಸಂದುದೇ ಬಯಕೇ ನಿಂದಿರಲ್ಯಾಕೆ ॥ ಬಂದಡೆ ಭಯ ಗೋ । ವಿಂದ ಬೆಂಬಲಕೆ ॥ ೩ ॥

ಕಂದ

ಸರಸಿಜ ಭವನಿಂತೆನಲುಂ । ಹರುಷದಿ ಮಣಿದು ಪುರಂದರ ನಿಜಪುರಿ ಗೈದಲ್ । ಹರಿಜ ಕರಾಗ್ರದ ಜಲಮಂ । ಧರೆಗಿಡಲಾಗಳ್ ಪುಟ್ಟಿದ ತಾನೋರ್ವ ಭಟಂ ॥ ೧ ॥

ಪಂತುವರಾಳಿ : ಮಟ್ಟೆ

ಜಡಜಸಖ ಕುಲೇಂದ್ರ ಕೇಳು । ವಡನೆ ಪುಟ್ಟಿದಾತ ವಿಲಯ । ಮೃಡನ ತೆರದಿ ಘುಡುಘುಡಿಸುತ । ಅಡಿಯ ಮೆಟ್ಟುತಾ । ನುಡಿದ ಸಪ್ತಸಾಗರ ಗಳ । ಕುಡಿವೆ ತೃಷೆಗೆ ಭುವನತ್ರಯವ । ಜಡಿವೆ ಜಠರಕೆನ್ನ ಹಸಿವ ತಡೆಯಲಾರೆ ತಾ ॥ ೧ ॥ ಎಂದು ಗಜರಿ ನಾಲ್ದೆಸೆಗಳ ॥ ನಿಂದು ನೋಡಿ ವಿಧಿಯ ಚೆಲುವ । ನಂದನಕ್ಕೆ ಲಂಘಿಸುತ್ತಲಂದು ಸತ್ವರಾ । ದಿಂದ ಕದಳಿ ದ್ರಾಕ್ಷೆ ಮಾ । ಕಂದ ಪಲ್ಯ ಫಲಗಳೆಲ್ಲ । ತಿಂದು ಬಂದು ಬೆದರಿಸಿದ ಮು । ನೀಂದ್ರರೆಲ್ಲರ ॥ ೨ ॥ ಜಡಜ

Scanned by CamScanner

ಭಸಿಕರಂಗ ಸ್ಮರ । ಭಂಗ ಭವಾನ್ಯಾ । ಲಿಂಗಿತಾಂಗ ಶಿವ ॥ ಶ್ರೀ ॥ ೧ ॥ ಕುಂದ ಕುಟ್ಮಳದಂತ । ಮಂದಹಾಸಾನ್ವಿತ । ಸುಂದರನನುತಿ ಬಂದು ವಿಖ್ಯಾತ । ಇಂದು ಕಲಾಧರನಂದೀ ಧ್ವಜವರ । ಸೌಂದರಾರಾ ಎನ್ನ ತಂದೆ ಜಗನ್ಮಯ ॥ ೨ ॥

ಭಾಮಿನಿ

ಪುಷ್ಕರನನಿಂತೆಂದು ಪ್ರಾರ್ಥಿಸಿ । ಪುಷ್ಕರೋಪಮ ಕಾಯಕಪಿ ಮೇಣ್ । ಪುಷ್ಕರವ ಕಂಡೊಂದನಿಳಿದದ ಮುಳುಗೆ ಶಿವಯೆಂದೂ ॥ ಪುಷ್ಕರಾಂಬಕಿಯಾದ ನಾಕ್ಷಣ । ಪುಷ್ಕರದಿದಡವೇರಿ ಶೋಭಿಸೆ । ಪುಷ್ಕರಧ್ವಜ ಬಂದು ಕಂಡುರೆ ನುಡಿಸಿದನು ನಿಂದು ॥ ೧ ॥

ಸೌರಾಷ್ಟ್ರ : ಏಕ

ವಾರಿಜಾಕ್ಷಿ ವೈಯ್ಯಾರಿ ಸುಗುಣೆ ಜಾಣೆ । ಸೋತೆನು ನಿನ್ನಾಣೆ ॥ ವಾ ॥ ಪ. ॥ ಉಡುರಾಜನು ನಿನ್ನಾನನವೊ ಭಳಿರೆ । ನಳಿತೋಳುಗಳರರೇ । ಜಡಜ ನಾಳವೊ । ಭೋಗದ ಕಡ ಬಾರೆ । ಪೀನ ನಿಖರ್ಣ ಖರೆ । ಪಿಡಿನಡುವಿನ ನವ ಹುಡುಗಿ ವಹವ್ವಾರೆ । ಕಡುಪುಗಾರ್ತಿನಡೆಗೊಡೆನುಡಿ ತಡೆಯದೆ ॥ ವಾ ॥ ೧ ॥ ಭಾಸುರಾಂಗಿ ಸತ್‌ಕೇಶಿನಿಮೋಹನ್ನೆ । ಕನ್ನಡಿಯಾಕೆನ್ನೆ । ಸೂಸಿ ವೆಳ್‌ನಗೆಯ ಹುದಿದು ಸರಿಜೊನ್ನೆ । ದಾಡಿಂಬರದನೆ । ನಾಸಿಕ ಚಂಪಕವಲ್ಲವೆ ಶ್ರೀರನ್ನೆ । ಸರಿ ಸರಿ ಪಿಕಗಾನೆ । ಸೌಸವಗೋಲನ । ನೀ ಸತಿ ಪೆತ್ತ್ರೆಯೊ । ದೂಷರ ಬಿಡುಯಾಸರ ನುಡಿ ನುಡಿ ನುಡಿ ॥ ವಾ ॥ ಎನ್ನ ಭೋಗಿಕೆಂದೆನುತ ನಿನ್ನವನು । ಸೃಜಿಸಿದ ಕಮಲಜನು । ಕನ್ನೆ ಸಂಶಯ ಬಿಡದಿರು ನೀನಿನ್ನು ನಾನೆ ವಾಸವನು । ನಿನ್ನನಪ್ಪಿ ಮುದ್ದಾಡುತ ರಮಿಸುವೆನು । ಸುರತಕೆ ಬಾ ನೀನು । ಎನುತ ನಗೆಮೊಗ । ದಿಂ ನಲಿವುತ ನನ್ನಿಯೊಳಪ್ಪಿದ । ಡಂ ನೆರೆನುಡಿದಳು ॥ ವಾ ॥ ೩ ॥

ಶಂಕರಾಭರಣ : ರೂಪಕ

ನಿಲ್ಲು ನಿಲ್ ನಿಲ್ ನಿಲ್ಲು ದೂರ । ಬಲ್ಲೆ ಬಲ್ ಬಲ್ ಭಾಪು ವೀರ ॥ ಪ ॥ ಬಾರ್ಬಾರಿಯರ ಕನ್ನೆ ಎಮ । ರೀರ್ಬಗೆಗೊಲಿದಾತ । ಸಾರ್ಬಡಕೋತಿ ಸತಿಯ ನ್ನೊರ್ಬೆಯೊಳ್ಳೇನ್ಸುರತ ॥ ೧ ॥ ನಿಷ್ಕಪಟೆಯು ನಾ ಕೇಳ್ಸುರ । ಪುಷ್ಕರ ಪ್ರಖ್ಯಾತ । ನಿಷ್ಕಪಟಕ್ಕೀವೆಯಲ್ಲೈ ಫಲ । ನಿಷ್ಕವ ಸುರನಾಥ ॥ ೨ ॥

ಭಾಮಿನಿ

ಎಂದ ಭಾವಪಸರಿತು ಪುಟ್ಟಿದ । ಡಿಂದ್ರಗಾಕ್ಷಣ ಚಲಿಸಿರೇತಸ । ಪಿಂದುಮುಖಿ ವಾಲದಿಯದೆಸೆಗಂ ಬೀಳಲದರಿಂದ ॥ ಕಂದ ಜನಿಸಿದಡಾಗ ಮೂಲಿಕೆ । ಯೊಂದವನ ಗಳಕಿಕ್ಕಿ ತತ್ಸುತಿ । ಗಂದು ಕೊಟ್ಟಾತ್ಮಜನನಭ್ರಕೆ ಹ್ಯಾದನ ಮರೇಂದ್ರ ॥ ೧ ॥

ಕಂದ

ಮತ್ತಾ ಸತಿಯಿರಲಲ್ಲಿ ವಿ । ಯತ್ತಳ ಮಣಿಯನವಲೋಕಿಸಿ ಭ್ರಮೆ ಯಿಂದವಳಂ । ಮತ್ತೆ ರಥಾಂಗಕೆ ಕಾಮಿಸಿ । ಹತ್ತಿರೆ ಬಂದೆಂದಂ ಸವಿನುಡಿ ಬಿಡದಾಗಳ್ ॥ ೧ ॥

ಖಮಾಚು : ಏಕ

ಮಾತನಾಡೆ ಮಂದಯಾನೆ ಸೋತೆ ಕಾಣೆ ಮಾರನಾನೇ । ಜಾತಿಕೋಮಲ ನವನೂತನೆ ಬಾ ಝಷ । ಕೇತನ ಮೀರುವ ಪಾಥೋರುಪಮುಖಿ ॥ ಪಲ್ಲ ॥ ಮತ್ತೇಭಗಾಮಿನಿ ಕೇಳು । ನಿತ್ತೆ ನಾ ನಭಾಂಗಣದೊಳು । ಹತ್ತೆರಡು ರಾಶಿ ಗಳೊಳು । ನಿತ್ಯನಿತ್ಯ ಜಗವ ಬೆಳಗುವೆ । ನೀ ಕಮಲ ನಾರಿ । ವೃತ್ತ ಕುಚಗಳಲ್ಲಿ ತೊಳಗುವೆ । ಮೂದೇವರೊಲುಮೆ ಉತ್ತಮಾಂಗದೊಳಗೆ ತಳೆಯುವೆ । ಮನ ಸೋತು ನಿಲ್ಲ । ದಿತ್ತ ಬಂದೆ ನಲ್ಲೆ ಮೋಹನ್ನೇ । ದಿಕ್ಪಾಲರನ್ನಿಂ । ದತ್ತಲೆಂದು ತಿಳಿಯೆ ಬಾ ಕನ್ನೆ ॥ ಮದ್ರಾಣಿಯಾಗಿ । ಚಿತ್ತಿಣಿ ನೀನಿಹುದು ಸಂಪನ್ನೆ । ಕನ್ನಡಿಯ ಕೆನ್ನೆ । ಚಿತ್ತದಿ ಬಯಸುವ ವಿವಿಧ ಪದಾರ್ಥವ । ನಿತ್ತಲ್ಲಿಗೆ ನಾ ತರಿಸುವೆ । ಜಲ್ತಾರಿ ಶಾಲೆಯ ನುಡಿಸರೀವೆ । ಪುಥ್ಥಳಿ ಚಿನ್ನವ ತೊಡಿಸುವೆ । ಹತ್ತಿರೆ ಬಂದೆಳೆ । ಮುತ್ತುಗಳಿತ್ತೆದೆಗೊತ್ತು ಕುಚವ ಬೇ । ರೆತ್ತಲು ನೆನಸದೇ ॥ ಮಾ ॥ ೧ ॥ ಪುಲ್ಲೇ ಗಂಗಳ ಬಾಲೆ । ಮಲ್ಲಿಕಾಸ್ಮಿತಾಸುಶೀಲೆ । ಮಲ್ಲ ಭಟನೆನ್ನ ಮೇಲೆ । ಬಲ್ಲಿದ ತ್ರೈಮೂರ್ತಿಗಳು ನಿಂದು । ಗೆಲರಲೆಗೆ ಕಬ್ಬು । ಬಿಲ್ಲನೊಬ್ಬ ಧೈರ್ಯಗೊಂಡಿಂದು । ಮಾರಾಂತು ಧುರಕೆ । ನಿನ್ನನುಳಿದು ಗೆಲಲಿಂದು ಕೈಲಾಗದೆಂದು । ಮಲ್ಲಾನೆ ಕೈಯೊಡ್ಡಿ ಬೇಡುವೆ । ಬೆಂಬಲಕೆ ಬಾ ನೀ । ಮಲ್ಲಿಗೆ ಮುಗ್ಗಗಳ ಮುಡಿಸುವೆ ಮನುಮಥನ ಗೆಲುವೆ । ನಿಲ್ಲಲಾರೆ ಮನ । ತಲ್ಲಣಿಸುತಲಿದೆ । ಪುಲ್ಲಾನೆ ಮಮ ಶೃಂಗಾರಿ । ಪುಲ್ಲ ಮುಗುಳ ಮೊಲೆ ಭಂಗಾರೀ । ವಲ್ಲುವ ಕಟಿತಟಕೆ ಸಾರಿ । ಅಲ್ಲಲ್ಲಿಗೆ ಮನದಲ್ಲೆರಡೆಣಿಸದೆ । ಸಲ್ಲಿಸು ಬಯಕೆಯ ನಲ್ಲೆ ಸುಮಂಗಲೆ ॥ ಮಾ ॥ ೨ ॥

ಭಾಮಿನಿ

ಇಂತು ಪೇಳುತ ಪೇಳುತಲೆ ರವಿ । ಕಾಂತೆಯಳ ಬಿಗಿದಪ್ಪಲಾಕ್ಷಣ । ಸಂತು ಮನಸಾಭೀಪ್ಸ ನಲ್ಲೆಯ ಗ್ರೀವ ದೆಸೆಯಿಂದ ॥ ಕಂತುಸನ್ನಿಭನುದಿಸಲಾಕೆಗೆ । ನಿಂತು ತೋರಿಸಿ ಮಗನ ಕೊಟ್ಟು ಕೃ । ತಾಂತಪಿತ ನಭಕಡರಿದನು ಬಲು ತೀವ್ರಗತಿಯಿಂದ ॥ ೧ ॥

ಕಲ್ಯಾಣಿ : ಝಂಪೆ

ಮೃಗನೇತ್ರೆ ಮತ್ತೆ ಕೆಲವು ದಿನ । ಮಿರಲಧಿಕ ಬೇರೊಂದು । ಸೊಗ ಯಿಸುವ ಸರಸಿಯೊಳು ಮಿಂದಡಾಗ ॥ ದಿಗಿಲೆನ್ನ ಮೊದಲ ರೂ । ಪೊಗೆದು ಶ್ರೀಕಂಠ ಎನೆ । ಮೃಗಧರನು ಕಾಣಿಸಿಕೊಂಡೆಂದನಾಗ ॥ ೧ ॥

Scanned by CamScanner

ನಾದನಾಮಕ್ರಿಯೆ : ಅಷ್ಟ

ಅಹಹ ಮೆಚ್ಚಿದೆ ನಿನಗೆಲೊ ವೀರ । ನೀನು । ದ್ರುಹಿಣನಂದನನಲ್ಲೊ ಭಲೆ ಶೂರ ॥ ಪ. ॥ ಬಲವಾದ ತಪವ ಮಾಡಿದೆಯಲ್ಲ । ನೀನು । ಚೆಲುವ ಕಾಯುವ ದಂಡಿಸಿದು ಸಲ್ಲ । ವಲಿದು ಕಾಮಿತವ ಕೊಡುವೆ ಬಾಲ । ನೀನು ಲಲನೆಯಾದುದೆ ಲೇಸುಯೊಲವಲ ॥ ಅ ॥ ೧ ॥ ಇಂದ್ರರೇತಸ ವಾಲಿದಲಿ ಬಿದ್ದು । ಈತ ಕಂದ ನಾದನು ವಾಲಿ ಎನುತಿಂದು । ಮುಂದೆ ನಾಮವನಿಟ್ಟೆ ನೆಲೆನಿಂದು । ಸೂರ್ಯನಿಂದು ಮುಟ್ಟಿದರೆ ಕಂತದಿ ಬಂದು ॥ ಅ ॥ ೨ ॥ ಖ್ಯಾತನಾದನು ಸುಗ್ರೀವನೀತ ಈಗ । ಜಾತದ್ವಯುವ ಸಾಕಿಕೊಳೊನೀತ । ಜಾತಿವೈಷ್ಣವನವ್ವೆ ಗುಣವಂತ ನಿನಗೆ । ಜಾತೆಯಾಹಳು ಮುಂದಂಜನೆ ಖ್ಯಾತ ॥ ಅ ॥ ೩ ॥

ಭಾಮಿನಿ

ಕಾಲಿಗೆರಗುತ ಶಿವನ ಗೋಲಾಂ । ಗೂಲಪತಿ ಬೀಳ್ಕೊಂಡು ಮಿಗೆಯಾ । ಬಾಲಕರ ಕೊಂಡ್ಶೈದಿ ಪೊಕ್ಕನು ತನ್ನ ಮಂದಿರವ ॥ ಮೇಲೆ ತನಗಾದ ಪ್ರಪಂಚವ । ಬಾಲಕರ ಜನನಗಳ ಮಿಗೆ ವಿ । ಶಾಲ ಚಾರಿತ್ರವನು ಜಾಂಬವಗೊರದ ಕಪಿ ಪ್ರಭವ ॥ ೧ ॥

ಪರಿವರ್ಧಿನಿಷಟ್ಪದಿ

ತರಣಿಕುಲಜ ಕೇಳ್ ಋಕ್ಷಿಯೆನಿಪ ಕಪಿಯು । ತರುಣಿಗುದಿಸಿದಳು ಹರನ ಕಟಾಕ್ಷದೊ । ಉರುಗುಣ ವಿಲಸಿತೆಯಂಜನೆ ಎಂಬುವ ಬಾಲೆ ಸತ್ಕೋಮಲೆಯು ॥೧॥ ಉರುತರ ಸಂತಸ ಶರಧಿಯೊಳಾಡುತ । ಲಿರಲೊಂದಿನ ಪಿತನಿದಿರೊಳು ಬಾಲರು ಸರಸಕುಶಲಗತಿ । ಮೆರೆವುತಲಾಡುತ । ತೋರಿದರತಿ ರುಚಿಯು ॥ ೧ ॥

ಮುಖಾರಿ : ಏಕ

ಬಾಲಲೀಲೆಯು ತೋರ್ದರಾಗ । ಜನಕಗೆ ಬೇಗ । ಬಾಲಲೀಲೆಯ ತೋರ್ದರಾಗ । ಮೂಲೋಕದ ಜನರಾಲಿಸಿ ಕೋರೈಸಲು । ವಾಲಿಸುಗ್ರೀವರು ವಿ । ಶಾಲತೆಯಿಂದಲಿ ॥ ಬಾ ॥ ಪಲ್ಲ ॥ ಚಂಡುಬೊಗರಿ ಚಿನಿಕೋಲ । ಆಲದುಯ್ಯಾಲ । ಗುಂಡಾಟ ಓಟದಾಟಗಳ । ಗಿಡುಗನಾಟಗಳ । ಕಂಡು ಕಣ್ಮುಚ್ಚಿ ಬಿಚ್ಚುಗಳ । ನಾಡುತ್ತ ಬಹಳ । ಪುಂಡರು ಗೆಣೆಯರ । ತಂಡ ವಿಭಾಗಿಸಿ । ಕೊಂಡಾಡುತ ಹೊಡ ಕೊಂಡಸ್ತ್ರಮಾಯಕೆ । ಚಂಡಪರಾಕ್ರಮರಂಡಲೆಯುತ ಪೋಗಿ । ಕಂಡಪ್ಪಗೆ ದೂರಿ ಕೊಂಡೋರ್ವೋರ್ವರು ॥ ಬಾ ॥ ೧ ॥ ಅಣ್ಣಾ ಬಡಿದ ನೋಡು ಚಿನ್ನ । ಎನ್ನಪ್ಪ ನಿನ್ನ । ಕಣ್ಣಿಗೆ ಸೊಗಸೆ ನಾನಿನ್ನ । ನಾಳೆಯಿಂ ಮುನ್ನ । ದೊಣ್ಣೆಯೊಳ್ಪೊಯ್ವ ನೀ ಎನ್ನ । ಬೈಬೇಡ ರನ್ನ । ಎನ್ನಿಂದಾಟಗಳೊಳಣ್ಣನೆ ಭಲ್ ಬಲ । ಸಣ್ಣವ ನೆನ್ನನು । ಮಣ್ಣು ತಿನ್ನಿಸಿ ದೊಡ್ಡ । ತಿಣ್ಣೆಯಿಂ ಕೆಳಯಿಂತೆಮಿಣ್ಣನೆ ದೂಡುತ । ಬಣ್ಣಿಸಿ ನಗುವದು । ಗಿಣ್ಣತನವೆ ಇದು ॥ ಬಾ ॥ ೨ ॥ ಅಪ್ಪಾ ಎನ್ನಪ್ಪ ಕೇಳಪ್ಪ । ಸುಗ್ರೀವನ ತಪ್ಪ । ಒಪ್ಪಿಸಿ ಕೊಡುವೆ ನೀ ಕೆಪ್ಪ ಬೈದಲ್ಲದೆ ದಪ್ಪ ದಪ್ಪದ

ಕೋಡುಗಳಿಪ್ಪ । ಹೆಮ್ಮರಗಳಲ್ವ । ತಪ್ಪದೆನ್ನಯ ಶಿರ । ಕಪ್ಪಳಿಸಿದನೆದೆ ಜಿಪ್ಪಾಗಿದೆ ತಲೆ ತಪ್ಪಿತ್ತೆನಗಿದು । ಒಪ್ಪಿಪ ದೂರನು ತಪ್ಪೊ ಸರಿಯೊ ನೋ । ಡಪ್ಪ ಎನುತ ವಾಲಿ । ಧಪ್ಪನೆ ಮಣಿದ ॥ ಬಾ ॥ ೩ ॥

ಭಾಮಿನಿ

ಮಕ್ಕಳಾಡಿದ ಮಕ್ಕಳಾಟಿಕೆ । ಗಕ್ಕಜದಿ ಮುದ್ದಾಡಿ ನಾಳೆ ದಿ । ನಕ್ಕೆ ಸೊಕ್ಕಿದಡೆಕ್ಕಸಕ್ಕಕೆ ತಕ್ಕ ಕಲಿಸುವೆನು ॥ ಮಿಕ್ಕದಿಹುದೆಂದವರ ಕಳುಹುತ । ಚೊಕ್ಕ ಭೋಗದೊಳೀರ್ದನತ್ತಲು । ತಕ್ಕಜಸ್ತನಯುಗ್ಮೆಯಂಜನೆ ಬಗೆಯ ಬಣ್ಣಿಪೆನು ॥ ೧ ॥

ಕಂದ

ಸ್ಫುರಿತಸಜವ್ವನದಿಂದಂ । ಬುರುಹದಳಾಂಬಕಿಯಂತಸಿ ಪುರದೊಳ ಗೊಂದಿನ ಸ್ಮರಶರ । ಹುರಿಯಿಂ ಬಾಡಿರೆ ಪರಿಯಂದೋರ್ವ ಸಖೀಮಣಿ ನುಡಿಸಿದಳಾಗಳ್ ॥ ೧ ॥

ಕಲ್ಯಾಣಿ : ರೂಪಕ

ಇಂದುಮುಖಿ । ಮಂದಗಮನೆ । ಸುಂದರೀಮಣಿ । ಮಂದಹಾಸ । ಕುಂದಿದ್ಯಾತ । ಕಿಂದು ಭಾಮಿನಿ ॥ ಪಲ್ಲ ॥ ಶ್ರೀಗಂಧ ಕಸ್ತೂರಿ ಚಂದನಂಗಳೊಂದ ನೊಲ್ಲೆಯ । ಮಂದರಾ ಮಾಲಿಕೆ ತಂದೆನಿದ ಕೊ । ಳ್ಳೆಂದು ಸೂಡೆಯ ॥ ೧ ॥ ಸೈ । ಕೊರಳ ಕಂಠಿ ಸರ ಪದಕಗಳಿಂದ ಧರಿಸ ಬಾರದೆ । ಕುರುಳ ತಿದ್ದಿ । ಮೆರಸಿ ಬುದ್ಧಿ । ಯೊರೆ ಕೃಪಾನಿಧೆ ॥ ೨ ॥ ಈ ಸಂಗತೆಯರು ಭಂಗಿಸಿದರೆ । ತುಂಗ ಕುಚಭರೇ । ಅಂಗವಹುದನಂಗ ವ್ಯಥೆನಿಂ । ನಂಗದಲಿ ಖರೆ ॥ ೩ ॥

ಬೇಗಡೆ : ರೂಪಕ

ಸಲಿಲಜಾಕ್ಷಿ ಸಖಿಯೆ ಕೇಳಮ್ಮ । ಎನ್ನಂತರಂಗ । ನೆಲೆಯನರಿವೆಸಾಕು ಸಾಕಮ್ಮ ॥ ಸಲಿ ॥ ಪ ॥ ಕಲಿತಜವ್ವನವನು ಕಂಡು । ಜಲಜಶರನು ಹಗೆಯ ಗೊಂಡು ನಲಿದು ತೂಗಿ ಝೇಂಕರಿಸುತ । ನೆಲೆಗೆ ಬಾಣ ಬಿಟ್ಟನುಬ್ಬುತಾ । ಸಲಿಲ ॥ ಅನುಪಲ್ಲ ॥ ಹಾರಪದಕ ಶವವಪ್ಪುದು । ಹೊರಲಾರೆ ಕಿವಿಗೆ । ಚಾರು ಭ್ರಮರಗಾನ ತಲ್ಪದು । ಪಾರಣೆಯಲಿ ನಿಲದು ಮನಸು । ಬೇರೆ ಹಲವು ಬಗೆಯ ತಿನಿಸು । ಸೇರದೆನಗಿನ್ನೇನು ಹಗೆಯೊ । ಮಾರದೇವಗೇನ್ ಘನತೆಯೊ ॥ ಸಲಿಲ ಜಾ ॥ ೧ ॥ ವಲ್ಲೆ ಸುಪ್ಪತ್ತಿಗೆಯೊಳೊರಗಿರೆ ॥ ಬಂದಪ್ಪಿಕೊಂಡು । ಲಲ್ಲೆಗೈದು ನೆರವ ಹಾಗಿಹರೆ । ಝಲ್ಲೆನುತ್ತಲಳ್ತಿಯಿದ್ದೆ ನಲ್ಲೆ ಕನಸಿನಲ್ಲಿ ಸುರತ । ವೆಲ್ಲಸಂತು ತೊಡೆ ಗಳಿಂತು । ನಿಲ್ಲವಮ್ಮ ಕದನವಾಂತು ॥ ಸ ॥ ೨ ॥ ಗುಟ್ಟನರಿಯದವಳೆ ನೀ ಸಖಿ । ಈ ಹೆಣ್ಣು ಜನ್ಮ ಕಷ್ಟವಹುದೆ । ಧಿಟ್ಟೆಶಶಿಮುಖಿ । ಕೆಟ್ಟಕಾರ್ಯದಂತರಂಗ । ಗುಟ್ಟುಗಳ ಬಲ್ಲವರೆ ಬಲ್ಲ । ಳಿಷ್ಟು ಪರಿಹರವನು ಹೇಳಿ । ಗುಟ್ಟನುಳಿಸೆ ಮೋಹನಾಂಗಿ ॥ ಸ ॥ ೩ ॥

ತೋಡಿ : ಅಷ್ಟ

ನಾನೇನ ಮಾಡಲಮ್ಮಾ । ಪ್ರಾಯದೊಳು ನಾ । ಮೈನೆರದಾಗೊಂದಿನ । ಮೀನಾಂಕನುಪಟಳಕಾನಲಾರದೆ ನಿದ್ದೆ । ಗಾನೆದ್ದುವರನೆಂದು ಮೈನೆರಳಪ್ಪಿದೆ ॥ ನಾ ॥ ಪ ॥ ಬಣ್ಣದ ಮಾತಲ್ಲಿದು । ಬಾರದು ನಿದ್ದೆ । ಕಣ್ಣಿಗೆ ಸಹಜವಿದು । ಉಣ್ಣಲೊಪ್ಪದು ಹಲ । ವೆಣಿಕೆ ತೋರ್ಪದು । ಕಣ್ಣಿರೆ ಸ್ಮರನು ಮು । ಕ್ಕಣ್ಣನೊಳಳಿವನೆ ॥ ಮತ್ತೇಭಗಮನೆ ಬಾಲೆ । ಮುತ್ತಿಸರ । ಕಿತ್ತೊಂದು ಪದಕ ಕೇಳೆ । ತೆತ್ತಕೋವಿದ ಸೊಬಗೆತ್ತಿನೊಡನೆ ಹೋಗು । ಹೆತ್ತವಗರುಹು ನಿ । ವೃತ್ತಿ ಸದಿರಕಾಣೆ ॥ ೨ ॥

ಕಂದ

ಇಂತೆನೆ ಸವಿನುಡಿಗೊಲಿದಾ । ಕಾಂತೆ ಶಿರೋಮಣಿಯುಳ್ಕುತ ಭಳ್ಕುತ ಭರದಿಂ ॥ ಕಂತುವಿನರಗಿಣಿಯೆನೆ ಬಂ । ದುಂ ತವೆ ಪಿತನಡಿದಾವರೆಗಂ ಮಣಿಯಲ ವಳ್ ॥ ೧ ॥

ಸಾಂಗತ್ಯ : ರೂಪಕ

ಮಗಳೆ ಬಾರಮ್ಮ ಮನ್ಮಥನರಗಿಣಿ ಮುದ್ದು । ಮೊಗಚಂದ್ರನಂತಿಪ್ಪ ದುಳಿದು । ದುಗುಡಾದಿ ಕಂದಿದಂತಿಹುದೇನು ಕಾರಣ ಮೃಗಮದಗಂಧಿ ಪೇಳೆಂದು ॥ ೧ ॥ ವಸವಂಡದೊಳು ತರು । ವಿಸರಲತಾವಳಿ । ಪೊಸದಳಿಕನೆ ತಳಿದಂತೆ । ಕುಸುಮಾಯತಾಕ್ಷಿ ಶೋಭಿಸುವ ಜವ್ವನದೇಳ್ಗೆ । ಪಸರಿಸಿತಹುದೆ ಸಂಜಾತೆ ॥ ೨ ॥ ಸ್ಮರನೆಂಬ ಬೇಡ ಬೇಟೆಯನಾಡದಿರ ನಿನ್ನ । ಪರಿಶೋಭಿಪಂಗಕಾನದಿ । ಅರಿತೆ ನಾನಂತಸ್ಥ । ತರಳೆ ಬಂದುದ ಪೇಳೆಂ । ದೊರೆಯಲೆಂದಳು ನಾಚಿ ಮುದದಿ ॥ ೩ ॥

ನವರೋಜು : ಏಕ

ತಾತ ಕಾರುಣ್ಯದೊಳು । ಎನ್ನ । ಮಾತಲಾಲಿಸಿ ಕೇಳು । ಬೂತಾಡಿದಳೆಂದು । ಖಾತಿಗೊಳದಿರ್ವಿ । ಖ್ಯಾತನೆ ಸರಸದ । ಮಾತೊಂದನು ಕೇಳ್ । ॥ ಅನುಪಲ್ಲ ॥ ಕೋಮಳೆಗಿಂದುವೆ ಸಾರಾ । ಘನ । ಕೋಮಲೆಗೆ ಬಲ ನೀರಾಕಾಮಿಸಿ ತೊಡಗಿದ । ಕಾಮವ್ರತಕೆ ನಿ । ನಾಮಹನೋಂಪ್ರಿಯ ನೇಮಿಸಲಿಲ್ಲವು ॥ ಪಾತ್ರೆಯ ಮೀರಲು ನೀರೂ । ಮತ್ತೆ । ಮಾತಿನೊಳೇನ್ಫಲವುಸುರು । ಭೂತಳದೊಳು ಘನ । ನೀತಿ ಸುಪ್ರೌಢನೆ । ಪ್ರೀತಿಯಿರಲಿ ತನುಜಾತೆಯೊಳನುದಿನಾ ॥ ತಾ ॥ ೨ ॥

ಭಾಮಿನಿ

ಮಗಳೆ ನಿನ್ನಯ ಭಾವವರಿತೆನು । ಮಿಗೆ ಮನೋರಥ ಸಲಿಸುವೆನು ನಡೆ । ಮುಗುದೆ ಮನೆಗೆಂದಪ್ಪಿ ಮುದ್ದಿಸಿ ಕಳುಹಿ ಯೋಚಿಸುತ ॥ ಸುಗುಣನಿಧಿ ತಾನೀರ್ದಡನ್ನೆಗೆ । ಹೊಗರುಗುವ ಜವ್ವನದ ಕೇಸರಿ । ಗಗನಮಣಿಯಂತೈದಿ ನಮಿಸಿದಡೆಂದ ಮನ್ನಿಸುತ ॥ ೧ ॥

ಮಾಂಡ್ : ಏಕ

ಆವ ದೇಶದಿಂದ ಬಂದೆ । ವಾನರೇಂದ್ರ । ಹೆತ್ತ । ಳಾವಳ್ಳೆ ನಿನ್ನಪ್ಪನಾರೊ । ವಾನರೇಂದ್ರ । ಯಾವ ಕಾರ್ಯವಿಲ್ಲಿ ನಿನಗೆ । ವಾನರೇಂದ್ರ । ನಾಮವಾವುದೈಯ್ಯ ನಿನಗೆ ವೀರ । ವಾನರೇಂದ್ರ ॥ ೧ ॥ ಮೃಡಸರೋಜ ಭವರ ಬಲ್ಲೆಲ । ವಾನರೇಂದ್ರ । ನಮ್ಮ । ಕಡೆ ವಿಚಾರಗೊಳದೆ ಬಂದ್ಯೆ । ವಾನರೇಂದ್ರ । ಹುಡುಗ ಬುದ್ಧಿಯಡಗಿ ಬಿದ್ದಿ । ವಾನರೇಂದ್ರ । ಬೇಗ । ನುಡಿಯುತ್ತರವನೆನಲೆಂದನು ವಾನರೇಂದ್ರ ॥ ೨ ॥

ಮಧ್ಯಮಾವತಿ : ಅಷ್ಟ

ಚಿತ್ತಾವಧಾನ ಕಪೀಂದ್ರಮತ್ಕಥನ । ಬಿತ್ತರಿಸುವೆ ಕೇಳಿದರೆ ಬಲು ವ್ಯಥನ ॥ ಚಿತ್ತ ॥ ಸಿತದ್ವೀಪದೊಳು ಹಿಂದೆ । ಪಿತಧರ್ಮ ಕೇಸರಿ । ಸತಿಚಿತ್ತಿನಿಯರಿಂಗೆ । ಸುತನಾದೆ ವೈರಾಗ್ಯ । ಮದದೊಳೆನ್ನ ಬಿಟ್ಟರು । ಮುಕಾಂಬಿಕೆ । ಶಿತಿಕಂಠದರ್ಯಯವಿಟ್ಟರು । ಕೇಸರಿ ಎಂ । ಬ ನಾಮವನಿಟ್ಟರು । ರಕ್ಷಿಸಲು ಮೇಣ್ ಕ್ಷಿತಿ ಎಂಬೋರ್ವೆಯೊಳಿತ್ತ । ಪೋದರಂದವರು ॥ ಚಿ ॥ ೧ । ಚಿರಕಾಲ ಪೊರೆಯೆ ಮೈಸಿರಿ ಏರಿತೆನಗಾಗ । ಪೊರದವ್ವೆ ಜರೆ ಏರಿ ಸುರಲೋಕಕೈದೆನ । ಕರಕರದಳಲುತ್ತಲಿ । ಪಾರಿದರಜಪುರ ಕವಳಕೈದುತ್ತಲಿ । ಬೆಳಗಲೆನ್ನ । ಪರಿ ಕಂಡು ಮರುಗುತ್ತಲಿ । ವಾಣೀವರ । ನೊರದ ಕಿಷ್ಕಿಂಧೆಗೆ ತೆರಳು ನೀನೆನುತಲಿ ॥ ಚಿ ॥ ೨ ॥

ವಾರ್ಧಿಕ

ಪದುಮಭವನಿನಿತಲ್ಲದೆಂದ ಕೇಳ್ ನಿನ್ನ ಸುತೆ । ಮದನಬಾಣಾಯಂಜನೆ ಎನಗೆ ಸತಿಯೆಂದನದರಿಂದ । ಬಂದೆನಿದು ಮತ್ಕಾರ್ಯ ಲಾಲಿಚದುರಯನಲಾನಂದದಿ ॥ ನಿಧಿ ಕಂಡಬೈಕ್ಷಕಣ ಸ್ವಾತಿಯಂ ನೆನದ ಚಾತಿದುವೊ ತೊರದಿನೆಯನಂ ಕಂಡಂಬುಜಾಂಬಕಿಯೊ ಮಧುಮಾಧವಿಯನಾಂತ ವತ್ಸರವೊ ಎಂಬಂತೆ ಭುಲ್ಲೈಸಿ ಋಕ್ಷ ಮನದಿ ॥ ೧ ॥

ಮುಖಾರಿ : ಏಕ

ಅಹಹ ಮೆಚ್ಚಿದೆ ಮೆಚ್ಚಿದೆ ಭಳಿರೆ । ಈ ಮಾತಿಗರರೇ ಅಹಹ ಮೆಚ್ಚಿದೆ ಮೆಚ್ಚಿದೆ ಭಳಿರೆ । ಬಹುರೋಗಿಗೆ ಕ್ಷೀರ । ಸಹಸದಿ ಭೈಷಜ । ವೈಹಿಶಿದ ತೆರವಾ । ತ್ತಹಹ ಶಾಭಾಸು ॥ ೧ ॥ ಊರ್ವಿಮಂಡಲದೊಳಗೆಲ್ಲ । ಮತ್ತನುಜೆಗಾಳ್ವ ಗರ್ವಿ ಸುಂದರರೊಬ್ಬರಿಲ್ಲ । ಕರ್ವನೆ ದೊರಕಿಸಿ । ನಿರ್ವಹಿಸಿದನು । ಕೋರ್ವನೆ ಬರಲು ಸು । ಪರ್ವಣೀಶನಾ ॥ ೨ ॥ ಅರ್ಕಸನ್ನಿಭ ಸುಂದರಾಂಗ । ಮಹಮ್ಮಈತ । ದೋಃಕೋರ್ದಂಡ ಭುಜ ಬಲೋತ್ತುಂಗ । ನೂರ್ಕಾಲದ ತಪ । ಮಾರ್ಕೊಳಿಸಿತು ಸುತೆ । ಗಾರ್ಕೇಳುವದೇ । ನರ್ಕಿಪೆ ಮದುವೆಯು ॥ ೩ ॥

Scanned by CamScanner

ವಾರ್ಧಿಕ

ಇಂತೆಂದು ನಿಶ್ಚೈಸಿ ನೆಂಟರೆಲ್ಲರ ಬರಿಸಿ । ಕಾಂತೆಯರನುಂ ಕನ್ನೆಯಂಜನೆಯಲಂಕರಿಸಿ । ಸಂತೋಷವಮಂ ವೆರಸಿ ಯಾ ವರನ ಕುಳ್ಳಿರಿಸಿ ಮಂತ್ರೋಕ್ತ ವಿಧಿಯನರಸೀ । ಸಂತತಂ ಘನ ಸಹಸೀ ಮಗಳ ಧಾರೆಯ ಮುಗಿಸಿ । ಮಂತ್ರಾಕ್ಷತೆಯ ತಳಿಸಿ ಪೌರೋಹಿತರ ವಹಿಸಿ । ಸ್ವಂತದಿಂ ಸಲೆ ಪರಸಿ ಯಾರತಿಯ ತರೆ ಬೆಸಸಿ ನಿಂತಿರ್ದ ಸುಗುಣರಾಶಿ ॥ ೧ ॥

ಧವಳಾರ : ಏಕ

ಜಲಜಾಕ್ಷಿಯರೆಲ್ಲ ಸುಳಿದು । ಕಲಶ ಕುಚದ ಭಾರ ಕಳೆದು । ಕಲಶದ ಹರಿವಾಣದೊಳಂದು । ಜ್ವಲಿಸುವ ದಿವ್ಯಾರತಿಗಳ ತಂದು । ಜಲಜನಾಭನು ಪೂರೆಯಲಿ ವಧುವರರನೆಂ । ದುಲಿದೊಲಿದಲಸದೆ । ನಲಿಯುತ ಪಾಡುತ । ಜಲಜಾದಾರತೀಯ ಬೇಳಗಿಥೆ ॥ ಶೋಭಾನೆ ॥ ಕುಂಭಕುಟ್ಮಲರದನೆಯರು । ಮಂದಹಾಸದ ಹುಡುಗಿಯರು । ಅಂದು ಕಿರುಗೆಜ್ಜೆ ಝಣ ಝಣರೆನುತಾ । ವಂದುಮಿಡಿ । ಮೊಗೆಯ ತೋರಿಸುತ । ಬಂಧುರ ಶುಕಪಿಕದಂದದಿಗಾನಾ । ನಂದಾನಂದದಿ ಪಾಡುತ । ಕುಂದಣದಾರತೀಯ ಬೇಳಗಿರೆ ॥ ಶೋಭಾನೆ ॥ ನಾರಿ ರಂಜನೆಗೆಯಂಜನೆಗೆ । ಸಾರ ಮೈಸಿರಿಗೆ ಕೇಸರಿಗೆ । ಧಾರುಣಿಯ ತರ ಬಾಳುತ್ತ । ನಾರಾಯಣ ಪ್ರಿಯ ಸುತನ ಪಡವುತ । ಸೇರಿ ದಳಪತಿಗಳು ಸಾರದೊಳಿರಿ ಎಂದು । ಸಾರಿ ಸಾರಿ ಸರಿಯೇರಿಯಕ್ಷತೆಗಳ । ನೀರೆಯರು ತಳಿದು ಮಣಿದರು ॥ ಶೋಭಾನೆ ॥ ೩ ॥

ಭಾಮಿನಿ

ಧಾರುಣೀಶ್ವರ ಕೇಳು ಮದುವೆಗೆ । ಸೇರಿದನಿಬರನೆಲ್ಲ ಬಲು ಸ । ತ್ಕಾರದಿಂ ಬೀಳ್ಕೊಳಿಸಿ ತನುಸಂಭವೆಯ ತಕ್ಕೈಸಿ ॥ ಭೂರಿ ಬಳುವಳಿ ಕೊಟ್ಟು ಮನ್ನಿಸಿ । ಚಾರು ಜಾಮಾತನನು ಮೆರೆದಿರೆ । ಸೂರ್ಯಜಗೆ ಹರಿಸೂನು ಪೇಳಿದನಿಂತು ಹರಿಗ್ರಹಿಸಿ ॥ ೧ ॥

ಕೇದಾರಗೌಳ : ಝಂಪೆ

ತಪ್ಪು ಕೇಳೆನ್ನ ಸೊಲ್ಲ । ಪ್ರಾಯದೊಳು ಸುಮ್ಮನಿಹುದುಚಿತವಲ್ಲ । ಒಮ್ಮೆ ದಿಗ್ದೇಶವೆಲ್ಲ । ಸಂಚರಿಸಿ । ಸಮ್ಮುದದಿ ಬರಬೇಕಲ್ಲ ॥ ೧ ॥ ಅಣ್ಣ ಕೇಳಬಹುದು ಲೇಸು । ನಾನದನೆ । ಎಣ್ಣಿಸುತ್ತಿಹೆ ಶಭಾಸು । ತಿಣ್ಣ ಜವ್ವಗೆಲಿದು । ಅವರ ಎಳೆ ಹೆಣ್ಣುಗಳ ನೆರವನಲಿದು ॥ ೨ ॥ ತಕ್ಕುದೈ ನಿನ್ನ ಕಾರ್ಯ । ರಿಪುಗಳೆದೆ । ಗಿಕ್ಕುವೆನು ಶೌರ್ಯಗಿರಿಯ । ಮುಕ್ಕಣ್ಣ ಹೊಗಳಬೇಕು । ಏಳು ನಡೆ । ವಕ್ಕಣಿಸಲೇಕೆ ಠೀಕು ॥ ೩ ॥ ಆದಡಗ್ರಜ ಲಾಲಿಸು । ಪಿತನಿಗಿನಿ । ತೋದಿ ನಡೆಗೊಳಲು ಲೇಸು । ಐದೆಂಟು ವತ್ಸರಗಳ । ಕಳಿವ ನಾವ್ ಪೋದಲ್ಲಿ ಸರಿಯೆ ಪೇಳ ॥ ೪ ॥ ಸಹಜ ನೀನೆಂದ ಮಾತು । ಏಳಯ್ಯ ಸಹಸಿಪಿತನೆಡೆಗೆಂದೋತು । ಸಹಸಿಗಳು ಬಂದೆರಗುತ । ಪರಸೆ ಸುರ । ಮಹಿಭೃತಜನೆಂದ ಮಾತ ॥ ೫ ॥

ಕೇಂದಾರಗೌಳ : ಅಷ್ಟ

ತಾತ ಚಿತ್ತೈಸೆನ್ನ ಮಾತನು ಸಿತಪಕ್ಷ । ಶೀತಾಂಶುಕಲೆಗಳಂತೆ ಚೇತನ ದಿನ ದಿನ । ಕ್ಯಾತಿಶಯದೊಳೇಂ । ತೀತೆರ ತಿಳಿಯೋರಂತೆ ॥ ೧ ॥ ಮನೆಯೊಳು ಹೆಂಗಳೋಲ್ । ತನುಗೊಬ್ಬಿಯುಂಡಿರ । ಲನಕ ಸತ್ಫಲವಪ್ಪುದೆ ॥ ೨ ॥ ಆದರಿಂದ ಕೇಳಪ್ಪ । ಪದಿನಾಲ್ಕು ಭುವನವ । ಪದುಳಾದಿ ತಿರುಗುತ್ತಲಿ । ವದಗುವೆ ತಪ್ಪದೆ ಪದದೆಡೆಗೆನುತಲಿ । ಮುದದಿ ನಿಂದೀರ್ದ ವಾಲಿ ॥ ೩ ॥ ಅಣ್ಣನ ಮತವ ನಾನೆಣ್ಣಿಪೆ ಚಿತ್ತದಿ । ಸಣ್ಣವನರಿಕೆಯಿದು । ಬಣ್ಣಿಸದೊಂದನು । ವಿಣ್ಣನಾಜ್ಞಾಪಿಸು । ಪುಣ್ಯಾತ್ಮನೆನಲೊಲಿದು ॥ ೪ ॥ ತರಳರ ನುಡಿಗುಬ್ಬಿ । ಸರಿಯೆಂದು ಕೊಂಡಾಡಿ । ಯಂಡ ಕೈದಣಿಯಲಪ್ಪಿ । ದುರುಳರೆಂದೆನಿಸದೆ । ತ್ವರಿತಾದಿ ಬಹುದೆಂದು ಪರಸಿ ಬೀಳ್ಕೊಂಡರೊಪ್ಪಿ ॥ ೫ ॥

ಕಂದ

ಮಧುಹರ ಕೇಳೈ ಬಂದುದು । ಮಧುಕಾಲಂಕಾಮಿಗಳೆದೆ ಶೂಲಂಮಾಗಳ್ । ಮಧುರತೆಯಿಂದಾ ಕೇಸರಿ । ಮದಿರೇಕ್ಷಣೆ ಪ್ರಿಯೆಯುಜನೆಗೆಂದಂ ನುಡಿಗಳ್ ॥ ೧ ॥

ಕಲ್ಯಾಣಿ : ಏಕ

ನಾರಿ । ನವಮೋಹನಾಂಗಿ ಸುವಿಹಾರಿ । ವೈಯಾರಿ । ಸಾರಸಾಕ್ಷಿ ಕಂಠೀರವಗಾಮಿನಿ । ವಾರಣಾರಿ ಕಟಿ । ಕೀರ ಸುಭಾಷಿಣಿ ॥ ಪಲ್ಲ ॥ ಅಂಜನೆ । ಮನೋರಥ ಪ್ರಿಯತಮೆ । ರಂಜನೆ । ನಿತಂಬಿತನಿಕರರ ನೀ । ಲಾಂಜನೆ । ಸುಮಧನ್ವ ವಿರೋಧಿಗ । ನಂಜನೆ । ಕಂಜಾನನೆ । ರಂಜಿಪ ಮೃತವಾರ್ಧೀ । ಚಂದ್ರಮನಂ ಜತೆಗೊಳೆವೃದ್ಧಿ । ಸಂಜನಿಪೋಲೀ ರಂಜಿಪ ಮಧುರುತು । ವೆಂಜಲಿಸಿದ ಸ್ಮರ । ಗಂಜಿದೆ ಸುಪ್ರಿಯೆ ॥ ೧ ॥ ಸುಂದರಾ । ಮಧುಮಾಸದೊಳಗೆ ಎಳೆ ಚಂದಿರಾ । ಮುಖಿಯೇ ಕೋಮಲೆ ನಾ ಬಂಧುರಾ । ನಂದಾ । ನಂದನದಾ ಗಿರಿ । ಕಂಧರಾ । ವಿಸ್ತಾರದಿಂದ ನೋಡಿ ನಲಿದು । ಮಲಯಜ ಗಂಧಜಾರ್ಚಿ ವಲಿದು । ಕುಂದಬಾಣನಿರಿ । ಕುಂದಿಸುತಲಿ ಮುದ । ದಿಂದಾಡುವ ಎನ । ಲೆಂದಳೆರೆಯಗೆ ॥ ೨ ॥

ಕಾಂಬೋಧಿ : ಏಕ

ಕೇಳು ಕೇಳು ರಮಣ । ಏ ಸುಗುಣ । ಕೇಳು ಕೇಳು ರಮಣ ॥ ಕೇಳು ಕೇಳಿ ಕೇಳಿ ಯೊಳಗಾಳುತಾಳ್ವನಡೆ ॥ಕೇ॥ಪ॥ ಕೇಳು ಮುದ । ತಾಳು ತಾಳು ಸ್ಮರ । ಸಾರೆ ಮುಗುದಾ । ಸೊಗಯಿಪ । ಕಂತುಕಾಂತ ನಿನ್ನ ಮನದಾ । ಬಯಕೆಗಳಪಿಂತೆ ಸಾರೆ ಮುಗುದಾ । ಸೊಗಯಿಪ । ಕಂತು ಕಾಂತ ನಿನ್ನ ಮನದಾ । ಬಯಕೆಗಳಪಿಂತೆ ಸಾರೆ ಮುಗುದಾ । ಸರಿಸಮ । ಬಂತೀರ್ವವಿನೊಳೊಗೆದಾ । ಎನ್ನೊಳು । ನಿಂತು ಮೇಲೆ ನೆಗೆದಾ । ಸರಿಸಮ । ವಂತದಿ ನಡೆ ನಡೆ ॥ ಕೇ ॥ ೧ ॥ ರವಮುದಂತರ ಲೇಸೈ । ನಿಂತಾಡುವವ ಸ । ವಂತದಿ ನಡೆ ನಡೆ ॥ ಕೇ ॥ ೧ ॥ ರವಮುದಂತರ ಲೇಸೈ । ನಿಂತಾಡುವವ ಸ । ಬಿಸಲು ಬೇಡ ಚಿನ್ನ । ಕಾಮುಕ । ರೆಡೆಯ ತಡವದೇನು ರನ್ನ । ವನದೊಳು । ಬಿಸಲು ಬೇಡ ಚಿನ್ನ । ಕಾಮುಕ । ರೆಡೆಯ ತಡವದೇನು ರನ್ನ । ವನದೊಳು ।

ಸಾರ್ವರೆನ್ನ । ಕಂಡರೆ ಬಿಡರು ಪೇಳ್ವೆ ಮುನ್ನ । ಮೋಹನ್ನ । ಧೃಡವಿರೆ ಕಡುಹಿಗೆ । ನಡೆ ತಡೆವದೇಕುಡುವಿಲ್ಲನ ಬೆ । ನ್ನೊಡವ ಪಡವ ಸುಖ ॥ ೨ ॥

ಕಂದ

ಇಂತೊರೆದಬುಜಾಂಬಕಿಗಂ । ನಿಂತತಿ ಧೈರ್ಯವನರುಹುತ್ತೈತಂದು । ಸಂತಸವೆತ್ತುಂ ವಧುವರ । ರುಂ ತವೆ ಶೋಭಿಸಿದರು ವಿವಿಧಾನಂದದೊಳಂ ॥ ೧ ॥

ಜಂಜೂಟಿ : ಏಕ

ಬಾರೊ ಬಾರೊ ಇತ್ತ ಎಲೆ । ನೀರ ಗಂಭೀರ ॥ ಪ ॥ ಇತ್ತ ನೋಡು ಸುಮ । ಪೋತ್ತ ಕ್ಕೊದು ಕೊಡು । ಮುತ್ತ । ನಿತ್ತು ನಿನ । ಗ್ಹೊತ್ತು ಹೋಯಿತು ಪುನ ॥ ೧ ॥ ವಾರಿ ಕೇಳಿಯೊಳ್ । ಭೂರಿ ಸರಸ ಸರಸಿಯೊಳ್ । ಹೋರಾಡುವ ನಡೆ । ವೀರ ಶೂರಪ್ರಿಯ ॥ ಬಾ ॥ ೧ ॥

ವಾರ್ಧಿಕ

ಮತ್ತೇಭನಿಭಗಮನೆ ಯುತ್ತರಕೆ ಸಂತೋಷ । ಮೆತ್ತುವಾರಾಸಿಗಿಳಿ ಯುತ್ತಲಾನಂದದಿಂ । ದುತ್ತಮದ ಕೇಳಿಯ ಕಡುತ್ತದಿಡ ಹತ್ತಿಮದ ಮತ್ತರುಂದಂಪತಿಗಳು ॥ ಬತ್ತಲೆಯೊಳತ್ತಲೆ ಸುಪತ್ತಿಗೆಯೊಳೊತ್ತಾಯ । ಮೆತ್ತು ವರ ಚಿತ್ತಜನನು । ಗ್ಹೊತ್ತಿ ಘನ ಮುತ್ತುಗಳ ಹೊತ್ತೊ ಮಂತೆಗಳ ಸುತ್ತಾಡಿ ಬಿತ್ತಿದರ್ ಮೋಹಮಿಗಲು ॥ ೧ ॥

ಕಂದ

ಸುರ ಗಂಧರ್ವ ಚರಾಚರ । ದುರು ರೂಪುಂಗಸ ಧರಿಸುತ । ಪರಿ ಪರಿ ಕ್ರೀಡೆಗಳೊಳ್ । ಮೆರೆದಿಸುತಲ್ಲಿಯೆಂ ಮಂಜರಿ । ವರಮಂಟಪದೊಳ್ ಪಗಡೆಯ ನಾಡಿದರಾಗಲ್ ॥ ೧ ॥

ರೇಗುಪ್ತಿ : ಅಷ್ಟ

ಪಗಡೆಯಾಡಿದರೂ ಆನಂದದಲಿ । ಮೃಗಮದಗಂಧಿ ಸ । ತ್ಸುಗುಣ ರುಮಲವಿಲೀ ॥ ಪಲ್ಲ ॥ ಪ್ರೌಢಪಾರ್ವತಿ ಸಿರಿ । ಕಡಲಶಯನ ಹರಿ । ಮಡದಿ ರೋಹಿಣಿಯಂದೀವರೆಗೆ । ಬಿಡದೆ ದಂಪತಿಗಳು ತಡೆಯುದವರ ಜತೆ । ಗೊಡುವರೆ ನಾವಿಬ್ಬರಾದ ಬಗೆ । ಬೆಡಗಿದೆನುತ ನಗೆ ಕಡಲೊಳು ಮುಳುಮುಳುಗುತ । ಒಡನೆ ಕುಳಿತು ಸಂತೋಷ ಮಿಗೆ । ಮಡದಿಗಪ್ಪುತಲೆಡೆಗೊಡದೆ ಮುದ್ದಿಸುತಲಿ ತೊಡೆಯ ನೇರಿಸಲವಳುಬ್ಬಿದಹೆ ಗೊಡದಿರೆನುತ ತನ್ನ । ಕೊಡಮಾಲೆಯನು ಪ್ರಿಯ । ನೆಡೆಗೆ ತೋರುತ ನಿಲ್ ಕಡುಹ ತೋರೆನ್ನುತ । ತೊಡಗಿದಳಾಟವನು । ಹಾಸಂಗಿಯ । ನಿಡುತಡರೇನಿಂ ಚಳಕವ ಬಿಡದುರೆ ತೋರುವೆನು । ಲೆಕ್ಕವನಿಡುವೆನು ಸಾರಿಯನು ಹೂಡೈ ನಿರತಾ ಪ್ರೀತಿಸುತ । ಚಲ್‌ಗಿಲ್ ತಾ । ಕಾಣಿಗಳನು ಇಡುತಡೆ ಗುಣ ಲಬ್ಧವ । ಬಿಡೆ ಇಡು ಹೊನ್ನೆಂ । ದೊಡನೊಡನುಬ್ಬುತ । ಸಡಗರದೋರುತ ॥ ಪಗಡೆ ॥ ೧ ॥ ಭಾರಿ ಭಾರಿಯೊಳು ಮ । ಸಾರಿ ಸಂಸಾರಿಗಳನು । ನೀರಜ

ಮುಖಿಗೆಲುತಿರೆ ಕಾಣುತ್ತ । ನಾರಿಯೊಡನೆ ಛಲ ಹೋರುವದ್ಯಾಕೆಂದು । ವೀರನು ನೆಗನೆಗದೆಳೆನಗುತ । ಜಾರಿತು ಮೇಲುದ । ಪೋರಿ ಎನುತ ಕರ । ವಾರಿಯಂಜಲಿ ಜಾರಿಸುತ । ಸಾರಿಯ ಗೆಲುತೊಂದನೂರಕೆ । ಸರಿಯೆನೆ ಹರಿ ನಗುತ ಪ್ರಿಯನನು ನೋಡುತ್ತ । ಸಾಂತು ಚೇಳ್ ಏಳ್ ಮೀರಿ ಕಚ್ಚುವದನೆ । ಸಾರಿ ಬೀರಲವ । ಸೇರಿದನ ಬಲೆಯ । ಮಾರನ ಕೇಳಿಯೊಳು । ಕುಚಯುಗಗೀರುತಲುಗುರಿನೊಳು । ಎದೆಯ ಮೇ । ಲೇರುತ ಮೋಜಿನೊಳು । ಸರಿಸಮಗಾರರೆ ಸರಸದೊಳು । ಸೊಕ್ಕಿದರಾಗ । ಮಿಕ್ಕದೆ ಭೋಗಾವೆಕ್ಕಸರಾಗ । ಲೆಕ್ಕಿಸುತರಾಗಲಿಬೇಗ । ಪೂರೈಸುತ ಮಡಿವಾರದಿ ರಂಜಿಸೆ ಕೋರೈಸಿದನಾ । ಧೀರಸುಷುಪ್ತಿಗೆ ॥ ಪಗ ॥ ೨ ॥

ಭಾಮಿನಿ

ಧಾರುಣಿಪ ಕೇಳ್ ನಿದ್ರೆಯಲಿ ವರ । ವೀರಕೇಸರಿಯೊರಗಲಿತ್ತಲು । ಧಾರುಣಿಯ ವಿಧುಮಂಡಲವನೇರಿಸುವ ಮುಖರುಚಿಯ ॥ ಸಾರದಲಿ ಸೊಂಪೆತ್ತ ನವ ಶೃಂ । ಗಾರದಲಿ ಕುಳ್ಳಿರಲು ಕಂಡಾ । ಮಾರುತನು ಮರುಳಾಗಿ ಬಂದಭಿ ವರ್ಣಿಸಿದ ಸತಿಯ ॥ ೧ ॥

ಕೇದಾರಗೌಳ : ಅಷ್ಟ

ಎಂತು ಬಣ್ಣಿಪೆ । ಕಾಂತೆಯನು ಗುಣ । ವಂತೆಯ ಭಳಿರೆ । ಸ್ಮರನುರು । ದಂತಿಯೊ ಸಿರಿ ಕಾಂತೆಯೊ । ಶಶಿ । ಕಾಂತಿಯಮರರೆ ॥ ಪಲ್ಲ ॥ ನಿಂತಳೋವನ ಕಾಂತೆ ನಿಜ ರೂ । ಪಾಂತಳೊ ತಿಳಿಯೆ ನಾ । ನಿಂತ ಚಲುವಿಕೆ ॥ ಮಂಗಳಾಂಗಿಯು । ತ್ತುಂಗ ಮುಡಿಯೊಳು । ಪಾಂಗಿನಲಿ ಮುಡಿದ । ಮಲ್ಲಿಗೆ । ಸಿಂಗರೋತ್ಪಲ ಶೃಂಗದಾವರೆಯಂಗಳಿಂಗೊಲಿದ । ಉತ್ತಮ । ಭೃಂಗರಾಜಗಳಿಂಗೆ ಬಜ । ನ್ಮಂಗಳಲಿ ತಳೆದ । ತವ ಫಲ । ಸಂಗಿಸುತು ಚಲು । ಮಂಗೆಯ ನಡು । ಮಿಂಗೆ ಸೋಲುವ । ಸಿಂಗರಾಜನು ॥ ೧ ॥ ಮತ್ತಕಾಶಿನಿ ಸುತ್ತ ಕೇಕಿಗ । ಳೆತ್ತಿ ಗರಿಗಳನು । ಆಡುವ । ವಿತ್ತ ಶುಕಮೋತ್ತದಲಿ ಸರ । ಮೆತ್ತು ರಾಗವನು । ಹಾಡುವವತ್ತೆ ಕಡೆ ಮೊಗವೆತ್ತಿ ಹರಣನು ಮತ್ತೆ ಕೇಳ್ । ವನು । ಶಿವ ಶಿವ । ಹೆತ್ತಳಾವಳೊ ಚಿತ್ತಜ ನಿಗೆ ಮಾ । ರಿತ್ತು ಮನ ಬಿ । ಟ್ಟೆತ್ತಲೈದಲಿ ॥ ೨ ॥ ಕ್ರೂರಮಾರನ । ಭಾರಿ ಬಾಣಕೆ । ಸೂರೆ ಹೋದೆನಲಾ । ಕೂಡಲು । ನಾರಿ ಪರವಧು । ಮೀರಿತಳ್ಕಿಸೆ । ಗಾರು ಗೊಂಬಳಲಾ । ಬಂದುದ । ಸೈರಿಸು ಬಂ । ಗಾರ ತನುವಿದ । ನೇರುವೆನು ವೈಯ್ಯಾರಿ ಧೀರೆಯ ॥ ೩ ॥

ಭಾಮಿನಿ

ಭೂಪ ಕೇಳಾ ಮರುತನೀಪರಿ । ಚಾಪಲಾಂಬಕಿಗೊಲಿದು ತನ್ನಯ । ರೂಪದೋರದೆ ರಮಿಸಿ ನಡೆದನು ಸಿದ್ಧಿಯೋಗದಲಿ ॥ ಆ ಪತಿವ್ರತೆಗಾಗ ಬ್ರಹ್ಮಸ್ವ । ರೂಪ ಮುಖ್ಯಪ್ರಾಣನುದಿಸುತ । ತಾ ಪಸುಳೆತನದಿಂದ ಮಾತೆಯೊಳೆಂದ ವಿನಯದಲಿ ॥ ೧ ॥

Scanned by CamScanner

ಶಹನ : ಅಷ್ಟ

ತಾರೆ ತಾರಮ್ಮಯ್ಯ । ಸಕ್ಕರೆ ಹಾಲು । ತಾರೆ ತಾರಮ್ಮಯ್ಯ । ತಾರೆಯಂ ನಮ್ಮ ಬಲ್ । ಭಾರಿ ಹಸಿವೆಯಿಂದ । ಕ್ಕಾರೋಗಣೆಗೆ ತಕ್ಕುದ । ತೋರಿಪುದಾದ ॥ ತಾರೆ ॥ ಕುಕ್ಷಿಯು ಬಡವಾದುದು । ಬಾಯೊಳಗೆಯು । ಪೇಕ್ಷೆಯು ಬಲು ಕಾಂಬುದು । ದ್ರಾಕ್ಷೆ ಮಾದಳ ಕದ । ಳಿಕ್ಷು ನೇರಳೆ ಜಂಬು ಸುಕ್ಷೀರಾದಿಗಳ ತಂದು । ಕೊಡು ಎನಗಿಂದು ॥ ತಾರೆ ॥ ೧ ॥ ಯಾಕೆ ಕುಂತಿರುವೆ ನಾ ಸೈರಿಸ । ಬೇಕೆ ಈ ಹಸುವೆ । ಕೋಕಿಲೆಗಾನೆ ನೀ । ನೆ ಕರದೆತ್ತದೆ ಜೋಕೆ ಗೆಟ್ಟೀರ್ಪೆಯಾ । ಕೇಳು ಪರಾಕೆ ॥ ತಾರೆ ॥ ೨ ॥ ಸಣ್ಣ ಶಿಶುವಲ್ಲವೆ । ಬಾಯಿಗೆ । ಬಾಳೆ । ಹಣ್ಣು ರುಚಿಯಲ್ಲವೆ । ಹಣ್ಣಿದ ಬಯಕೆಗ । ಳುಣ್ಣಿಸೆನುತ । ತಾಯ ಕಣ್ಣ ಮುಂದುಲಿದ । ಚಾಲ್ಪಂದ ॥ ತಾರೆ ॥ ೩ ॥

ಕಂದ

ಮಗು ನುಡಿಯುಮೃತವಿದೆಂದುಂ । ಮೃಗಮದಗಂಧಿಯುಬ್ಬುತ್ತೆತ್ತುತ್ತಾ ಗಳ್ । ಮಗನಂ ಪರಸುತ ಮುದ್ದಿಸಿ । ಬಗೆಬಗೆಯಲಿ ಮಾಣಿ ನುಡಿದಳು ನುಡಿಯಾಗಳ್ ॥ ೧ ॥

ಕಲ್ಯಾಣಿ : ಅಷ್ಟ

ಕಂದಯ್ಯ ಛಲವ ಬಿಡೊ । ಎನ್ನಪ್ಪಯ್ಯ ಕಂದಯ್ಯ ಛಲವ ಬಿಡೊ । ಕೊಡುವೆ ಮಾ । ಕಂದಾದಿ ಫಲಗಳಾ । ತಿಂದೊಂದು ಮುತ್ತ ತಾರೊ ಬಾರೊ ಬಾರೊ ॥ಕಂದ॥ ಬಿಗಿವಪ್ಪಿಕೊಂಬೆ ಬಾಲ । ಕೈದಣಿಯೆನಾ ತೆಗದೆತ್ತಿ ನಲಿವೆ ಶೀಲ । ಮಿಗೆಯೇನುಧನ್ಯಳೋ । ಮಗುವೆ ನೀ ಮುದ್ದು । ಮೊಗದ ಸಂದರ್ಶನೆಗೆ । ಶಿವನ ಕೃಪೆಗೆ ॥ ಕಂದ ॥ ೧ ॥ ಅಪ್ಪಯ್ಯ ಮಲಗಿರುವ । ನೀನೋಡು ಯು । ನ್ನಪ್ಪ ನಾಬರುವೆ ಜವಾ । ತಪ್ಪದೆ ಹಣ್ಣ ತಂ । ದೊಪ್ಪಿಹೆ ಕುಳ್ಳಿರೆಂ । ದಪ್ಪಿ ಮುದ್ದಿಸಿ ಪೋದಾಯಂಜನೆಯುಳು ॥ ಅ ॥ ೨ ॥

ಕಂದ

ಸ್ವಸ್ಥದೊಳಿರದಾಬಲಾ ನ । ಭಸ್ಥಳದೊಳು ತೊಳಗುವ ಚಂಡ ಭಸ್ಥಿಯನುಂ ॥ ಮಸ್ತಕನೆಗಹುತ ಕಂಡುಂ । ಪ್ರಸ್ತುತ ಯೋಚಿಸುತೆ ತನ್ನೊಳು ತಾನುಸುರ್ದಂ ॥ ೧ ॥

ಘಂಟಾರವ : ಅಷ್ಟ

ಏನಿದೇನಿದು ಮಾತೇಯುಮನದಂಗ । ತಾನು ಹಂಪಲ ತರುವೆನ್ನುತ । ನ್ಯೂನವಿಲ್ಲದೆ ಪೋದಳೆ ॥ ೧ ॥ ಕಾಮಧೇನುವ ಕಟ್ಟಿರೆ ಮನೆಯೊಳು । ಭೂಮಿ ಗೋಡ್ಯಾಕಳನು ಕರವಿ । ತ್ತಮಹಾಮತಿಗೊಂಬನ ವ್ಯರ್ಥ ಪೋದಳೆಂನಂಬಿಕೆ ಬಹ ಮುನ್ನ । ಸ್ವಾರ್ಥ ಫಲವಶ । ನಾನುಂಗುವೆ । ನರ್ಥಿ ಗೊಂಡಿದಕ್ಷಣದೊಳು ॥ ೩ ॥ ಬದಲಿದ ಹೆಣ್ಣಿಗೆ ವಾಚಾಟವೇಕೆನ । ಗೊಲಿದಹಂಣಿದ ಮುಕ್ಕಿ ಸೊಕ್ಕುವೆ ।

ಛಲವ ಬಿಡೆ ಭಾಪೆಂದನು ॥ ೪ ॥ ಧಿಟವಿದೆನ್ನುತ ಪಟುಪರಾಕ್ರಮಿಯಾಗ । ಪ್ರುಟ ನೆಗದನಭಾಂಗಣಗೆ ದಿ । ಕ್ತಟವು ಜರದುದು ಶಿವಯೆನೇ ॥ ೫ ॥

ಭಾಮಿನಿ

ಹಾರಿ ಸೂರ್ಯ ಪರೂಥವನು ಗಂ । ಭೀರ ಶಿಶು ಎರಡನೆಯ ಭಾಸ್ಕರ । ಶೂರನೆಂಬಂದದಲಿ ಮಂಡಿಸಿದನು ಧ್ವಜಾಗ್ರದಲಿ॥ ಭೂರಮಣ ಕೇಳಂದು ಗ್ರಹಣದ। ತಾರಿಯಾಗಿರಲಿತ್ತ ಬಲು ಜ । ಝಾಝರಬಲ ಸ್ವರ್ಭಾನು ಓಲಗವಿತ್ತನಭ್ರದಲಿ ॥೧॥

ಕಾಂಬೋಧಿ : ಝಂಪೆ

ಮತ್ತೆ ಖಳನೆಂದ ನಿಂ । ದುತ್ತುಮದ ದಿನವೆನಗೆ ತುತ್ತಾದನಾ ಪ್ರಭಾಕರನು । ಚಿತ್ತಜನ ಪಿತನಾಜ್ಞೆಗುತ್ತರೋತ್ತರವ್ಯಾತ್ತು । ಮತ್ತಾರು ಸರಿಯೆಂದ ಖಳನು ॥ ೧ ॥ ಧರೆಯೊಳು ಭುಜಂಗನೆಂ । ದೊರಪರೆನಗೆಂತು ನಾ । ನೆರೆವೆನೀ ದಿನದಿ ರವಿ ಎಂಬ । ತರುಣಿಯನು ಒಲ್ಪಿನೊಳು । ನೆರೆ ತಡವರಾರೆನುತ । ಬರುತೆರಡ ಕಂಡನಿನಬಿಂಬ ॥ ೨ ॥ ಅಚ್ಚರಿಯ ತಾಳಿದನು । ಬೆಚ್ಚಿದನು ಬೆದರಿದನು । ನಿಶ್ಚಯದ ಸೂರ್ಯನಾರಕಟ । ಸ್ವಚ್ಛ ರಥದೊಳಗೋರ್ವ । ಮಚ್ಚಿ ಧ್ವಜದೊಳಗೋರ್ವ । ರುಚ್ಛಳಿಪರಿಂತೀರ್ವರಕಟ ॥ ೩ ॥ ಸಂದೇಹ ತೋರುತಿದೆ । ನಿಂದು ತಿನ್ನುವಡೀಗ । ಲಿಂದ್ರನನು ಬೆಸಿಗೊಂಬೆನೆನುತ । ಮಂದಮತಿ ಬಂದು ಪದ । ಕೊಂದಿಸುತ ಸುರಕಾಂತಗೆಂದನೀ ಪರಿಯ ಮಾತ ॥ ೪ ॥

ಭೈರವಿ : ಅಷ್ಟ

ಲಾಲಿಸು ಸುಪ್ರತಾಪ । ಸುರಕುಲ ದೀಪ । ಲಾಲಿಸು ಸುಪ್ರತಾಪ ॥ ಪ ॥ ಹಿಂದಬ್ಧಿ ಮಥನದೊಳು । ಸುಧೆಯ ನೆಪದಿಂದೆನ್ನ ಕಂಠದೊಳು । ಬಂದುದು ಪರಿಭವ ಚಂದ್ರ ಸೂರ್ಯರ ದೆಸೆ । ಯಿಂದ ಶ್ರೀಹರಿ ಮುನಿ । ದಂದ್ಯಾತ್ತು । ಪಗೆಯೆಮ್ಮೊಳ್ ॥ ಲಾ ॥ ೧ ॥ ಕೇಳಿಂದು ಭಾಸ್ಕರನಾ । ನುಂಗುವೆನೆಂಬ । ಬೇಳಂಬದೊಳು ಪೋದೆ ನಾ । ಹೇಳಲೇನೆರಡನೆ । ಹೇಲಿಯಂದದೊಳೋರ್ವ । ಖೂಳ ರಥಾಗ್ರದಿ । ಮೇಳೈಸುತ್ತಿಹ ಜೀಯ ॥ ಲಾ ॥ ೨ ॥ ಇಬ್ಬರಾರ್ಯವರೊಳಿಂದು । ನಾನಾರನು । ತಬ್ಬುವೆನ್ಯಯ್ಯನಿಂದು । ತಬ್ಬಿಬ್ಬಾಗಿದು ಬಂದೆ । ನೊಬ್ಬನ ನೀಪಿಂಡೆ । ಹಬ್ಬರೆ ತೋರೆನ । ಉಬ್ಬಿಸಕ್ರಂದನ ॥ ಲಾ ॥ ೩ ॥

ಭೈರವಿ : ಏಕ

ಸ್ವರ್ಭಾನುವೆ ಕೇಳ್ಸುಭಟ । ಇ । ದೀರ್ಬರು ಸೂರ್ಯರೆಯಕಟ ॥ ಆರ್ಬಲ್ಲವರೀ ಬಗೆಯ । ಏ । ಳ್ಯಾರ್ಬಾರ್ ಕಾಣುವೆ ಕೈಯ ॥ ೧ ॥ ಅರ್ಕನ ಮಾಯವೊ ತಿಳಿಯೆನೀ । ದೂರ್ಕೇಳ್ದಿರೆನಿದು ಸರಿಯೆ । ಮೂರ್ಕಣ್ಣವ ಬೇಡೆನಲಿ ನಾ । ಮಾರ್ಕೊಳಿಸುವೆ ಹೊಸಲಿನಲಿ ॥ ೨ ॥ ತೋರ್ತಡವೇಕೈ ಏಳು ಪೊಸ । ಮಾರ್ತಾಂಡನ ಕೈ । ಮಿಗಿಲು । ಆರ್ತಡದರು ಬಿಡೆ ಕಾಂಬೇ । ಯುವ । ಧೂರ್ತನಾಗಿರಲಸುಗೊಂಬೇ ॥ ೩ ॥

Scanned by CamScanner

ಭಾಮಿನಿ

ಬಿಡುನಯನರಧಿನಾಥನಿಂತೆಂ । ದೊಡನೆ ವಜ್ರವ ಹುಡುಕಿ ಮದಗಜ ।
ವಡರಿ ತಮನೊಡನೊಡನೆ ಬರುವುದ ಕಾಣುತುಗ್ರದಲಿ ॥ ಕಡೆಯು ಭೈರವನಂತೆ
ಅಂಜನೆ । ಘಡದ ಮಗನೊಡನಿವವಡಲಿಗೆ । ಝುಡಿವನೆನುತಡಗಟ್ಟಿ ರಾಹುಗೆ
ನುಡಿದ ಶೌರ್ಯದಲಿ ॥ ೧ ॥

ನಾದನಾಮಕ್ರಿಯ : ಅಷ್ಟ

ಘಡ ಘಡ ನೀನಾರೊ ಬಂದವ । ಎನ್ನ । ಒಡಲ ಪೋಷಣವಾಗಿ
ನಿಂದವ । ಬಿಡುಗಣ್ಣ ನರನಾಗರೊಳಗಾವ । ಕುಲ । ದೊಡೆಯ ನೀ ಸಿಕ್ಕಿದೆ
ವಾಹವ್ವಾ ॥ ೧ ॥ ಆರಾದರೇಕೆಲೊ ನಡೆ ಘೋರಾ । ಭಾನು । ತೇರಡರಿದ ನಿನ್ನ
ಹಂಕಾರ । ತೋರಿದಡಿಕೊ ಕೊಲ್ವೆನೈದೂರ । ಸಾರ । ಸಾರತ್ತಲೆನೆ ಕೇಳುತ್ತಾ
ವೀರ ॥ ೨ ॥ ಹೂಂಕರಿಸುತ್ತೆಂದ ನೆಲೆಸಂದೆ । ಎನ್ನ । ಬಿಂಕವಗೆಲ ಬಂದೆಯೈ
ಮುಂದೆ । ಶಂಕರನೊಲುಮೆಯಿಂದೆನುತೊಂದೆ । ಮುಷ್ಟಿಯಿಂ ಖಳಗೆರಗೆ ಸಾರಿದ
ಹಿಂದೆ ॥ ೩ ॥

ಕಂದ

ಕಂಡಾ ಬಗೆಯಂ ಸುಮನಸ । ಮಂಡಲಪತಿಧೃತಿ ಖತಿಯಂಗೊಂಡಾ
ಗಳ್ । ಚಂಡಭ್ರುಕುಟಿ ಭಯಂಕರ । ಗೆಂಡಂಗಾರಲ್ ನಯನದಿ ನುಡಿದ ಮರಿ
ಯೊಳ್ ॥ ೧ ॥

ಭೈರವಿ : ಅಷ್ಟ

ಪೂತುರೆಲವೊ ತರಳ । ಕಾಂತಿಯೊಳು ಖ । ದ್ಯೋತಗೆ ಸರಿಯಾದೆಲಾ ।
ಮಾತೆಯಾವಳು ಬಂದು । ದ್ಯಾತಕಿಲ್ಲಿಗೆ ನಮ್ಮೊ । ಳಾತು ಬಾಳ್ವೆಯು ಪೋಗೆಲ ॥೧॥
ಹೆತ್ತಳಾರದಡೇನು । ನಿನ್ನಯ ಗರ್ವ । ವವನಿಳಿಸುವೆನು । ಇತ್ತತ್ತ ನಿಲುಪೊಗ
ದೆತ್ತಕಾತೊತ್ತೀಗ । ತುತ್ತಕೊಂಡೈದುವೆನು ॥ ೨ ॥ ರಾಯಾಮಾರ್ಗದಿ ಕೇಳಲು ।
ಬೀಕಾರಿನಿ । ಕಾಯ ಮಾತುಗಳು । ಆಯುವೆ ಘಡವೆನ್ನೊ । ಳ್ಸಾಯ ಬಂದೆಯ
ಯುವ । ರಾಯುಪ್ರೀಯುದೊಳು ॥ ೩ ॥ ಬದ್ದ ನೀನೆಂದ ಮಾತು । ನೋಡಾಚೆಗೆ ।
ಬಿದ್ದ ಕಂಡಿನಿತು । ಹೊದ್ದುವೆ ಧುರಕ ಪ್ರ । ಬುದ್ಧ ಹೋಗೆಂದೊಂದು । ಗುದ್ದಿ
ಖಾಂತಿಯಾಂತೂ । ೪ ॥ ಹೂಂಕರಿಸುತ ಸುರಪಾ । ವಜ್ರಾಯುಧ । ಮಂಕೊಂಡು
ಸುಪ್ರತಾಪಾ । ಅಂಕವ- ತೋರೆಂದು । ಶಂಕಿಸದರಿಶಿಷ । ಭೋಂಕಾನೆ ಝುಡಿದ
ನಲ್ವಾ ॥ ೫ ॥

ಭಾಮಿನಿ

ಪೊಡವಿಪತಿ ಕೇಳ್ ಕೊಡಲಿಗಡಿತವ । ತಡವುದೇಯುಳಿ ತೃಣಕಣಾಸುರ
ರೊಡೆಯು । ನೆಗಹಿದ ಕುಲಿಶಹತಿಗಿದಿರಹನೆ ಕಡುಪಸುಳೆ ॥ ಒಡದು ತಲೆ ರಕ್ತಾಂಬು
ಬುಡು । ಬುಡಿಸೆ ಧಡಧಡಸುತ್ತ ಮುಗಿದ ದಿಡಕೆ ಕಿತ್ತಿ ತಬ್ಬದೋಳ್ ಸಲೆ
ದಿವ್ಯ ಪ್ರಭೆ ಹಸುಳೆ ॥ ೧ ॥

ಕಂದ

ಅಂದಮರಾಧಿಪ ತೋಷದೋಳ್ । ಮಂದಿರಕ್ಕೈದಿದನಿತ್ತಲು ತಿಳಿದಾ ಪರಿ
ಗಂಧವಹಂ ॥ ನಡೆ ತಂದುಂ ಕಂದನನೆತ್ತಿ । ನೆತ್ತಿಯನಾಘ್ರಾಣಿಸುತಳಲ್ದತಿ
ಜವದಿಂ ॥ ೧ ॥

ನೀಲಾಂಬರಿ : ಏಕ

ಅಕಟಕಟಿಂಥ ಹಸುಳೆಗೆ । ಕೊಂದವನೇಸು । ಪ್ರಕಟಬಲನೋತಾವಿಕರ್ತೆಗೆ
ಮಿಗಿಲು ಮರವಾಗೆ । ಇಂತಾಯ್ತೆ ಬಲು ಕಂ । ಟಕವಿದಂ ಜನಜಾತಗೆ ॥ ೧ ॥
ನೆತ್ತಿಯು ಬಲಿದೈಯ್ಯಯ್ಯೋ । ಸ್ಪಷ್ಟದೆ ಮಾತಾ । ಬಿತ್ತರಿಸಲು ಬಲ್ಲೆಯೊ ।
ವೃತ್ರಾರಿಗೇನ್ ಹಗೆಯೊ ಸುಮ್ಮನೆ ಕೊಂದ । ಚಿತ್ತಜಾರಿಗೆ ಸರಿಯೊ ॥ ೨ ॥
ಮಕ್ಕಳಮಣಿ ನಿನಗೇ । ಹುಟ್ಟಿದ ದಿನವೆಯುಕ್ಕೀತೆ ಲಿಫಿಯ ಹೀಗೆ । ಅಕ್ಕಟೆನ್ನುತ
ಮೂರ್ಛೆಗೆ । ಸಂದೆದ್ದು ಶವವ । ತೆಕ್ಕೊಂಡ ಕರದೊಳಗೆ ॥ ೩ ॥

ಸೌ : ತ್ರಿವುಡೆ

ಮರುತ ಯೋಚಿಸುತೆಂದ । ಭಾಪುರೆ । ಧರಣಿಸಚರಾಚರದೊಳಿನ್ನನು ।
ಹೊರೆತು ಬಾಳ್ದವರಿಲ್ಲ ಎನಗೀ । ಪರಿಯದ್ಯಾತ್ತೆ ॥ ೧ ॥ ದುಖ್ಖಿಸುವದ್ಯಾಕಿನ್ನು
ಬರಿದೆ ನಾ । ಸೊಕ್ಕ ನಿಲ್ಲಿಪೆ ಜಗವ ಎನ್ನ ಪ । ಸುದಕ್ಕೆ ಬರಿವೆ ಸುರಪನನು ಮೇಣ್
ಮುಕ್ಕಜನರಾ ॥ ೨ ॥ ಸಾಕು ಸಾಕೀ ಲೋಕಯಾತ್ರೆಗಳ್ಯಾಕೆ ಮೈದೆಗದಡಗುವೆನು
ಬಲು । ಠೀಕಾನೋಡಲಿ ಯುಣಲಿ ಲೋಕಾ ಲೋಕವೆಲ್ಲ ॥ ೩ ॥

ವಾರ್ಧಿಕ

ಆಸದಾಗತಿಯಿಂತು ಶೋಕ ಮಂನುಗ್ಗೊತ್ತಿ । ಕೂಸ ಶವವನುಳಿಯು
ದೆತ್ತಿ ಹಿಮವದ್ಗುಹೆಯು । ವಾಸ ಮಂತಾಗೈದೆನಿಖಿಳ ಭುವನ ಪ್ರಾಣ ತ್ರಾಣ
ಜಾಣ ಸಮೀರಣ ॥ ನೇಸರ ಕುಲೇಂದ್ರ ಕೇಳ್ ಸಚರಾಚರಂಗಳೊಳು । ಶ್ವಾಸ
ನಿಶ್ವಾಸಗಳ್ ಕುಗ್ಗಿದುದು ದೇವೌಘ ವಾಸಬಿನ್ನೈಸಲವನ್ನೈದಿ ಕಂಡನುವಾಸವೆಣ್ಣಿನ
ರಮಣನಾ ॥ ೧ ॥

ಭಾಮಿನಿ

ಕಾಲಿಗೆರಗಿದುಮಘವ ಕಜ್ಜದ । ಲೀಲೆ ಸನ್ನೆಯೊಳುಸುರಿ ಮೌನ ಮೇ
ಲಿರಲು ತಿಳಿದಜನಿಲಿಂಪರ ಕೂಡಿ ತ್ವರಿತದಲಿ ॥ ಪಾಲ ಮುನ್ನೀರೆಡೆಗೆ ಬಂದಾ ।
ನೀಲಮೇಘಶ್ಯಾಮನನು ಶ್ರುತಿ । ಜಾಲ ಕೈವಾರದೊಳಗೊಪ್ಪಿರೆ ಕಂಡ
ನೊಲವಿನಲಿ ॥ ೧ ॥

ಶಂಕರಾಭರಣ : ಅಷ್ಟ

ನೋಡಿದಾ । ಶ್ರೀಕಾಂತನ ನೋಡಿದಾ । ನೋಡಿದ ಭುಜಗೇಂದ್ರಗೂಡಿ
ವಿಷ್ಟರದಿ ಶ್ರೀ । ಗೂಡಿಯೋ । ಲಾಡಿ ಸೊಂ । ಪಾಡಿ ಮಂಡಿಸಿದನ ॥ ಪಲ್ಲ ॥ ಥಳ
ಥಳಿಸುವ ಹೆರೆನೊಸಲ । ಮೇಲೆ ಹೊಳವ ತ್ರಿರೇಖೆ ವಿಶಾಲ । ಮಧ್ಯದೊಳು
ಕಸ್ತೂರಿಯ ಬೊಟ್ಟು ಪ್ರಬಲ । ಕರ್ಣ । ಗಳ ಕುಂಡಲಗಳ ಪ್ರಜ್ವಾಲ । ದಿವ್ಯ

Scanned by CamScanner

ತೊಳಪಪೇರುರದ ಶ್ರೀ ।
ಗಳದ ಕೌಸ್ತುಭದ ಹಾರ । ತೊಳಸಿಯ ಶ್ರೀವತ್ಸ । ಮುನಿ ವ ।
ನಳಿನನಾಭನ ಮೂರ್ತಿ ॥ ನೋ ॥ ೧ ॥ ಅಷ್ಟಾಂಗಯೋಗ ಸಂಘಟನ । ಮನೋಹರನ ।
ಸಿಷ್ಟಾದಿನುತ ಪೀತಾಂಬರನ । ಲಕ್ಷ್ಮಿ । ಯೋಷ್ಠ ಚುಂಬನ ಮನೋಹರನ ।
ಆನಂ । ದಾಷ್ಟ ಗಂಭೀರ ಷಡ್ಗುಣನಾಕರ ಚ । ತುಷ್ಟಯಧೃತ ಕಂಬು । ತ್ರಿಷ್ಟ
ಚಕ್ರಗದಾಬ್ಜ । ದಷ್ಟ ಭೋಗದಿ ಭಕ್ತಾ । ರಿಷ್ಟ ಪ್ರದಾತನ ನೋಡಿದ ॥ ೨ ॥

ಭಾಮಿನಿ

ಕಮಲದಳ ನಿಭನೇತ್ರ ಕಿಸಲಯ । ಸಮಚರಣ ಕುಜಹರಣ ಸಜ್ಜನ ।
ಕಮಲವನ ಕಲಹಂಸ ದುರಿತಧ್ವಂಸ ವಿಧ್ವಾಂಸ ॥ ದ್ಯುಮಣಿ ಕೋಟಿ ಪ್ರಕಾಶ
ಪೊರೆಯೆಂ । ದಮರರೊಡನಜನಾಗ ಪ್ರಾರ್ಥಿಸೆ । ನಮಿಸೆ ಕಂದೆರೆದೀಕ್ಷಿಸುತ್ತಿಂತೆಂದ
ಮುರಧ್ವಂಸ ॥ ೧ ॥

ಕಂದ

ನಿಖಿಳನಿಳಿಂಪಪ್ರಕರಾ । ದ್ಯಖಿಳಾಂಕರಿದೇನೈ ಬಂದಿರಿಯುತ್ಕಂಠ ಕಮದೇ ।
ಸುಖಿಗಳೆನಿಮ್ಮುಬ್ಬೆಗಮೇಂ । ಮುಖರುಚಿ ಕೊರಗಿದುದೇನೆನಲಜ ತಾ
ಮಣಿದಂ ॥ ೧ ॥

ಕೇದಾರಗೌಳ : ಏಕ

ರಕ್ಷಿಸೆಮ್ಮನು ಜಗ । ದ್ರಕ್ಷ ಶ್ರೀನಾಥ । ಸಾಕ್ಷಿ ಸಾಕ್ಷಾತ್ಕಾರ । ಪಕ್ಷಿವರರೂಥ ।
ತರುಣ ತುಲಸಿ ಸ್ರಗ್ಧರ ವನಮಾಲ । ಲರಿಯದೋಲ್ । ಕೇಳ್ವಿಯ ಕರುಣಾಲ
ವಾಲ ॥ ೧ ॥ ಮಾತರಿಶ್ವರನ ಸುಳಿ । ವೇ ತೋರದಿಳೆಯು । ಧಾತುಗೆಟ್ಟುದು
ಪ್ರಾಣಿ । ಜಾತ ಸಹ ಜೀಯಾ ॥ ೨ ॥ ಕಾರಣವರಿಯೆ ದೈ । ತ್ಯಾರಿ ಪರಾಕೆ ।
ಹೇರೊಪ್ಪಿಸಿದೆ ಸ್ವಾಮಿ । ಸಾರಿ ಕಾವುದಕೆ ॥ ೩ ॥

ಖರಹರಪ್ರಿಯ : ಏಕ

ಚಂದವ್ಯಾತರ । ವಿಂದ ಸಂಜಾತ । ಶಾಬಾಸು ಬಂದಿರೆ । ತಂದಿರೆ ಪೊಸ ।
ತೊಂದು ವೃತ್ತಾಂತ । ಚಂದವ್ಯಾತ್ತರವಿಂದ ಸಂಜಾತ । ಗಂಧವಹ ಮನಗುಂದ
ಲಿನ್ನೇನೆಂದು ಪೇಳುವೆ । ನಿಂದುದೈ ಜಗ । ವೃಂದ ಪ್ರಾಣಿಗಳಂ ಕುಂದಿತು । ನಿಂದ
ರೈಕ್ಯಾನಂದವಾಯಿತು ॥ ಚಂ ॥ ಪಲ್ಲ ॥ ನಾರಿ ಋಕ್ಷಕುಮಾರಿ ಬಲು ಶೃಂಗ ।
ಗೌರಿಯಂಜನೆಯು । ಕೇಸರಿ । ಸೇರಿಯುಪವನ । ವೇರಿ ವಧುವರ । ಭಾರಿ
ಬೇಸಗೆಯು । ಚಂದ್ರಿಕೆ । ಬೀರಿತನುರುಚಿಕಾರಿ ಮಾರನ । ಭಾರಿ ಶರದುರಿಯ । ತಣಿ
ಸುತ । ನಾರಿಪ್ರಿಯ ನಿದ್ರೇರಿ ಮಲಗಿರೆ ನಾರಿ ಮದನ ಕ । ಠಾರಿ ಸೌಭಗವೇರಿ
ಕುಳ್ಳಿರೆ । ವಾರಿಜಾಕ್ಷಿಗೆ । ಸೇರಿದನುಕ್ಷ್ಮಾ । ಧಾರಿ ಮರುತನು ॥ ಚಂದ ॥ ೧ ॥
ಆ ತಳೋದರಿಗಾತತೂಕ್ಷಣ । ಜಾತನಾ ಕುವರ । ಹಸಿವೆಗೆ । ಸೋತು ಮಾತೆಯು ।
ಚೂತಮುಖಿ ಫಲ । ಜಾತ ತರೆ ಪ್ರಚುರ । ಕಳುಹುತ । ಪೋತ ಹಣ್ಣನುತ್ತಾತಿ
ಶಯದಿ ಖದ್ಯೋತನುರೆ ದೇರ । ಹತ್ತಿರೆ । ಬೂತುಖಿಳಮಾಮಾತನೊರದರೆ ।

ಘಾತಿಸಿದ ಪುರು । ಹೂತ ಕಂಡದ । ವಾತ ಖತಿ ತಳೆದೀತ ಪರಿಹರ । ಭೂತ ಪತಿ
ಶಿವಪ್ರೀತ ಬಲ್ಲನು ॥ ಚಂದ ॥ ೩ ॥

ಭಾಮಿನಿ

ಕೇಳಿರೈ ಶ್ರೀಕಂಠನಲಿಯಿೂ । ಕೇಳಿರೈ ಸಲೆ ಬಹೆನು ತಡವೇ । ಕೇಳಿರೈ
ಎನುತೆದ್ದ ಶ್ರುತಿ ಕೈವಾರಿ ಸಲುಹಯಾೂ । ಆಳುಗಳ ಬಲ್ಲಹನು ಬರುತ ಕೃ ।
ಪಾಳು ಶಿವನಿಹ ಗಿರಿಯ ವೈಭವ । ದೇಳಿಗೆಯಂ ಕಂಡುಬ್ಬಿ ಬಣ್ಣಿಸುತ್ತಿದ್ದ
ನೀ ಪರಿಯ ॥ ೧ ॥

ವಾರ್ಧಿಕ

ವರ ವೃಕೋದರ ನಕುಲ ಸಹದೇವಮರ್ಜುನರ । ಧರಿಸಿಹುದು ಶಶಿ
ಕಾಂತ ಕುಲಮಲ್ಲನಿಭೃತ ವಿಷ । ಧರನಾಗೆ ಶಿವನಲ್ಲ ಶಿಖಿನಿವಾಸಸ್ಥಾನವಾಗಿ
ದಿಗ್ಭಾಗಮಲ್ಲ ॥ ವರ ಋಕ್ಷರಾಜಾನ್ವಿತಂ ಸಭಾಂಗಣ ಮಲ್ಲ । ಉರಗಾಳಿಗಾವಾಸ
ವಾಗಿ ಮಹಿಪುರವಲ್ಲ । ಸಿರಿಯುಕ್ತವಾಗಿ ಹರಿಯಲ್ಲೆನಿಸಿ ಕಲಧೌತ ಗಿರಿಯಿರವ
ನೋಡಿರೆಲ್ಲ ॥ ೧ ॥

ಪರಿವರ್ಧಿನಿ ಷಟ್ಪದಿ

ಇಂತೊರೆದನಿಬರ ಕೂಡುತ ತದ್ಗಿರಿ । ಯಿಂತಾಡದುರ್ಗಕವಾಟದ
ಗೋಪತಿ । ಗಿಂತೆಂದನು ನಡೆ ತಳುವುದು ಮೇಶನಿಗುಸುರೆಂದ್ವೈಕುಂಠಾ । ಅಂತದ
ಕೇಳ್ದಲ್ಲಿರದೈದುತ ಶ್ರೀ । ವಿಧಾರುಣಗರುಹಿ ದೊಡವನೆ । ದ್ದುಂ ತವೆ ತೋಷ
ದೊಳಿದಿರ್ಬಂದಪ್ಪುತ ಹರಿಗೆಂದಂ ಶ್ರೀಕಂಠ ॥ ೧ ॥

ಬೇಗಡೆ : ಅಷ್ಟ

ಏನಿದೇನಿದಪರೂಪ ವೀಸ್ವಾರಿ । ತಾ ಚೋದ್ಯವೈ ಮಧು । ದಾನ
ವಾಂತಕ ಸಂಸಾರಿ ॥ ಏ ॥ ನ್ಯೂನ ಭಾಗ್ಯಗೆ ತಾನೆ ಸಿರಿಯೊಲಿ । ದಾನಿಧಾನದಿ
ನೀನೊಲಿದೆಯೊ ನ । ಗಾನೆ ಧನ್ಯನು ಶ್ರೀನಿವಾಸನೆ । ಮಾನನಿಧಿಯೆ ಮಹಾನು
ಭಾವನೆ ॥ ಏ ॥ ಅನುಪಲ್ಲ ॥ ಭಾರಿಪ್ರಿಯ ನೀರಾರಲದ ಕಂಡು ಖತಿ ಯೇರಿ ಶಿಖಿಗಾ ।
ಕ್ಷೀರ ಧುಮುಕುವಡಾಗ ಮುಂಕೊಂಡು । ನೀರ ನಳಿದರೆ । ಸೇರಿ ಸುಖ ಪ್ರೋಲಾರು
ಸುಖರಿಂ । ಮಿೂರಿ ಹಿತರೈ । ಮಾ ರಮಣ ನೀ ಸೇರೆ ಸುಖಮಯ । ಪೂರನಾದೆನು ।
ಕಾರಣೀಕನೆ ॥ ಏ ॥ ೧ । ಏನು ಕಾರ್ಯಗಳಡಸಿತ್ತೈ ಬಂದು ಪರಮೇಷ್ಠಿ ಮುಖ್ಯ
ವೈ । ಮಾನಿಕರನೊಡಗೂಡಿ ನೀ ನಿಂದು । ತಾನೆ ಬರಲಿನ್ನೇನು ಕಾರಣ । ಸಾನು
ರಾಗದಿ । ನೀನು ಬೆಸಸೆನೆ । ಶಾನೆ ಪೊಗಳಿ ಕೃ । ಶಾನುದೃಷ್ಟಿಗೆ ಮ । ನೋನು
ರಾಗದಿ । ತಾ ನುಡಿದ ಹರಿ ॥ ೨ ॥

ಪಂತುವರಾಳಿ : ಏಕ

ಶ್ರೀಗಂಗಾಧರ ಗೌರಿ ಮನೋಹರ । ಗೋಗಣ ರಾಜಶ್ರೀ ಸಾಂಬಶಿವ ।
ರಾಗ ವಿರಾಗ ಸ । ಭೋಗ ಫಲಪ್ರದ । ಯೋಗಿ ಜನಪ್ರಿಯ ಸಾಂಬಶಿವ ॥ ಪಲ್ಲ ॥

Scanned by CamScanner

ರಂಗ ಜಗನ್ಮಯ ಸಾಂಬಶಿವ । ಅಂಗಜಭಂಗ ಶು । ಭ್ರಾಂಗ ವೃ । ಷೇಂದ್ರ ತು । ರಂಗ ಜಗನ್ಮಯ ಸಾಂಬಶಿವ । ಅಂಗಜಭಂಗ ಶು । ಭ್ರಾಂಗ ವೃ । ಷೇಂದ್ರ ತು । ತುಂಗ ಜಟಾಧರ । ಸಾಂಬಶಿವ ॥ ಶ್ರೀ ಸಿಂಗಿ ಸುಕಂಧರ । ಭೃಂಗುರುಚಿಪ್ರಿಯ । ತುಂಗ ಜಟಾಧರ । ಸಾಂಬಶಿವ ॥ ಶ್ರೀ

ಗಂಗಾಧರ ॥ ೧ ॥ ಯಾರೊಳಗೀಯುಪ । ಚಾರದ ನುಡಿಗಳು । ಕಾರಣ ಮೂರುತಿ ಸಾಂಬ ಸಾಂಬಶಿವ । ಭೂರಿ ದಿವೌಕಸ । ವಾರದವಸ್ಥೆಯು । ಕಾರಣವರಿಯೆಯು । ಸಾಂಬ ಶಿವ ॥ ಶ್ರೀ ॥ ೨ ॥ ಕೌಳಿಕವಾರೊಳು । ಹೇಳುವೆನಣುಗ ಬೇಳಂಬದಿ ಕೇಳ್ ಸಾಂಬ ಶಿವ । ಗಾಳಿಯು ಯುಡಗಿದ । ಹಾಳಾಯಿತು ಜಗ । ಏಳುದ್ಧರಿಪಡೆ । ಸಾಂಬ ಶಿವ ॥ ಶ್ರೀ ॥ ೩ ॥

ವಾರ್ಧಿಕ

ಎಂದಾ ಮುಕುಂದಂ ಕೃತಾಂಜಲಿ ಪುಟಾವನತ । ನಂದಾಗಿಯುಧದಿ ಘೋಷವೆರಸಿಯ ನಿಖಿಳ । ವೃಂದಾರಕರು ಸಹಿತ ಕೀರ್ತಿಶ್ರುತಿಕೋಟಿ ಕೈವಾರಿಸಲ್ ತ್ರಿಣಯನ ॥ ಮಂದಸ್ಮಿತಾನಂದ । ಸಿಂಧುವಿನೊಳೋಲಾಡಿ । ಇಂದಿರೇಶನನಳ್ಕರಿಂ ತಳ್ಕವಿಸಿ ನುಡಿದ । ನಿಂದರದಿರಾದರಾ ಬಹೆನೇಳಿ ಹೈಮಾದ್ರಿಗೆಂದು ಮುಗುಳೆಂದು ಹದನ ॥ ೧ ॥

ಭಾಮಿನಿ

ಆ ಸದಾಗತಿ ಗುಹೆಯೊಳಡಗಿಹ । ನೀ ಸದಾ ಗತಿಯೆಂದು ಕರದಡೆ । ಮಾಸದಾಗತಿ ಬಂದು ಪೊಳೆವನಜಾಂಡ ಮಂಡಲವ । ಲೇಸಿದೆಂದೊಡಬಟ್ಟು ಬಂದುಕ । ಳಾಸ ತಪ್ಪದೆ ಮಧುರ ವಾಕ್ಯದಿ । ಸೂಸಿ ಮೃತ್ಯುಂಜಯನೆ ಪೊಗಳಿದ । ವಾತನುರುಗುಣವ ॥ ೧ ॥

ನವರೋಜು : ಏಕ

ಹೇ ಮಾರುತ । ಮೈದೋರು । ಜನ । ಸ್ತೋಮಕಾನಂದ ಬೀರು ॥ಹೇ॥ ಕುಂದಿತು ಪ್ರಾಣಿಗ । ಸಂದವು ಲೋಕ ಮಂದಮಾರಂತ ನಿನ್ನಿಂದ । ಮಂದಜಭವ ವೃಂದ ಸಕ್ರಂದ ಗೋವಿಂದರು ಬಂದಿಹರಿಂದ ॥ ಹೇ ॥ ೧ । ನೋಯಿಸಿ ಗಂಧಗು । ಣಾಯುತ ಬಿಡುವುದೆ । ವಾಯುವೆ ನೀ ಗುಣವಂತ । ಕಾಯದೆ ಲೋಕವ ನಾಯಸ ಬಡಿಸದೆ । ರಾಯಿತೆ ಕಾರ್ಯವು ಶಾಂತ ॥ ಹೇ ॥ ೨ ॥ ಬಲ್ಲವು ನಿನಗಿದು ಸಲ್ಲದು ಮೂರ್ಖರ । ವಲ್ಲಭ ನಾಗದಿರ್ಯ್ಯೆಯ್ಯಾ । ವಲ್ಲುವ ಕಾಮಿತ । ಸಲ್ಲಿಸಿ ಕೊಡುವೆವು । ನಿಲ್ಲದೆ ಬಾ ಕಂದಯ್ಯ ॥ ಹೇ ॥ ೩ ॥

ಕಂದ

ಗುಪಿತದ ಗುಹೆಯಂ ಬಿಡು ಬಾ । ರುಪಕೃತಿ ಮಾಳ್ಪವುಯುತ್ತಮ ಕ್ಷಣಕೋಪಿ । ಉಪಶಮಿಸನು ಖತಿ ಪಾಪಿಯ । ವಪುವಿಂದಸು ತೊಲಗುವ ಪರಿಯುರಿ ಎನೆ ಬಂದಂ ॥ ೧ ॥

ಷಟ್ಪದಿ

ಪವನನು ಬರೆ । ಬುಲ್ಲವಿಸಿತು ಧರೆ ತೋ । ಷವು ಜನಿಸಿತು ಸರ್ವರಲಿ । ತವಕದೊಳಿರಲಾ । ಪವನನು ನಿಜಸುತ । ಶವ ಮುಂದಿಡುತೆಂದನು ದುಃಖದಲಿ ॥ ೧ ॥

ಭಾಮಿನಿ

ಕಂಡಿರೇ ಹರಿಹರವಿರಿಂಚರು । ಕಂಡಿರೇ ಸುರನರಭುಜಂಗರು । ಕಂಡಿರೇ ಕಣ್ಣಾರೆ ಮುತ್ಸ್ನಗಾದ ಪರಿಭವವ । ಕೊಂಡಿರೇ ಸನ್ಮುದವ ಭುವನ ಪ್ರ । ಚಂಡರೇ ನೀವೆನುತ ಕಣ್ಣೊಳು । ಗಿಂಡಿಯಿಂ ಜಲವಿಳಿವ ಓಲ್ ನೀರಿಳಿಸೆ ಜಗಜೀವ ॥ ೧ ॥

ಕೇದಾರಗೌಳ : ಅಷ್ಟ

ಧರಣೇಂದ್ರ ಕೇಳ್ ಪುರಹರ ಕಂಡು ಖೇದದಿ । ಮರುಗದಿರಪ್ಪ ಎಂದು । ಸೆರಗಿಂದ ಮರುತನ । ಸುರಿವ ಕಣ್ಣೀರನಂದೊರಸಿದಡಾಗ ನಿಂದು ॥ ೧ ॥ ಜಲಜಸಂಭವ ಕಮಂಡಲ ಕೈಯೊಳಾಂತು ತ । ಜ್ಜಲ ಪ್ರೋಕ್ಷಣೆ ಮಾಡುತ್ತ । ಕುಲಿಶದಿಂದಳಿದರಿಂ ಕುಲಿಶಾಂಗನಾಗೆಂದು ಸಲೆ ಪರಸಿದಡೆ ಮತ್ತಾ ॥ ೨ ॥ ತರಳ ಭಾಸ್ಕರ ಪೂರ್ವ । ಗಿರಿಯೊಳುಚ್ಚಳಿಪಂತೆ । ತರಳ ಮೈ ಮುರಿದೇಳುತ್ತ । ಪರಿಶೋಭಿಸಿದಡಾಗ ಸುರಿದುದು ಸುಮ ಸೃಷ್ಟಿ । ಸುರರಿಂದಿಳೆಗೆ ಮತ್ತಾ ॥ ೩ ॥ ದುಂದುಭಿ ಮೊಳಗಿತಾನಂದದಿ ಸರ್ವರು । ನಿಂದಿರಲಜಮುಕುಂದ ॥ ಇಂದುಶೇಖರ ದಿವಿಜೇಂದ್ರರ್ಂಗೆರಗುತಿಂ । ತೆಂದ ಬಾಲಕನೊಳಂದ ॥ ೪ ॥ ಹರಸುವರೆಲ್ಲರು । ತರಳ ಶಿಖಾಮಣಿ । ಯುರಗಿನಿಬರಿಗೆಂದರೆ । ಅರಳಿದುತ್ಪಲಕೆ ಬಂದೆರಗುವ ಭ್ರಮರದೊ । ಲೆರಗಿ ಮಾರುತಿ ನಿಂದಿರೆ ॥ ೫ ॥ ವನರುಹೋದ್ಭವ ಕಂಡು ಘನತೆಯು ರಿಪುವರ್ಗ ಹನನ ಮಾಡುವ ಲಕ್ಷಣ । ತನಯಾನೊಳಿಹುದರಿಂ । ಹನುಮನೆಂಬಭಿಧಾನ । ನಿನಗೊಪ್ಪಲಿನ್ನು ಜಾಣ ॥ ೬ ॥ ಸ್ಥಿರಂಜೀವಿಯಾಗಿರೆಂ । ದೊರವಿತ್ತನಜನಾಹರನೆಂದ ತನ್ನ ಸತ್ವ । ಸರಿಗನಾಗೆನೆ ಹರಿ । ಯೊರೆದ ಮತ್ಸಖನಾಗಿ ನಿರತಬಾಳೆಂದ ಮಾತ ॥ ೭ ॥

ವಾರ್ಧಿಕ

ಸುರಪ ಸೌಭಾಗ್ಯಮಂ ಮರುತ ನಿಜಗಮನಮುಂ । ಸಿರಿಗುಹ್ಯಕೇಶ್ವರಂ ವರುಣಗಂಭೀರಮುಂ । ಹರಿಯು ಮಿತ್ರತ್ವವಂ ನಿರುತಿಂದ್ರುಜಾಲವಂ ತರಣಿಜ ಮಹಾಶಕ್ತಿಯುಂ ॥ ತರಣಿ ಚಂದ್ರರು ತೇಜ ಪರಮ ಋಷಿವರ್ಗ ದ್ವಿಜರುರುಶಾಪ ತಟ್ಟದಿರುತಿರಲೆಂದು ಮಿಂತಖಿಳ । ವರವಿತ್ತು ಹನುಮನಂ । ಪರಸಿನೆರದನಿಬರುಂ । ತೆರಳಲವರವರ ಮನೆಗೆ ॥ ೧ ॥

ಭಾಮಿನಿ

ತರುಣನಂ ಬೋಳೈಸಿ ಮಾರುತ । ನೊರೆದನಿತ್ತಲು ಮಗನೆ ನಿನ್ನಯ । ವರಜನನಿಯಂಜನೆಯ ನೋಡೆಂದೆನುತ ತಾಪರಸಿ ॥ ತೆರಳಲಂದು ಪ್ರಭಂಜನಾತ್ಮಜ । ಧರಣಿಗಿಳಿದೈತರುತ ನೈಮಿಷ । ಪರಮ ತಪಸಿಗಳಾಶ್ರಮವ ಕಂಡೆಂದ ಘನಸಹಸಿ ॥೧॥

Scanned by CamScanner

ಮಾರವಿ : ಏಕ

ಭಾಪು ಇದೆತ್ತಣ । ದೀ ಪೂದೋಟನ । ನಾ ಫಲಪಂಡಗಳು । ತಾ ಪರಿ
ಶೋಭಿಪುದಾ ಪರಿಕಿಪೆ ನ । ದ್ಯಾಪಿ ವೈಭೋಗಗಳು ॥ ೧ ॥ ಇಕ್ಷು ದಾಡಿಂಬ ಸ ।
ದ್ರಾಕ್ಷೆ ಕಪಿತ್ತಗ । ಳಕ್ಷಯುಗೊಂಡಿಹವು । ಪಕ್ಷಿ ಮೃಗಂಗಳು । ಭಕ್ಷಿಸಿ ಕೊಬ್ಬಿ ನಿ ।
ರ್ಲಕ್ಷದೊಳಾಡುವವು ॥ ೨ ॥ ವಂದೆಡೆ ನದಿಗಳು । ವಂದೆಡೆ ಕೆರೆಗಳು । ವಂದೆಡೆ
ಕುಸುಮಗಳು । ವಂದೆಡೆ ಕತ್ತಲು । ವಂದೆಡೆ ಹಗಲು ಈ । ನಂದದ ಚೋದ್ಯ
ಗಳು ॥ ೩ ॥ ಆವ ಮಹಾತ್ಮನೊ । ಭೂವರನಿದಕೆ ಮ । ತ್ತಾವನು ರಕ್ಷಕನು ।
ಆವುದುಭಯ ನಮ । ಗಾವನಾಗಲಿ । ನಾವಳ ಪೋಗುತಿನ್ನು ॥ ೪ ॥ ಸೊಕ್ಕುವೆ
ಮುಕ್ಕುವೆ ತಿಕ್ಕುವೆನಖಿಳ । ಲೆಕ್ಕಿಸದನಿತರಲಿ । ಮುಕ್ಕಣ್ಣನೆ ತಡೆ । ಸಿಕ್ಕಲಿ ಬಿಡೆ
ಧು । ಮ್ಮಿಕ್ಕುವೆ ಶೌರ್ಯದಲಿ ॥ ೫ ॥

ನಾದನಾಮಃಕ್ರಿಯೆ : ಅಷ್ಟ

ವಸುಧೇಶ ಕೇಳಿನಿತಾಡುತ್ತ । ಹಾರಿ । ಶ್ವಸನಜವನದೊಳೋಡಾಡುತ್ತ ।
ಸಸಿ ಲತೆ ಮರಗಳನೇಲುತ್ತ । ಭ । ಕ್ಷಿಸಿ ಫಲಭರಗಳ ತೇಲುತ್ತ ॥ ಕೊಳನ ತಾವರೆ
ಗಳ ಕಿತ್ತನು । ಮೃಗ । ಗಳ ಕೊಂದ ಮತ್ತನು । ತಳುವದೆ ಮುಂದೈದಿ ಕಂಡನು ।
ಮುನಿ । ಗಳು ತಪಿಸುವ ದೊಡ್ಡ ಹಿಂಡನು ॥ ೨ ॥ ಝಡಿಮಳೆ ಛಳಿಬಿಸಿಲೆನ್ನದೆ ।
ಮೂಗ । ಹಿಡಿದೇನು ಜಪ ಮಾಳ್ಪುದಿನ್ನಿದೆ । ತೊಡಕ್ಯಾತ ಕೇಳಿನ್ನು ಬಾರದೆ ।
ಮತಿ । ನಡೆಯಿರೆದ್ದೇಳಿ ನಾ ಸಾರಿದೆ ॥ ೩ ॥ ಬ್ರಹ್ಮಚಾರಿಗಳೆಲ್ಲಲೇಳಿರಿ । ಇದ್ದ ।
ಹೆಮ್ಮಕ್ಕಳನು ಪಿಡಿದೆಳೆಯಿರಿ । ನಿಮ್ಮೊಳಗಾನೊಬ್ಬನೆಂದರಿ । ದಿರಿ । ಗಮ್ಮನೆ
ಸೊಕ್ಕುವ ಬನ್ನಿರಿ ॥ ೪ ॥ ಕಡುವೃದ್ಧರತ್ತತ್ತ ಸಾಯಲಿ । ಹೋಮ । ದೊಡವೆ
ಗಳಿದೆ ಎನ್ನ ಬಾಯಲಿ । ಬಿಡಿರೆಂದೋರ್ವೋರ್ವರ ಶಿರದಲಿ । ಹೊತ್ತು ನಡೆದಿತ್ತ
ಹರಿಯುವ ಹೊಳೆಯಲಿ ॥ ೫ ॥

ಭೈರವಿ : ಏಕ

ಪೊಡವಿಪ ಕೇಳ್ಮುನಿ । ಗಡಣದುಡುಗೆಗಳ । ಕೆಡಿಸಿ ಜಪದ ಮಣಿ । ಹಿಡು
ಕೊಂಡಾಡುತ । ಕಡುಮುದುಕರ ಗಡ್ಡ । ದಡಿಯೊಳು ನೇಲುತ । ಕೊಡಕುವ ದಿನ
ಬಿಡದೊಡನಾ ಮಾರುತಿ ॥ ಕೇಳು ॥ ೧ ॥ ಗಂಧವಹಾತ್ಮಜನಂದಿರಲಲ್ಲಿಗೆ । ಮಂದಿನ
ಬೇಡರ । ವೃಂದ ಕೂಡಿ ಸು । ರೇಂದ್ರ ವಿರೋಧಿ ಪು । ಳಿಂದ ಸುಕೇಶನು ।
ಬಂದನು ವಿವಿಧಾನಂದದೊಳುಲಿದು ಕೇಳು ಭೂಪ ॥ ೨ ॥ ಅಪ್ಪಗಳಿರ ತ ।
ಮ್ಮಪ್ಪಗಳಿರ ಎ । ನ್ನಪ್ಪಗಳಿರ ಹೋಗಿ । ರಪ್ಪೊಡೆ ಈ ವನ । ತಪ್ಪದೆ ಮೃಗ
ಗಣ । ಒಪ್ಪಿ ಮುನಿಜನ । ರಪ್ಪಳಿಸಿರಿ ಬಲ । ವಿಪ್ಪೊಡೆಂದಾಡುತ । ಬಂದರಾಗ ॥೩॥
ಮಡುವಿಗೆ ಬೆದರಿದು ಕಡಲೊಳು ಮುಳುಗಿದ । ಪರಿಭವವಿರ್ಮಡಿಸಿತು ಶಿವ ಶಿವ ।
ಮೃಡನೆ ಗತಿಯೆಂದೊಡನಾ ಮುನಿಗಳು ನಡುಗುತಲೋಡಿದರೆಡೆರೆಡೆಯರಸುತ ॥

॥ ಕೇಳು ॥ ೪ ॥ ಕಂಡು ಮರುತ್ಸುತ । ಚಂಡಕಿರಾತರ । ತಂಡಪನ್ನೆಗೆ । ಹಿಂಡುವೆ
ನವದಿರ । ಪುಂಡಿಗ ಬಿಡೆ ಬಿಡೆ । ಗುಂಡಿಗೆ ರಕುತವ । ದಂಡಧರನ ಗಣರುಂಡೆ
ಮುರಿಯಲಿ ॥ ೫ ॥

ಕಂದ

ಸಿಡಿಲ ಕಠೋರ ಧ್ವನಿಗಿಂ । ಮಡಿ ಭೋರ್ಗುಡಿಸುತ ಕಲ್ಪಾಂತದ ಮುಗಿಲಿಂ
ಮೇಲ್ ॥ ಸಿಡಿಯುವ ಮಿಂಚಿಂ ಮಿಂಚಿದು । ಕಡಲ ಹರಿಯ ಭಟ ಮಾರುತಿ
ವ್ಯಾಧರ ತಡದಂ ॥ ೧ ॥

ಪಂತುವರಾಳಿ : ಮಟ್ಟೆ

ಧಾರುಣೀಂದ್ರ ಕೇಳು ಬಲವ । ಗಾರು ಗೆಡಿಸುತ । ಮಾರಿಗೌತಣವನು
ಕೊಡುತ । ಮಾರುತನ ಸುತ । ಮೇರುವರಿವುತಿರಲು ಕಂಡು । ಭೂರಿ ಗಜರುತ ।
ಧೀರನಾ ಸುಕೇಶನೆಂದ । ಮೀರಿ ಜರವುತ ॥ ೧ ॥ ಪೂತುರೇ ಮಧಾಂದ ಕೋತಿ
ಯಾತಕೆಮ್ಮಯ । ಖ್ಯಾತಬಲರ ಕೊಲುವೆ ಬರಿದೆ । ಸೋತು ಸಾಯದಿರೆನೆ ನುಡಿದ
ಮಾತ ನಿರ್ಣಯ ॥ ೨ ॥ ಫಡಫಡೆಲೆ ಕಿರಾತವರ್ಯ । ನುಡಿಯೊ । ನುಡಿಯೆಲ ।
ಕೆಡಿಸಿ ಮುನಿವನಗಳ ಸೂರೆ । ಗೊಡುತ ಮೆರೆವೆಲ । ನಡೆ ದುರಾತ್ಮ ಧರ್ಮ
ಗಿರ್ಮ ಕಡೆಗೆ ನೋಳ್ಪಿಲ । ಮಡಿದ ಬಲಕೆ ಒಡೆಯನೆನಿಸಿ । ಬಿಡುವೆ ನಿಲ್ಲೆಲ ॥ ೩ ॥
ಬಗುಳ ಬೇಡ ಕೋತಿ ತನ್ನ । ಮೊಗದ ಡೊಂಕಿಗೆ । ಒಗೆಯೆ ಕನ್ನಡಿಯನು
ಹೋಯ್ತೆ । ಹಗರಣದಿ ಮಿಗೆ । ವಿಗಡ ಮುನಿಗಳಿಂಗನಿತ್ಯ । ದಗೆ ಕೊಡುತ ಬಗೆ ।
ಬಗೆಯೊಳೆಮ್ಮ ಜರವೆ ತರವೆ ಜಗಳ ಸುಮ್ಮಗೆ ॥ ೪ ॥ ಕಮಲಿನಿಯರ ವೃದ್ಧಿ
ಕ್ಷಯಗಳ । ಮರಿ ಮಾಳ್ಪದು । ದ್ಯುಮಣಿಯಾಧಿಕಾರವಲ್ಲ । ದಮರಿ ಮತ್ತದು ।
ಸಮನಿಸುವದೆ ಸೈರಿಭಂಗೆ ಕುಮತಿ ಎನ್ನದು । ಕಮಲ ಮಿತ್ರನಂತೆ ಕೋಣ
ಗಮನ ನಿನ್ನದು ॥ ೫ ॥ ಕೋಡಗಂಗೆ । ಕೋಡು ಬಂತೆ । ಖೋಡಿ ಕಪಿವರ ।
ರೂಢಿಸುರರ ಪಕ್ಷಪಾತ । ವಾಡಲವದಿರ । ರೂಢಿಸಿದ ಕುಮಾರ ನೀ । ನೋಡು
ಸಂಗರ । ಪಾಡನರಿಯೆಂದೆಚ್ಚ ವಿಶಿಖ । ತೊಡಲವಸುರ ॥ ೬ ॥ ನೊಂದ ಹಂದಿ
ಯಂತೆ ವಾಯು । ಕಂದ ಗಜರುತ । ಎಂದನೆಲವೊ । ಹಂದೆಯೆನಗೇ । ನೆಂದೆ
ಯುಬ್ಬುತ । ನಿಂದು ನೋಡು ಸತ್ವದೊಲವನೆಂದು ಜರವುತ । ಒಂದು ತಿಮಿಯ
ಲಸುವು ಜಾರಿ । ತಂದು ಜಿನುಗುತ ॥ ೩ ॥

ಭೈರವಿ : ತ್ರಿವುಡೆ

ಮತ್ತ ಮತ್ತೈತಪ್ಪವ್ಯಾಧರ । ಮೋತ್ತಮೋತ್ತವ ಕಂಡುಕಂಖಿತಿವೆತ್ತು
ವಿಲಯದ । ಕೃತ್ತಿವಾಸನ । ಮತ್ತ ಶಿಖಿದೃಶ । ಶಿಖಿಯೊ । ಶಿಖಿಗಿರಿ । ಮೋತ್ತವೊ
ಎನ । ಲೆತ್ತಿ ಮೊಗನೆಗಸುತ್ತಲನಿಬರ । ಹೊತ್ತಿಸುವೆನೆ । ನ್ನುತ್ತಲಾ ವನ ।
ಸುತ್ತ ವಹ್ನಿಯ । ಹತ್ತಿಸಿದ ಶಿಖಿ । ಸೂಕ್ತ ಮಂತ್ರದೊಳೇನನೆಂಬೆ ॥ ೧ ॥ ಚಿಟಿ
ಚಿಟಿಲ್ ಚಿಟಿಲೆನುತ ಶಿಖಿ ದಿ । ಕ್ಕಟವ ಮಿಕ್ಕಿಯಜಾಂಡ ತುಂಬಿಯು । ತ್ಕಟ

Scanned by CamScanner

ಕಿರಾತರ ಕೋಟಿ ಸಂಖ್ಯೆಯು । ಭಟ್ಟರ ನಿರ್ಮೂಲಿಸುತ ಮಿಗೆಯುರಿ । ಪುಟ ನೆಗದು ತರುಗುಲ್ಮಲತೆ ಮೃಗ । ಕಟಕ ಪಕ್ಷಿ ನಿಕಂಡಗಳ ಸಲೆ । ಭಟುಗೊಳಿಸಿತೇ ನೆಂಬೆನದಿ ಜಲ । ಚಿಟುಕು ಬಿದ್ದಲ್ಯುದುದಿಳೆ ತಾ । ನೇನನೆಂಬೆ ॥ ೨ ॥ ದುರುಳ ಮತಿ ಮೂಷಿಕನ ದ್ವೇಷದೋಳುರಿಯು ಮನೆಗಿಟ್ಟಂದ ವ್ಯಾಪ್ತಿ । ದುರುಳಗೋಸುಗ । ನಮಗೆಂ । ದಿರುವ ಋಷಿಗಳುಮವರಸ ಸತಿಸುತ । ರುರು ಕುಟುಂಬವ ಹೊತ್ತು ಶಿರದೊಳು ಗುರಿಯು ತಪ್ಪಿಸಿ ಕ್ರುದ್ಧಸುಬಲನ । ಪರಿಗೆ ಹಿಗ್ಗಿದು ಮುನಿಕುಮಾ ರರು । ಪರದರೊಂದೊಂದನುವ ಯೋಚಿಸು । ತ್ತೇನನೆಂಬೆ ॥ ೩ ॥

ಕಂದ

ಇರಗೊಡ ನಿನ್ನಿವಲೋಕವ । ನೆರೆಯಿದರಿಂ ತನ್ನಯ ಸತ್ವವ ತಾನರಿಯುದೊ । ಲಿರಲೆಂದರು ಹನುಮಂ ತಾ । ನರಿವನೆಯಿದರಿಂ ಜಂಭದಿ ನರರೇಂ ಗೈಯರ್ ॥ ೧ ॥

ಭಾಮಿನಿ

ಸಗರಕುಲ ಚಿತ್ತೈಯಿಸು ಮರುತನ । ಮಗನುರಿಯು ನಂದಿಸುತ ಬಳಿಕಾ । ವಿಗಡ ಮುನಿಕುಲವಿರಿಸಿತದ್ವನದಿಂದ ಪೊರವಂಟು ॥ ಜಗದ ಗಂಡರಗಂಡ ನೀರೇಳ್ । ಜಗವ ಸುತ್ತಿದು ಬಂದು ಋಕ್ಷನ । ಮಗಳೊಳರುಹಿದ ತನ್ನವಸ್ಥೆಯು । ಪದಕೆ ಪ್ರೊಡವಂಟು ॥ ೧ ॥

ಸೌರಾಷ್ಟ್ರ : ಅಷ್ಟ

ಚಿತ್ತಾವಧಾನ ಪರಾಕೆಬಿನ್ನಹವಿದ । ತಾಯೆ ಕೇಳು । ನೀವು । ಚಿತ್ತೈ ಸಲಾನಿತ್ತ । ನಭಮಣಿರಥವೇರ್ದೆ ॥ ತಾಯೆ ಕೇಳು ॥ ಸುರಪನೊಳಾಂತು ಸಂಗರದಿ ಕೈ ಸೋತೆಮೇಲ್ । ತಾಯೆ ಕೇಳು । ಪಿತ । ಮರುತನ ದೆಸೆಯಿಂದ । ಹರಿಹರ ಜರ ಕಂಡೆ । ತಾಯೆ ಕೇಳು ॥ ೨ ॥ ತಾತನಪ್ಪಣೆಯಿಂದ । ಬರಲಿಂದು ಪಥದೊಳು । ತಾಯೆ ಕೇಳು । ಘೋರ ಪಾತಕಿಗಳ ಸುಟ್ಟು । ತಿರುಗಿದೆ ಪರಿಯಿದು । ತಾಯೆ ಕೇಳು ॥ ೩ ॥

ಕಂದ

ಬೂಟಕವಲ್ಲೌತವ ಪ್ರಿಯ । ನಾಟರೆ ಮಲಗಿಮಾರುತನೆರದಂ ನಿಮ್ಮ ॥ ನೀಟುನ್ನಿಡಿಯಿದುಯೆಂದ । ಪಾಟಲವೊಗನಭಿವಂದಿಸಿ ಮಗುಳಿಂತೆಂದಂ ॥ ೧ ॥

ವಾರ್ಧಿಕ

ತಾಯೆ ಕೇಳ್ಕಾಮರ್ಗಿಲೊಳಡಗಿದಿನನೆಂತೆ ಮತಿ । ದಾಯ ಧೈರ್ಯದ ದ್ಯುತಿಯು ಮುಲಿನವ್ಯಾಪ್ತೆನಗಿದಕೆ । ಪಾಯವೇನರುಹೆಂದು ಮಣೆದಡನ್ನೆಗೆ ಕಪಿಕ ಮಲಾಯತಾಂಬಕಿ ಮನದೊಳು ॥ ವಾಯು ಕೂಡಿದಕಾಗಿ ನಾಚಿ ಕುಗ್ಗುವಳೊ ರ್ವೆ । ಮಾಯಶೋನಿಧಿ ಮಗನ ನೋಡಿ ಹಿಗ್ಗುವಳೋರ್ವೆ । ಸ್ಥಾಯಿಗೊಟ್ಟಾ ಘನವ । ಬಳಿಕಬ್ಜಮುಖಿ ಪೇರ್ವೆಯಿಂ ತನುಜನಿಂಗಿಂತೆಂದಳು ॥ ೧ ॥

ಪರಿವರ್ಧಿನಿ

ತನೆಯನೆ ಕೇಳ್ವನದಹನದ ಸಹಸಕೆ । ಮುನಿಸುತರುಬ್ಬುತ ತನ್ನಯ ಸತ್ವಗಳನು । ತಾ ಮರೆಯಲೆಂದೊರದು ಮದು ಮುಂದಕೆ ಮೊಸಲವ್ಯಾಪ್ತು । ಮನುಮಥಪಿತದಶರಥಗೆ ರಾಮಾಖ್ಯದಿ । ಜನಿಸುವನವನಂ ಸೇವಿಸು ಧನ್ಯನು । ಎನುತಾ ಮಂತ್ರವನುಸುರಿಪರಸೆ ಹನು । ಮನು ಬೀಳ್ಕೊಂಡೋತೂ ॥ ೧ ॥

ಭಾಮಿನಿ

ಓದಿದನು ಸೂರ್ಯನಲಿ । ಸಾಸಿರ ವೇದವನು ಬಳಿಕೈದಿ ಸುರಪನ । ಲೋದಿದನು ಸೂತ್ರದ ಸುರೇಂದ್ರ ವ್ಯಾಕರಣ ಶ್ರುತಿಯಾ ॥ ಹೇ ದಿವಾಕರ ಕುಲಜಕೇಳ್ಮಂ । ದಾದ ಕಥನ ವಿನೋದ ಭೂಚರ । ಕೈದವರೊಳಿನಸೂನು ಕಂಡನು ಬಂದು ಪಿತನಡಿಯಾ ॥ ೧ ॥

ಷಟ್ಪದಿ : ಮಟ್ಟೆ

ವಂದನಂ ಪರಾಕೆ ತಾತ । ಸಿಂಧವಳಯದಖಿಳ ಧರಣಿ । ವೃಂದವೆಲ್ಲ ಸುತ್ತಿ ಸುತ್ತಿ । ಕಂಡೆವೈ ಭವಾ । ಮಂದಮತಿಗಳಾಗಿ ಧುರಕೆ । ನಿಂದ ರಿಪುಗಳೆದೆಗೆ ತಿವಿದು । ಮಂದಜಾಪ್ತಜಾತನೆಡೆ ಕಳುಹಿಸಿದೆ ಜವ ॥ ೧ ॥ ಚಂಡಕರತತ್ತೇಜ ಕೇಳು । ದ್ದಂಡ ಕ್ರೌಂಚ ದ್ವೀಪದರಸ । ಪುಂಡವಾನರೇಶರು ಮನೊ । ಳೊಂದು ವತ್ಸರ । ಅಂಡ ಲೆಯದೆ ಕಾದಿ ಸೆಳದುಕೊಂಡೆನವನ ಸುತೆ ರುಮೆಯನು । ಕಂಡು ಕಪ್ಪವಿತ್ತು ಮತ್ತೆ । ಕೂಡಿಯುವದಿರ ॥ ೨ ॥ ಮೇರುಗಿರಿಯನಡರಿ ತಂದೆ । ನೀರಜಾಪ್ತಗೆರಗಿ ನಿಂದೆ । ಘೋರನೆತ್ತಿ ನುಡಿದ ಮಗನೆಯಡರು ಬಂದರೆ ॥ ಸಾರಲಿತ್ತು ಪೊರೆವೆನೆಂದು । ಭೂರಿಪರಸಿ ಹರಿಯ ಸಂಗ । ಸೇರುವದು ಮುಂದೆನಲು ಬಂದೆನೆಂದು । ನೆಂದಿರೆ ॥೩॥

ವಾರ್ಧಿಕ

ಅಮಿತ ಬಲದೊಡನೆ ವಿವಿಧ ದ್ವೀಪ ಪತಿಗಳಿಹ । ಸುಮುಖ ದುರ್ಮು ಖರು ಮರುಕಪ್ಪವನ್ನಿತ್ತು ಮಿ । ದ್ಯುಮಣಿಜಂ ಪ್ರೌಢ ನಮ್ಮ ಗೆಲಿದನೆನುತೆರಗೆ ಋಕ್ಷರಾಜಂ ಮನದೊಳು ॥ ಸುಮತಿಯಿಂ ಮನ್ನಿಸುತ ಹೇ ರುಮೆಯ ಸುಧರ್ಮ । ರಮಣಿ ಎನಿಸುತ ನಂಟರಂ ಕಳುಹಿತಿರಲಾಗ । ಸಮರ ಕಂಠೀರವಂ ಭೈರವಾಡಂ ಬರದ ವಾಲಿ ಬಂದಂ ಭರದೊಳು ॥ ೧ ॥

ಕಂದ

ಬಂದಂ ಪಟುಭಟನಾಗಂ । ನಿಂದಾ ತಂದೆಯ ಪದಕಭಿವಂದಿಸುತಾಗಳ್ ಎಂದಂ ತನ್ನಾಳ್ತನ ಸಂ । ಬಂಧದ ಸಮತೆಯ ನಿರದೊಡನತಿ ಮುದದೊಳ್ ॥ ೧ ॥

ತುಜಾವಂತು : ಝಂಪೆ

ಲಾಲಿಸೈ ಬಿನ್ನಪವ । ತಾತ ವಿಖ್ಯಾತ । ಶೀಲಕಪಿಕುಲಕಮಲ । ಲೋಲ ಖದ್ಯೋತ ॥ ಲಾ ॥ ಪಲ್ಲ ॥ ನಿಮ್ಮ ಪಾದವನುಳಿದು ಮೇಲಾವು ಸೋದರರು

Scanned by CamScanner

ಬೊಮ್ಮಗಿರಿ ಪರಿಯಂತ । ಒಡನೆ ಸಾರಿದೆವು । ತಮ್ಮನನು ಬಿಟ್ಟು ನಾ ಸತ್ಯ ಲೋಕವನಡರಿ । ನಿಮ್ಮ ತಾತನ ಕಂಡು ಮಣಿದೆನಿದುದಿಟವು ॥ ೧ ॥ ಮಾರಾಂತ ರಿಪುಗಳರ್ಧಾಂಶ ಸತ್ವವು ಧುರದಿ । ವೀರ ನಿನಗಿರಲೆಂದು ವರವಿತ್ತನಜನು ॥ ಸಾರಿದೆನು ಬಳಿಕ ಕೈಲಾಸಶಿಖರವನಲ್ಲಿ । ಮಾರಾಂತಕಗೆ ನಮಿಸ । ಲಭವ ಮೆಚ್ಚಿದನು ॥ ಲಾ ॥ ೨ ॥ ಖಂಡಿತಾಹವದೊಳು । ದ್ದಂಡ ಬಲನಾಗೆಂದ । ಖಂಡಪರಶುವನು ಬೀ । ಳ್ಕೊಂಡು ನಾ ಬರುತ ॥ ಪುಂಡರೀಕಾಕ್ಷನೊಡಗೊಂಡು ದಿವಿಜಾಸುರರ ತಂಡ । ವಾರ್ಧಿಯ ಮಥಿಪುದಂ ಕಂಡೆ ತಾತ ॥ ೩ ॥ ಘಡ ಯಿನಿಬರ್ಾಕಿದಕೆ । ಬಿಡಿ ಸಾರಿರೆಂದು ಕೈ । ದುಡುಕಿ ವಾಸುಕಿ ಹಿಡಿದು । ಕಡೆದೆ ನಾ ಶರಧಿ ॥ ಘಡೆ ತೊಲಗಿತೆನಗಂಜಿ । ಒಡನೆ ಮೆಚ್ಚಿದರೆಲ್ಲ । ಜಡಜಾಕ್ಷನೊಬ್ಬ ಮತ್ಸರ । ವಿಡಿದ ಮನದಿ ॥ ೪ ॥ ಲಂಘಿಸಿದೆ ಮೇಣು ಹದಿನಾಲ್ಕು ಭುವನಂಗಳನು । ಭಂಗಿಸಿದೆ । ಸುರಸುಜನ ದ್ವೇಷಿಗಳ ಮುಂದೆ । ಅಂಗ ವಂಗ ಕಳಿಂಗ ಕಾಂಬೋಜ ಮುಖ್ಯವನಿ । ಭಂಗಿಸುತ ನವಖಂಡಗಳ ತಿರುಗಿ ಬಂದೆ ॥ ೫ ॥

ವಾರ್ಧಿಕ

ತಾತ ಕೇಳ್ ನಿತ್ಯ ತ್ರೈಕಾಲದೊಳ್ ಚತುರಬ್ಧಿ । ನಾ ತೆರಳ್ದೆನಗರ್ಘ್ಯವೀವ ವ್ರತವಂ ಮನದೊ । ಳೋತು ಕಲ್ಪಿಸಿದೆ ಪುಣ್ಯಾತ್ಮ ಕೇಳಿನ್ನೊಂದ ಪಾಲ್ಗಡಲ ಕಡೆದನು ॥ ಜಾತಳಾಗಿಹ ತಾರೆಗಾ ಶಶಿಗು ತನಗು ಧುರ । ವಾಂತಡಜ ನಿಲಿಸಿ ಧನ್ವಂತರಿ ಸುಷೇಣನಹ । ನಾತಗಿವಳುದಿಸುವಳು ನೆರೆಯೆಂದೆನಗೆ ನಿತ್ಯಾತುಮಂ ಕೇಳೆಂದನು ॥ ೧ ॥

ಭಾಮಿನಿ

ತಂದೆ ಕೇಳಿವನೇ ಸುಷೇಣಕ । ನಿಂದವಳೆ ಸುತೆ ತಾರೆ ನೀ ಮನ । ಬಂದುದಂ ಮಾಡೆಂಬ ಮಗನಂ ತಳ್ಕವಿಸಿ ಮುದದಿ ॥ ನಿಂದು ಶ್ರುತಿಮತದಿಂದ ಮದುವೆಯು । ಮುಂದೆ ಪಟ್ಟೋತ್ಸಹವ ಸರಿ ಎರ । ಡೊಂದು ಸಂಭ್ರಮ ಗೈಸಿ ಸುತೆಗಿಂತೆಂದ ಗುಣವನಧಿ ॥ ೧ ॥

ತೋಡಿ : ಅಷ್ಟ

ಕೇಳಿದ್ಯೆ ಸುಕುಮಾರ ಮಸ್ತಕ । ಮೌಳಿ ಸಂಗರ ಶೂಲಿ ವಾಲಿ । ಯಾಳು ನೀನೀ ರಾಷ್ಟ್ರವನು ಸುಖದಿ । ಮೇಳವಿಸೆ ವಾರ್ಧಿಕ್ಯವಿನ್ನೀ । ಹಾಳು ಮೋಹ ಸ್ಥಿರ ಬದುಕಿಗೆ । ಬೀಳಲೇ ತಾ ನೋಡು ನೀ ಮನದಿ ॥ ೧ ॥ ಮೂರು ಈ ಕ್ಷಣ । ವಾರು ರಿಪುಗಳು । ಬೀರೆಯುಷ್ಟವು ಭೋಗಯೋಗ ಸೇರಿ ತೊಂಭತ್ತಾರು ತತ್ತ್ವಗಳು । ಆರ ವಶವಿದು ಮರುಳು ಜೀವನ । ವಾರಿಗತಿಹಿತ ಕಡೆಗೆ ಬ್ರಹ್ಮಾ । ಕಾರನವ ಹಿಡಿಗಮರುವನೆ ಪೇಳು ॥ ೨ ॥ ಮೂರು ಮೂರ್ತಿಗಳಾದಡೆಯು ಲಯ । ವಾರಿ ಬದ್ಧರು ಬದ್ಧನೊಬ್ಬನೆ । ಕಾರಣಾತ್ಮಕ ತ್ರೈಗುಣಾನ್ವಯನು । ಸೇರಿ

ಸೋದರರೊಡನೆಯುದರಿಂ । ಮೇರೆ ದಪ್ಪದೆ ಧರ್ಮದಿಂದಧಿಕಾರ ಮಾಡಪ್ಪಯ್ಯ ಎಂದವನು ॥ ೩ ॥

ವಾರ್ಧಿಕ

ಏರಿ ವೈರಾಗ್ಯದೊಳ್ ಬ್ರಹ್ಮಕೈವಲ್ಯಸುಖ । ಪೂರನಾದಂ ಋಕ್ಷನಿತ್ತಲಿಂದ್ರಜಸ್ವಾಧಿ । ಕಾರದಿಂದೆಸದ ಕೇಳ್ಮಂಗಥೆಯ । ಪೂರ್ವದೋಳ್ ದಿತಿ ಪೌತ್ರ ಮಹಿಷ ಖಳನು ॥ ತೀರೆ ಶಾಂಭವಿಯೊಳ್ಭಯದಿಂದ ಲವನನುಜ । ಕ್ರೂರ ದುಂದುಭಿ ಸುತಳಮಂ ಪೊಕ್ಕು ಸಕುಟುಂಬ । ಸೇರಿರಲ್ಕೊಂದು ದಿನ ಮವನಸುತ ಮಾಯಾವಿ ಯೊಡ್ಡೋಲಗಂ ಕೊಟ್ಟನು ॥ ೧ ॥

ಸೌರಾಷ್ಟ್ರ : ತ್ರಿವುಡೆ

ಕೇಳ್ದಿರೇ ಭಟವರ್ಗ ಮೊದಲಿನ । ದಾಳ್ದುಳದಿ ಮತ್ತೇಭ ಕುಣಿಯೊಳು । ಬೀಳ್ದ ಓಲವ್ ಬಿದ್ದೆವಿಲ್ಲಿ ಮೇ । ಲಾಳ್ದ ಸುರಪ ॥ ೧ ॥ ಕ್ಷೀಣಬಲನವನೆತ್ತ ಬಲ್ಲನು । ಜಾಣರಂಗವ ಸೊಕ್ಕಿದನೆ ಹುಲು । ಕೋಣ ಮದಗಜವಹುದೆ ನಮಗೆ ಧು । ರಾಣೆ ಸುರಪ ॥ ೨ ॥ ಅಜಗಳ ಸ್ತನದಂತೆ ಪೌರುಷ । ರುಜುವೆ ಛೀ ಬಾಯೊಳಗಾಡಲೇಂ ಫಲ । ವಿಜಯಯಾತ್ರೆಗೆ ಪೋಗಿ ದಿವಿಜ । ವ್ರಜವನಿಂದು ॥೩॥ ಕೊಚ್ಚಿ ನೆರೆ ರಕುತವ ಬಿಡೌಜನ । ನಚ್ಚ ಮೂರ್ಧ್ನ ಕಪಾಲ ಪಾತ್ರದಿ । ಮೆಚ್ಚಿ ಮೊಗ ಮೊಗದಿತ್ತು ಗಣಗಳ । ಹಚ್ಚಿಸುವೆನು ॥ ೪ ॥ ಖಂಡ ಪರಶುವಿರಿಂಚಿ ಮಾಧವ । ರಂಡಲೆದು ಬರಲವದಿರನು ಕರ । ದಂಡದಲಿ ದಂಡಿಸದಿರಲ್ಕೆ ನಾ । ಗಂಡುಸಲ್ಲ ॥ ೫ ॥

ವಾರ್ಧಿಕ

ವ್ಯಗ್ರದಿಂದೇಳಿ ನೀವೆಂದಖಿಳ ಭಟರೊಡನೆ । ನಿಗ್ರಹಕೆ ಪೊರವಂಟ ಭರ್ಗನಿಭಸುರತ್ರಾಣ । ನುಗ್ರಸಾಯಕರಥ ತುರಂಗಕಂ ಘಟೆಗಳಂ ನೆರಹಿ ಸರಭಸದಿಂದಲಿ ॥ ನಿಗ್ರಹಿಸುವೆಂ ಜಗದದಳದುಳದೊಳೆಂದು ಶೌ । ರ್ಯಾಗ್ರೇಸರಂ ಪ್ರೊಸಿ ರಣಭೇರಿಯಂ ಮಾ ಸ । ಮಗ್ರ ಬಲದೊಡನೈದಿ ಮುತ್ತಿದಂ ಸುರಪುರವ ಗಜಬಜಿಸುತಮರರಲ್ಲಿ ॥ ೧ ॥

ಭಾಮಿನಿ

ಕೇಳಮರರಧಿನಾಥ ಖೂಳರ । ಮೇಳದಿಂ ಮಾಯಾವಿಯಂ ಭವ । ಕಾಳಗಕೆ ನಡೆತಂದ ಶೌರ್ಯಾಡಂಬರದೊಳೀಗ । ಏಳಬೇಕೆನಲಡರಿ ಮದಗಜ । ಗಾಳಿಯಂತಕ ಮುಖ್ಯ ಪಟುಭಟ । ರೊಳೀ ಇಂದೊಡನೈದಿ ರಿಪುಬಲ ಪೊಕ್ಕ ಹರಿಯಾಗ ॥ ೧ ॥

ಶಂಕರಾಭರಣ : ಮಟ್ಟೆ

ಉಭಯ ಬಲವು ಚೂಣಿಯಿಂದ । ರಭಸವೇರುತ್ತ । ವಿಭತುರಂಗ ರಥ ಪದಾತಿ । ಯುಭಿನದೋರುತ್ತ । ಅಭವ ಮೆಚ್ಚುವಂತೆ ಸೆಣಸಿ । ನಭಚರೌಘತಾ ।

ಸುಬಗರಾಗಲಧಟಿ ಪಡೆಗೆ । ಯುಭಯ ಬೀರುತ್ತ ॥ ೧ ॥ ಚಂಡಬಲ ಮಾಯಾವಿ ಧನುವ । ಗೊಂಡು ಭರದಲಿ । ಖಂಡಿಸುತ ಬ್ರಹ್ಮಾಂಡ ದಿವಿಜ । ತಂಡದೆಡೆಯಲಿ । ಭಂಡನಾರೊ ಸುರಪ ಜಗದು । ದ್ಧಂಡ ಕಡುಗಲಿ । ಅಂಡನಹುದೊ ಭಳಿರೆ ಗುರುತ । ಕಂಡೆ ಮೈಯ್ಯಲಿ ॥ ೨ ॥ ಘಡಘಡೆಲವೊ ಯಾತುಧಾನ । ರೊಡೆಯ ನಿಲ್ಲೆಲ । ಬಿಡದೆ ಗುರುತ ಮಾಳ್ಪೆ ನಿನ್ನ । ವಡಲೊಳೀಗೆಲ । ವಡೆಯನಾರು । ಕಡಲಜಲಕೆ । ನುಡಿಸೆ ಕರುಳ್ಗಳಾ ತಡವನಾರು ತೋರು ನಿನ್ನ । ಘಡೆಯೊಳಾಳ್ಗಳ ॥ ೩ ॥ ಕಡುಕಠೋರ ನುಡಿಯ ಕೇಳ್ದು । ದಢಿಗ ರಕ್ಕಸ । ನುಡಿದನೆಲವೊ ಹಂದೆ ತೊಡಕು ತೊಡಕು ಸಾಹಸ । ಒಡೆಯ ಜಲಕಗಸ್ತ್ಯನಂದು ಕುಡಿದ ಸರಭಸ । ಗೊಡುತ ಕುಡಿವೆ ನಿನ್ನ ರಕುತ । ಬಿಡೆನು ಪೌರುಷ ॥ ೪ ॥ ಬಂದ ಬಂದ ನಾಯ್ಗಳೆಲ್ಲ । ನಿಂದು ಕುಡಿದರು । ಹಂದಿಸತ್ವ ಇತ್ತು ಮಿಗುವು । ದೆಂದುತಿಳಿದರು । ಬಂದು ಹಲವು ಹಂದೆಗಳು ನಿ । ನ್ನಿಂದಲಿ ಚುರೂ । ಕಿರಿದ ಕಾಡಿ ಸತ್ತರೆನ್ನೊ । ಳಿಂದು ತೊಲಗಿರು ॥ ೫ ॥ ಅಮರಲೋಕ । ದಮರಿಯರೊಳ । ಗಮರಿ ಮಾಡುವ । ಭ್ರಮಿತ ಭ್ರಮೆಯ । ಭವ್ಯ ಘನದು । ಭ್ರಮೆಯ ನುಡಿಯುವ । ಸಮತೆ ಸಾಕು ಬಿಡು ಬಿಡಲವೊ । ಯಮಿತ ವೈಭವ । ಕ್ಷಮೆಯದಮರಲೋಕ ಬಿಟ್ಟು । ನಮಿಸು ಸುಡು ಭವ ॥ ೬ ॥ ಕುಮತಿ ಕೇಳು ಸುಮನಸರೊಳು । ಯಮನು ಸೇರಿದ । ಅಮಿತ ಭೋಗವವನ ರಾಜ್ಯ । ಸಮದೊಳಾಳಿದ । ನಮಗೆ ಬಿಡು ನಿಲ್ಲೆಂದು ಕುಲಿಶ । ವನು ಝಡಿವುದ । ಸಮದಿ ಕಂಡು ಗದೆಯಗೊಂಡು ದುಮುಕಿ ಕಾದಿದ ॥ ೭ ॥

ಭಾಮಿನಿ

ಇಂತು ಖಾಡಾಖಾಡಿಯಲಿ ಖತಿ । ಯಾಂತು ಸೆಣಸಿದರಸ್ತ್ರಗ । ಳಂ ತರಿವ ಭರ ಕಬ್ಜ ಜಾಂಡಕಟಾಹ ಬಿರಿವಂತೆ ॥ ಅಂತರಂಗದಿ ನೊಂದು ಸುಮನಸ । ಕಾಂತ ಮೆಲ್ಲನೆ ತೊಲಗಲಿತ್ತ ಕ್ಸ । ತಾಂತನೋಲ್ ಖಳ ಕೊಲಲು ತೊಡಗಿದ ಸುರರ ನೋರಂತೆ ॥ ೧ ॥

ಕಂದ

ನಿರುತಿ ಕೃತಾಂತಃ ಪತಿ । ಪುರಹರ ಹರಿ ಮರುತ ಧನೇಶರ ಧುರದೊಳು ನೆರೆಗೆಲ್ದುಂ । ಸಿರಿಯಂ ಸೂರೆಗೊಂಡುಬ್ಬ । ರದೊಳ್ಪುರ ಕೈದಿ ಸಿತಾರಥವೇರ್ದಂ ॥ ೧ ॥

ಭಾಮಿನಿ

ಸಾರಥಿಯು ಘರ್ಜಿಸುತ ಘನ ಪೊಂ । ದೇರ ಹಾರಿಸಲಾನಭಾಂಗಣ । ಚಾರಿಯಾ ಖಳ ನವ್ಯ ಸುಮ ಮಂಟಪದ ಮಧ್ಯದಲಿ ॥ ತಾರೆಗಳ ಮಧ್ಯದೊಳು ಪೂರ್ಣಿಮಿ । ಚಾರುಚಂದಿರನಂತೆ ಕುಳಿತಿಹ । ನಾರಿ ಖುಕ್ಷಕುವರಾರಿಯಳ ಕಂಡೆಂದ ಮನಸಿನಲಿ ॥ ೧ ॥

ವಾರ್ಧಿಕ

ಪೊಳೆವ ವಿಧುವದನದಿಂ ದಾಡಿಂಬರದನದಿಂ । ನಳಿನದ್ರುಗ್ಗೋಲದಿಂ ಪರ್ಣಕಪೋಲದಿಂ । ಥಳಥಳಿಪಸುವಧರದಿಂ ಭ್ರೂಲತಾ ಚದುರದಿಂ ಚಂಪಕಾನಾಸ್ಯದಿಂದ ॥ ಸುಳಿಗುರುಳಬಂದದಿಂ ಕಂಬುಗಳ ಚಂದದಿಂ । ಕಲಶಕುಚ ಭಾರದಿಂ ಹರಿ ಮಧ್ಯ ಸಾರದಿಂ । ಎಳೆ ಬಾಳೆ ತೊಡೆಗಳಿಂ ದಾಭರಣದೆಡೆಗಳಿಂ । ರಾರಾಜಿಸುವಳ್ಯಾವಳೋ ॥ ೧ ॥

ಕಂದ

ಎಂದತಿ ಭ್ರಮೆಗೊಂಡಾ ಖಳ । ಸ್ಯಂದನವಿಳಿದಂಜನೆಯಳ ಹತ್ತಿರೆ ಬಾದುಂ । ಮಂದಸ್ಮಿತಾನ್ವಿತ ಮೃದು ಸ । ನ್ಮಂದರನುಡಿ ಎಂದಂ ಪೂರ್ಣಾನಂದದೊಳಂ ॥ ೧ ॥

ರೇಗುಪ್ತಿ : ಏಕ

ಯಾಕಿಲ್ಲಿ ಕುಂತಿದ್ದೆ ಸುಂದರಿ । ಎಲೆ ಹೊಂತಗಾರಿ । ಯಾಕಿಲ್ಲಿ ಕುಂತಿದೆ । ಸುಂದರಿ ॥ ಯಾಕಿಲ್ಲಿ ಕುಂತಿರ್ಪೆ ಸೋರಿ । ಸಾಕಾರ ಶೃಂಗಾರಿ ಚದುರಿ । ಕೋಕಭಾಪಯೋದ್ವಯಳೇ । ನೀ ಏಳೆ ಏಳೆ ॥ ಯಾ ॥ ಪಲ್ಲ ॥ ಮಾರನೆಂಬ ಕ್ರೂರ ಭಟನ ॥ ಭಾರಿ ಬಂದುದೆನಗೆ ಕೈ । ಸೂರೆಗೊಂಬ ನಿನ್ನ ಬಾ । ನೀರೇ ಮೋಹನಕಾರೆ ॥ ॥ ಯಾಕಿಲ್ಲಿ ॥ ೧ ॥ ಯೋಚಿಸುವದೇನೆ ಜಾಣೆ । ಸೂಚಿಸಿತು ಸುಕೃತ ಕಾಣೆ ನಾಚಲೇಕೆ ನಾನು ನಿನ್ನವನೆ । ಮನುಮಥ ನಾನೆ ॥ ಯಾ ॥ ೨ ॥ ಹುಡುಗಿ ಕೇಳ್ನಿನ್ನಪ್ಪನಾರು । ಒಡನೆ ಮಲಗಿದಾತನಾರು । ನುಡಿವ ಪೆಸರದೇನೆ ಪಿಕಗಾನೆ । ಎನಲೆಂದಳ್ ಜಾಣೆ ॥ ೩ ॥

ಹಂಸಧ್ವನಿ : ಏಕ

ಏನೆಲಾ ಛೀ ಛೀ ಭ್ರಷ್ಟಹೀನವಾದ ವಾಕು । ನಾನು ವೇಶ್ಯೆ ಎಂದು ಬಗೆದೆ ಏನೊ ಸುಡು ಈ ಠೀಕು ॥ ದಾನವ ಕೇಳ್ದರಿಯೊ ಋಕ್ಷ । ವಾನರೇಶನವನ । ಮಾನುನಿಯೋಳುದಿಸಿದಬಲೆ । ತಾನಂಜನೆ ಎನ್ನ । ಸೂನು ಜಗವಿಖ್ಯಾತ ಹನುಮ । ಮಾನವಂತ ಸುಜನ । ಮಾನಿತಕೇಸರಿ ಏಕಾಂತ ನೀ ನಡೆಯೊ ಜತನ ॥೧॥ ಖರೆ ಖರೆ ಕೇಳ್ದರಿವೆ ವೇಶ್ಯೆ । ತರುಣಿಗಿಂತ ಕೀಳು । ತರುಣಿ ನೀನು ನಿನ್ನ ವಾಯು । ನೆರದುದಹುದೆ ಪೇಳು ॥ ಬರಿಯು ಕೋತಿ ನಿನ್ನ ರಮಣನೊರಗಿದವನೆ ಹಾಳು । ಹರಟೆ ಗಳಹಬೇಡವೆನ್ನ । ನೆರೆಯೊ ನೀ ಕೃಪಾಳು ॥ ೨ ॥ ಪುಂಡನೆ ಷಂಡನೆ ಲಜ್ಜ । ಭಂಡನದಿಯೊ ಗಾಢಾ । ಗಂಡನುಳ್ಳ ಗರತಿಯೊಡನೆ । ಲಂಡತನವೆ ನೋಡಾ । ಚಂಡಬಲರೆನ್ನಗ್ರಭವರು । ಕಂಡು ನಿನ್ನ ಪಾಡು । ದಂಡಿಸುತ್ತಲುಗಿವರೆದೆಯ । ಗುಂಡಿಗೆಯನು ಮೂಢಾ ॥ ೩ ॥ ಮುಗುದೆ ಕೇಳ್ನಿನ್ನವರಿವರನು । ಬಗೆವನಲ್ಲ ನಾನು । ಮೃಗಧರ ಮುರಾರಿಯ ಗಿಂದ ಗಡುಗಲಿಯು ನೀನು । ಸೊಗಸದೋರೆ ಮನಕೆ ನಾ ಕೈ । ಮುಗಿದು ಫಲವಿದೇನು । ಮುಗುಳುಂಬ ಮಿರಿವನೆನ್ನ ।

Scanned by CamScanner

ಬಗೆಯನೊಂದರನು ॥ ೪ ॥ ಭ್ರಷ್ಟ ಕೇಳ್ ಪರಾಂಗನೆಯರ । ಮುಟ್ಟಿ ನರಕ ಸೇರಿ । ಕೆಟ್ಟ ಕ್ರಿಮಿಯಾಗಿರಲು ಲೇಸೆ । ಇಷ್ಟಲ್ಲದೀ ಸಾರಿ । ದಿಟ್ಟ ಮರಣದಾಶೆ ಇರೆ ವೈ । ಗೊಟ್ಟು ಶೂಲವೇರಿ ನಷ್ಟವಗ್ಯೆ ಬದುಕುವಡೆ ನಿ । ನ್ನಿಷ್ಟ ಕೈದು ಕ್ರೂರಿ ॥ ೫ ॥

ವಾರ್ಧಿಕ

ಆ ಸುರದ ನುಡಿಗೆ ಖಳ ನಿನಿತ ಯೋಚಿಸಿದ ಬಡ । ರಾಸಭನ ಕೇಳ್ದು ಹೊರೆ ಹೊರಿಸುವನೆ ಪ್ರೌಢ ಮೇಣ್ । ಮಿೂ ಸೌರಿಗಲ್ಲದುರೆ ದ್ರವಸುವರೆ ಯಬಲೆಯರು ಬಲಕಲ್ಲದೇ ಮಾಣ್ಪರೇ ॥ ಲೇಸೆಂದು ಗೈದುಡುಕು ತಳೆಯ ಸತಿ ರೋದನದ । ಘೋಷಕಂದೆಚ್ಚತ್ತರ್ಜ ಕಂಡುಗ್ರದಿಂದ ನೃ । ಕೇಸರಿಯ ಓಲ್ ಗಜರಿ ಕೇಸರಿಯು ತಡದೆಂದ । ಪದಹತಿಗೆ ಮೇರುವರಿಯೇ ॥ ೧ ॥

ನಾದನಾಮಕ್ರಿಯೆ : ಅಷ್ಟ

ಖುಲ್ಲ ರಕ್ಕಸ ನಿಲ್ಲು ನಿಲ್ಲೆಲ । ಎನ್ನ । ವಲ್ಲಭೆಯುಳಕೊಂಡು ಪೋಪೆಲ । ಚಲುವೆ ನಿನ್ನ ಕೆಂಗರುಳ್ಗಳಾ । ನೀತಿಯಲ್ಲ ನೀ ಬಿಟ್ಟತ್ತ ಪೋಗೆಲ ॥ ೧ ॥ ಬಿಡ ಬಂದುದಲ್ಲ ಮುಗ್ಧಾಂಗಿಯ । ನಿನ್ನ । ಕಡುಹು ಸಾಕತ್ತತ್ತ । ನಡೆಯಯ್ಯ । ಮಡದಿಯ ನೆರದಾಡಿ ಶಿಖಿಪ್ರಿಯ । ನ್ಯಾಯ । ಗೊಡವೆ ತಪ್ಪಿದುದ್ಯಾಕೊ ಕಪಿ ರಾಯ ॥೨॥ ಮೊದಲೆ ನಿಮಗೆ ಮುಖ ಪೌರುಷ । ಈಗ । ಮಧು ಸೊಕ್ಕಿ ನುಡಿವೆಯ ಸಾಹಸ ಇದಿರಾಗೆಂದೆರಗಲು ರಕ್ಕಸ । ಪಕ್ಷ । ಬಡಿದಡುರುಳ್ದನಾಕೀಶ ॥ ೩ ॥

ಕಂದ

ಉರಗಂಗೌಗುತ ತಾರ್ಕ್ಷ್ಯಂ । ಭರದಿಂ ನಡವ ಓಲಾ ಸತಿಗೌಕಿದು ನಡೆಯಲ್ । ದುರುಳನ ಕುಂಕುಳೊಳಂ । ಬುರುಹದಳಾಂಬಕಿ ಕೂಗಿದಳ್ । ತರುನೆಲ ಕರಗಲ್ ॥ ೧ ॥

ಭೈರವಿ : ಏಕ

ಆರ್ಗತಿ ಎನಗೆ ಹರಹರಾ । ಪತಿ । ನಿರ್ಗಮಿಸಿದನ್ಯೆ ಸುರರಾ । ವರ್ಗ ಚರಾ ಚರಗಳಿರ । ಕಂಡು । ಕರಗದೆ ಮನ ಮಹಿಮರಿರ ॥ ೧ ॥ ಋಕ್ಷಕಪೀಂದ್ರ ಸುತೆಯ । ಸಹ । ಸ್ರಾಕ್ಷಕುಮಾರನನುಜೆಯ । ರಾಕ್ಷಸನೊಯ್ಯುವನಯ್ಯ । ಸರ್ವ । ಸಾಕ್ಷಿಯೆ ಬಿಡಿಸೊ ದಮ್ಮಯ್ಯ ॥ ೨ ॥ ದಿಕ್ಕಿಲ್ಲವೊ ಜಗದೀಶ । ಬಂದು । ಸಿಕ್ಕಿದೆ ವನದೊಳು ಲೇಸ । ನಿಕ್ಕಿದೊ ಕರುಣೆಗಳೀಸಾ । ಕಂಡಕ್ಕರವೆ ಕಮಲೇಶ ॥ ೩ ॥

ವಾರ್ಧಿಕ

ಆ ರವವ ಕೇಳ್ದ ನಿಲನೊಂದೆಸೆಯೊಳಾ ಗಲಿಯ । ಭೈರವಾಕೃತಿಯಾದ ನವನ ಸುತನೊಂದೆಸೆಯೊ । ಹಾರೈಸಿದಂ ಧುರವ ನದಕಂಡು ತ್ರೈಜಗಂ ಕ್ಷೋಭ ಮಿಂದಪ್ಪುದೆಂದು ॥ ವೀರರುಗಳ ತಡದ ಭಾಸ್ಕರಜ ಮಾಗ ಕಂ । ಠೀರವಗೆ ಮಲದ

ಪಂಚಾಸ್ಯನೋಲರ್ಕಸುತ । ವೈರಿ ಕಾಲಗ್ರೀವ ಸುಗ್ರೀವ ಮಾರ್ಮಲತಡದ್ವಾನ ಕೇಳ್ದು ಮಂದು ॥ ೧ ॥

ಭೈರವಿ : ಏಕ

ಫಡ ಯಾಮಿನಿಚರ ಭಳರೆ । ತಪ್ಪಿ । ನಡದೆಯ ಸೂವ್ರತೆಗರರೆ ॥ ಬಿಡು ಬಿಡು ತೋಳ್ಬಲವಿಹರೆ । ಕೈ । ದುಡುಕೆನ್ನೊಡನಲ್ಲದಿರೆ ॥ ೧ ॥ ಕರಸಿಕೊ ಮೃತ್ಯುಂಜಯನ । ಬಲ । ಕಿರಿಸಿಕೊ ಜೀವೌಷಧನ । ಶಿರವ ಚೆಂಡಾಡುವೆ ನಿನ್ನ । ಎಂದೆರಗಿದಡಾ ಖಳನನ್ನಾ ॥ ೨ ॥ ಅಬ್ಬರಿಸುಲಿಂತೆಂದಾ । ನೀ । ನೊಬ್ಬನೆ ಸಾಲಿದ ಹಿಂದ । ಒಬ್ಬನ ಹತಿ । ಕಂಡಿಂದ । ಮಗು । ಳಬ್ಬರಿಸೆನ್ನೊಡನೆಂದ ॥ ೩ ॥ ಕರಗಸ ನಡು ಬಡವಾಗೆ । ಹೆ । ಮ್ಮರನನು ತರಿಯದೆ ಬಿಡುಗೆ । ದುರುಳ ನೀ ಗರ್ವದಿ ಕೂಗೆ । ನಾ । ತರಿಯದೆ ಬಿಡೆನೆಡೆ ಗೂಗೆ ॥ ೪ ॥ ಎನುತೆನುತೀ ಪರಿಯಿಂದ । ರಣ । ವನು ಮೇಲ್ಕೊಡಗಿದರಂದ । ಘನರವಕಜಸುರವೃಂದ । ಎದೆ । ಯನುಗೊಡೆ ಕೇಳ್ದೊಲವಿಂದ ॥ ೫ ॥

ಭಾಮಿನಿ

ವೃತ್ರರಿಪು ಸುತನರಿದು ಶಿಖರವ । ಹತ್ತಿ ಸೋದರ ಹೊಕ್ಕನೇ ಧುರ । ಮತ್ತರಾರೊ ರಿಪುಗಳೆಂದಡಹ್ಯಾದು ಭೋರ್ಗರದು ॥ ಮತ್ತೆ ತರು ಗಿರಿ ಕಲ್ಗಳಂ ಧರಿ । ಸುತ್ತ ಲಯಭೈರವನ ಓಲ್ ಬಂ । ದತ್ತ ತಮ್ಮನ ನಿಲಿಸಿ ಖಳಗಿಂತೆಂದ ಕರಕರದು ॥ ೧ ॥

ಸೌರಾಷ್ಟ್ರ : ತ್ರಿವುಡೆ

ದುರುಳ ಕೇಳ್ಕೇಳೆಲವೊ ಸೊಗಸೆ । ಗರುಡನರವಟ್ಟಿಗೆಯ ಜಲಫಣಿ । ಮರಿಗೆ । ಮತ್ಸೋದರಿಯ ಮೇಳದೊ । ಳಿರಲು ಬಲ್ಲೈ ॥ ೧ ॥ ಉರಗ ಸಾಕಿದ ವಕ್ರ ಒರಿಯೆಂದೊರವ ಗಾದೆಯೊ ನಿನ್ನದೆಲೆ ಸರಿ । ಧುರವ ಕೊಡುವೆಯೊ ನಡವೆಯಾ ಕಪಿ । ವರನೆ ಬರಿದೆ ॥ ೨ ॥ ರೋಗಿ ವೈದ್ಯರ ಮದವಿದೊಂದ್ಯಾ । ತ್ರೀಗ ನಮ್ಮುಭಯರ ಮನಸ್ಸಿನ । ರಾಗ ಘಟಿಸಿತೆನುತ್ತಲೆರಗಿದ । ನಾಗ ಖಳನ ॥೩॥

ಭಾಮಿನಿ

ಸುರಪಜನ ಕರಹತಿಗೆ ಬೊಗರಿಯೊ । ಲ್ತಿರುಗಿ ಖಳದೆಂದೆಣಿಸಲನುಜೆಯ । ಸೆರೆಬಿಡಿಸಿ ಬೋಳೈಸಿ । ಮೈದುನವೆರಸಿ ಮನೆಗೈಸಿ ॥ ಧುರ ಧುರಂದರ ನಿಲಲು ಕೌಣಪ । ಭರಿತ ಸಾಹಸಗೊಂಡು ಪಗೆ ಬಿಡ । ದುರುಬಿನಿಂದಾ ಹವಕೆ ಮುಗುಳಿಂತೆಂದ ಮೂದಲಿಸಿ ॥ ೧ ॥

ಶಂಕರಾಭರಣ : ಅಷ್ಟ

ಜಾಣನಹುದೊ ಭಳಿರೆ ಕೀಶ । ಪ್ರಾಣಿ ಹೆಣ್ಣ ಬಿಡಿಸಿಕೊಂಡ್ಯೆ । ಗೋಣ ಕ್ಶೊೖದು ನಿನ್ನನೊಯ್ವ । ನೇಣನೇತ್ರೆಯ ॥ ಜಾಣರಂಗವಹುದು ಲೇಸು । ಕ್ಷೀಣ ಬಲನೆ ಬೆಂಬಲಕ್ಕೆ ಏಣಾಂಕ ಶೇಖರನ ಕರಸೊ । ಚೂಣಿಸೆನ್ನಯ ॥ ೧ ॥

Scanned by CamScanner

ಮೃಗಧರಾದಿ ಸುರರಿಗೆನ್ನೊ । ಳೊಗದ ಭಂಗ ಬಗೆಯ ಬಲ್ಲೆ । ಯುಗಳ ಹಾರಿ ಗಗನ ಹಾರೊ । ಮಿಗೆ ವಾನರೇಂದ್ರ ॥ ವಿಗಡ ಸುರರಂತಲ್ಲವೆನ್ನ । ಜಗಳದಂಗ ಬೇರೆ ನಿತ್ಯ । ಗಗನ ಚರಗೆ । ಯುಗಳ ಹಂಗೇನ್ । ಬಗೆ ದಾನವೇಂದ್ರ ॥ ೨ ॥ ಮೊದಲೆ ಮಂಗ ನೀನು ಮತ್ತೆ । ಸುಧೆಯುಗೊಂಡಂತುಲಿವೆ ನಲಿವೆ । ಬದುಕುವಾಶೆ ಇರ ಲಾಕೆಯುಳ । ಪದಕೊಪ್ಪಿಸಯ್ಯ ॥ ವದರದಿರೆಲೊ ಖೂಳ ಹಲ್ಲ । ಉದುರಿಸುವೆ ಕೇಸರಿಯ ತಂಗಿ । ವಧುವೆ ಕುರಿಗೆ ಎನ್ನ ಭಗಿನಿ । ಯೊದಗಳ್ ನಿನಗೈಯ್ಯ ॥ ೩ ॥ ಷಂಡನೆ ಕೇಳ್ನಿನ್ನನುಜೆಗೆ । ಗಂಡನೇನೊ ವಾಯು ಕೂಡಿ । ಕೊಂಡಾಗ ಎಲ್ಲಿದ್ದೆ ಮುಸುಂಡಿ ಭಂಡ ಹೋಗತ್ತ ॥ ಅಂಡಜ ಸ್ವೇದಜೋದ್ಭಿಜ । ಪಿಂಡಜ ಜರಾಯು ಜಾದ್ಯ । ಖಂಡ ಸೃಷ್ಟಿ । ಗಂಡ ವಾಯು । ಪುಂಡ ಕೇಳಿತ್ತ ॥ ೪ ॥ ಎಷ್ಟು ನೀನಾಡಿದರೇನು । ಹುಟ್ಟುಗುಣ ಗಟ್ಟವೇರೆ । ಬಿಟ್ಟಪುದೆ ಜಾತಿಕೋತಿ । ಭ್ರಷ್ಟ ನೀನಲ್ಲೆ । ಸೃಷ್ಟಿಗಂಧ ಮಣ್ಣೆಂಬುದ । ಗುಟ್ಟ ಬಲ್ಲುದೇನೊ ಮತಿ । ಗೆಟ್ಟ ಮೂಢ ಎನ್ನ ಗುಣದ । ಮಟ್ಟ ನೀ ಬಲ್ಲೆ ॥ ೫ ॥

ಕಂದ

ಕ್ಷಿತಿಪತಿಕೇಳ್ ಖತಿ ಬಲು ಹೆ । ಚ್ಚಿತು ಕಣ್ಣು ಕೆಂಪಡರ್ದುವಿ ಸ್ಫುಲಿಂಗ ವಗಾರಲ್ । ನುತ ಬದ್ಧಭ್ರುಕುಟಿ ಭಯಂಕರ । ದೃಢ ಕೋದಂಡವ ಠೇಂಕರಿಸುತ ಲೆಂದನಣಂ ॥ ೧ ॥

ಪಂತುವರಾಳಿ : ಮಟ್ಟೆ

ಎಲವೊ ವಾನರಾಗ್ರಗಣ್ಯ । ತಲೆಯು ಬಲ್ಪಿದೆಂದು ದೊಡ್ಡ । ಶಿಲೆಗೆ ಹೊಯ್ದಡುಳಿವುದೇನೊ ಛಲದೊಳೆನ್ನಲಿ । ನಿಲದೆ ಸೆಣಸಿ ತಲೆಯ ಕಳೆಯೆ ಫಲವೆ ಪಾಪಿ ಕಲ್ಮರಗಳು । ನಿಲುವವೇ ಒಂದಸ್ತ್ರಹತಿಗೆ । ತೊಲಗು ಮುನ್ನಲಿ ॥ ೧ ॥ ಭಳಿರೆ ಬಾಯಿ ಬಡಿಕರ । ಗುರು ನೀನಾವನೊ । ಳಂತೆ ಜಾಣರಂಗಗಳನು ಬಲ್ಲೆ ತನ್ನ ಕಾರ್ಯ । ಕಳಿಯೆ ಹೆಬ್ಬುಲಿ । ಗಳಹಿ ಮುನ್ನ ಮತ್ತೆ ಕಜ್ಜ । ಒಳಸಿ ಕೆಟ್ಟ ಪಾಪಿಯಾಗಿ । ಕಳಿವನವನೆ ದಿನವ ಧಾತ್ರಿ । ತಳದಿ ಹೆಬ್ಬುಲಿ ॥ ೨ ॥ ಪರಿಕಿಸಿ ದಾಡೆನುತ । ನಳಿನ । ಕೆರಗುವಳಿಗಳಂತೆ ಮೇಣು । ಭರಿತ ಕಾರ್ಮುಗಲೊಳಿಳಿವ । ವರುಷದಂತೆಯು । ಸುರಿದ ಧೂಮಕೇತುವರುಣ । ಪರ್ವತಾಹಿ ವಿ । ಶಿಖಿಲಿತತಿ । ಶರ । ನಿಧಿಯೊಳು ಒಡಭನಿಹವೋಲ್ ಮೆರೆವ ವಾಲಿಯು ॥ ೩ ॥

ಭಾಮಿನಿ

ಅರಸ ಕೇಳ್ಪುಟನೆಗೆದು ಸುರಪಜ । ನೆರಗೆ ಮಾಯಾವಿಯು ವರೂಥವು । ತಿರುಗಿತ್ತೈಸೆ ಕುಲಾಲ ಚಕ್ರದ । ಓಲು ಘರ್ರೆನುತಾ ॥ ಧುರಭಯಂಕರನಾಧರಿಸಿ ಹೂಂ । ಕರಿಸಿ ಮುಗುಳೊಂದನುವ ಯೋಚಿಸಿ । ಧರಣಿಗಿಳಿದಿಂತೆಂದ ಕಪಿ ರಾಜೇಂದ್ರ ನೊಳು ಮಾತಾ ॥ ೧ ॥

ಸೌರಾಷ್ಟ್ರ : ತ್ರಿವುಡೆ

ಮೆಚ್ಚಿದೆನು ಶಾಭಾಸು ಗುಣಕೇ । ನ್ಮಚ್ಚರವು ನಿಲು ಮಲ್ಲರಂಗಕೆ ॥ ಪುಚ್ಛದಣ್ಣನೆ ಶಾಕಿನಿಯರನು । ಮೆಚ್ಚಿಸುವೆನು ॥ ೧ ॥ ಎನೆ ಹಸಾಧವ ಹ್ಯಾಸಿ ಎನ್ನಯ । ಮನೆಯು ದೈವ ಕಣಾತದಾಹಶ ನಿನಗೆ ಶಿವನೊಲಿದಿತ್ತ ಮತಿಯಿದು । ದನುಜ ಲೇಸೈ ॥ ೨ ॥ ಎಂದಡಹುದೋ ಎನುತ ರಕ್ಕಸನಂದ ಭರಕೆ ಬ್ರಹ್ಮಾಂಡ ನಾವೆಯೊ । ಲಂದು ನಡುಗಿತು ತ್ರೈ ಜಗಂಗಳ । ವೃಂದವಾಗ ॥ ೩ ॥

ವಾರ್ಧಿಕ

ಕೇಳಲೆ ವಸುಂಧರಾಧೀಶ್ವರ ಸುಧಾಸೂತಿ । ಮೌಳಿ ಮೊದಲಾದ ಮರರಭ್ರದೋಳ್ ಪುಷ್ಪಕದಿ । ಬೀಳದಿಂದೊಲಗಿಸಲಿತ್ತ ಝುಗರ್ಝುಟ್ಟಿಗಳ್ ತಾಮ್ರಾಕ್ಷರಾಗಿ ನಿಂದು ॥ ಕಾಳಗಕೆ ಸನ್ನದ್ಧರಾಗಿ ಭುಜಹೊಯ್ದು ಕೆಂ । ಧೂಳಿಯಂ ಧೂಳಿಯಂ ಮೈಗೊರಸಿ ಝುಟ್ಟಿ ಚಲ್ಲಣ ಬಿಗಿದು ಆಳೊಳಗ್ಗಳರು ಹೊಯ್ದಾಡಿದರ್ ನೋಟಕರು । ಭುಲ್ಲೈಸಿ ಪೊಗಳಲಂದು ॥ ೧ ॥

ಸುರುಟಿ : ಮಟ್ಟೆ

ಹೊಯ್ದಾಡಿದರವರೂ । ಬೈದಾಡುತಲವರೂ । ಕಾಲ್ಪುರಿಗಟ್ಟುವೆ । ನಿಲ್ಕಪಿ ಬಲ್ಪಿದ । ನೋಡೆನುತಾ । ಕಾಲ್ಪಿಡಿದಪ್ಪಳಿಸಿದ ಮೇಲ್ । ಮೇಲ್ಪರಿ ದಾಡೆನುತಾ ॥ ೧ ॥ ಆರ್ಗುಂಟಾಳ್ತನ । ಖೂಳ್ಗಳ । ಭರ್ಗಗೆ ಸರಿ ಎನುತಾ । ಭೋರ್ಗರದಪ್ಪಳಿದಡವ ಕೆಂ । ನ್ನೀರ್ಗಾದ್ದುರೆ ನಿಲುತಾ ॥ ಹೊ ॥ ೨ ॥ ಮಾರ್ಮಲತೀರ್ಬರು ತಿವಿದರು ವೋರ್ಮೋರ್ಮಂಗಳನೂ । ಘರ್ಮಜಲಾವಳಿ । ಬೋರಿಡೆ । ಶರ್ಮವ ಬಿಡದೇನೊ ॥ ಹೊ ॥ ೩ ॥ ವೋರ್ಗುದ್ಧೀರ್ಗುದ್ಧಾರ್ಗು ದ್ಧಾರ್ಗಣಿಸುವರಿಂದೂ । ನೂರ್ಗುದ್ಯಾತೆನೆ । ನಾನೆ । ನೂರ್ಗುದ್ದಿದೆನೆಂದೂ ॥ ಹೊ ॥ ೪ ॥ ಧೊಪ್ಪನೆ ಲಂಘಿಸಿ ಕೈ ಕೈ । ಚಪ್ಪಳೆಗೈವುತ್ತಾ । ವಪ್ಪಿವರಿಂತು ಭ । ಟೋತ್ತಮು । ರ್ತಪ್ಪದೆ ತಾವು ಮತ್ತಾ ॥ ಹೊ ॥ ೫ ॥

ಭಾಮಿನಿ

ಹಳಚಿದರು ನಮುಚಿಯ ಬಲಾರಿಯ । ನಳಿನನಾಭನ ಕೈಟಭನ ಕೊಳು ಗುಳಕೆ ನೂರ್ಮಡಿಯೆನಲು ಮಿಗೆ ಮಾಯಾವಿತಾನೆಂದ ॥ ನೆಳವನಹಿತನ ಜೀವವನು ಬರೆಬಳಿಯೊಳೆಂದರ್ಗಳನು ಮಾಯೆಯ । ತಳೆದು ತಳಕಿಳಿದನು ಬಲದೊಳು ವಾಲಿ ಬೆರಗಾದ ॥ ೧ ॥

ಕಂದ

ಅದಕಂಡತ್ತಲು ಬರ್ದಿಲ । ರಿದು ಹೇಡಿಯ ಮಥವೆಂದುಸು । ರಿದು ತಿರುಗುತ್ತಲಿ ॥ ಸದನಕೆ ತೆರಳಿದರಿತ್ತಲು । ಕುದಿದುಂ ಕೋಪದೊಳಿಂದ್ರುಜ । ನೆಂದನು ತಾಮತ್ತಂ ॥ ೧ ॥

Scanned by CamScanner

ಸೌರಾಷ್ಟ್ರ : ತ್ರಿವುಡೆ

ಆ ಕೇವಾಳನು ತಪ್ಪಿದನೆ ತಾ । ನೋಕರಿಸಿದಳೆ ಮೃತ್ಯು ದೇವತೆ । ಯಾಕೆ ತೊಡಗಿದೆ ರಣದಿ ಹಾಸ್ಯದ । ರೀಕಿದ್ಯಾತ್ತೆ ॥ ೧ ॥ ಬಿಡುವೆನೆ ಈರೇಳು ಲೋಕದೊಳ ಡಗಿರಲಿ ಮೇಣಜಕವಂಡಲದೆಡೆಯೊಳೀರ್ದರು ಬಿಡೆದೆ ಕೊಲುವೆನು । ಮೃಡನೆ ಸಾಕ್ಷಿ ॥ ಎನುತ ಕಪಿಕುಲ ಸಾರ್ವಭೌಮನು । ದನುಜನೈದಿದ ಬಿಲವ ಕಾಣುತ । ಅನುಜ ಸುಗ್ರೀವಂಗೆ ನುಡಿದನು ಘನತೆಯಿಂದ ॥ ೨ ॥ ಬಾರದಿರು ಬೆಂಬಳಿಯ ಬಿಲದ ದ್ವಾರವನು ಕಾದಿರು ಮಗುಳ್ದವ । ಬಾರದಂತಿರೆ ಬೇವು ನಿನ್ನದು । ಸಾರಿ ನಿಲ್ಲೈ ॥ ೪ ॥ ಎಂದೆನುತ್ತೊಳಹೊಕ್ಕು ವಜ್ರಿಯ ಕಂದ ಸಲೆ ಬೆನ್ನಟ್ಟಿ ವೈರಿಯೊಳ್ । ನಿಂದು ಕಾದಿದ ವರುಷ ಹದಿನೈ । ದಂದು ಕಳೆಯೆ ॥ ೫ ॥

ಭಾಮಿನಿ

ಮಂಗಗಳಿಗಿನಿತುಂಟೆ ವಿಕ್ರಮ । ದಂಘವಣೆ ಲೇಸೆಂದು ಸಲೆ ಸಮ । ರಾಂಗಣದಿ ಹೋರಿದಡೆ ಖಳ ಮಸ್ತಕಕೆ ಲಂಘಿಸಿದು ॥ ತುಂಗ ಭುಜಬಲದಿಂದ ಝಡಿದರಿ । ಭಂಗ ಋಕ್ಷಜನೊದೆಯೆ ವಿಲಯ ಲ । ತಾಂಗಿ ವಲ್ಲಭನಾದನಾ ಮಾಯಾವಿ ಯಸುವಳಿದು ॥ ೧ ॥

ವಾರ್ಧಿಕ

ಸಾವು ತಾ ಹಾ ತಮ್ಮ ಸುಗ್ರೀವ ಎಂದೊದರಿ । ಜೀವ ಬಿಡಲು ಧ್ವನಿಯ ಕೇಳ್ದು ಕಡು ಭೀರುವಿಂ । ತಾವರೆ ಸಖಾತ್ಮಜಂ ಕಿತ್ತೊಂದು ಶೈಲಮಂ ಕೀಲ್ಗೊಟ್ಟು ಬಿಲವನುಳಿದು ॥ ಈ ವಾರ್ತೆಯಂ ಪೇಳಿ ನೋವರಂ ಸಂತೈಸು । ತೋವಿ ಸಂಸ್ಕಾರವಂ ಗೈದಣ್ಣಗಂ ಮತ್ತೆ । ಭೂವರಂ ತಾ ನಾವನಿತ್ತಲತ್ತಲು ವಾಲಿ । ಯಾ ಬಿಲದಿ ಪುಡುಕುತಂದು ॥ ೧ ॥

ಮಾರವಿ : ಏಕ

ದ್ವಾರವ ಕಾಣದೆ ವೀರನು ತಾ ಲಯ । ಭೈರವನೋಲ್ ಸಲೆ । ಧಾರುಣಿ ತಿವಿದ್ಘೋಸ । ದ್ವಾರವ ನೆಗಳಿ ಕಠೋರ ಬಲಾಢ್ಯನು । ಏರಿದ ನಿಜ ವಿ । ಸ್ತಾರ ವಸುಂಧರೆ । ನೇನನೆಂಬೆ । ಸೋದರನುನ್ನತವಾದ ಕೃತ್ಯಂಗಳ । ನಾ ದುಮಹೋಗ್ರ ದೊ । ಳಾದಿವರಾ ಹನೊ । ಲೈದಿ ಹೂಂಕರಿಸುತ । ಲಾದಿತ್ಯಜಗೆಳನ್ಯೊದು ಪೀಠಾ ಗ್ರದಿಂ । ಮೇದಿನಿಗುರುಳಿದ । ನೇನನೆಂಬೆ ॥ ೧ ॥ ಒತ್ತಿನವನೆ ನೀ । ನೆತ್ತಲೆನಗೆ ಘಡ । ಮಿತ್ತುವೆಯುಹೆ ಕ । ತ್ತೊತ್ತುವೆ ಹೂಹೆ ಮ । ತ್ತೆತ್ತಲು ಪೊಗಗೊಡ । ವಿದ್ಧದೀ ಪೀಠವ । ಹತ್ತಿದ ಬಗೆಗಿದೆ । ನುತ್ತೊತ್ತಲುಗಳ । ನೇನನೆಂಬೆ ॥ ೨ ॥

ಭಾಮಿನಿ

ಅವನಿಪತಿ ಚಿತ್ತೈಸು ಧರ್ಮ । ಶ್ರವಣ ಮುಖದಲಿ ಗಜಗವಯಜಾಂ । ಬವ ಸುಷೇಣಾದಿಗಳು ಸತಿ ಸಹ । ಜಾತ ಸುತರುಗಳ ॥ ತವಿಸುವದು ತಾ ಧರ್ಮ

ವಲ್ಲೆಂದವರು ನುಡಿಯಲು ನೂಕಿದನು ಹರಣವನು ಕ್ರುದ್ಧವನಾಲಿನಸುತೆಂದ ಮಾತುಗಳ ॥ ೧ ॥

ಕಾಂಬೋಧಿ : ಏಕ

ಮಾತ ಲಾಲಿಸಣ್ಣ ಬಿಲದಿಂ । ಹಾ ತಮ್ಮ ಸುಗ್ರೀವನೆಂಬ । ಮಾತ ಕೇಳ್ದೀ ತಪ್ಪ ಗೈದೆ । ಭೀತಿಯಂ ಕ್ಷಮಿಸು ॥ ರೂತನಾಡೆ ಕೊಲ್ವೆನೈ ಖ । ದ್ಯೋತ ಜಾತ ಬದುಕಲಸ್ಯ । ಭೂತಳಕ್ಕೈದಯ್ಯ ಭಂಡ । ಪೇತುಗಾರರಸ ॥ ೧ ॥ ದಮ್ಮಯ್ಯ ನೀನೆಂದ ಬಗೆಗಾ । ನೊಮ್ಮಾರು ವೇಣಿಯ ಕೂಡಿ । ಸುಮ್ಮನದಿ ಪೋಪೆ ನೀ । ನೊಮ್ಮೆ ಕಳುಹಯ್ಯ ॥ ದಮ್ಮಯ್ಯ ದಕ್ಕಯ್ಯಯ್ಯ ಎನಲು । ಹೆಮ್ಮಕ್ಕಳ ಮಣಿಯ ಕಳುಹೆ । ಸುಮ್ಮನೆ ನೀ ಪೋಗೆ ಲೇಸು । ತಮ್ಮ ನಲ್ಲಯ್ಯ ॥ ೨ ॥ ನುಡಿಯ ಮೀರಿ ಸತಿಯ ಕೂಡಿ । ನಡೆಯ ಮೇಲ್ವಾಯ್ದವಳ ನೆಳೆದು । ನುಡಿದ ಹಿತರ ಮಾತನುಳಿದು । ಕಡು ದ್ರೋಹ ಗೈದು ॥ ಪಿಡಿದು ಬಡಿದು ಮೆಟ್ಟಿಯೊಟ್ಟಿ । ಕೆಡಹನಿಲ್ಲ ದೈದಲಿನಜ । ಬಿಡದೆ ಬೆನ್ನಟ್ಟಿದರೆ ವಾಲಿ । ನಡದೋಡಿದ ಹ್ಯಾದು ॥ ೩ ॥

ಭಾಮಿನಿ

ಸಾರಿದನು ಸುಗ್ರೀವನಯ್ಯನ । ಮೇರುವಿನ ಕೀಲಚ್ಚ ಮಗನನು । ಸಾರಸ ಪ್ರಿಯ ಸಲಹಿಕೊಂಡನು । ನಿಜಕರಾಂಬುಜದ ॥ ವಾರಿಜದ ಮಧ್ಯದಲಿ ಕಿರಣದ । ಧಾರೆ ದಟ್ಟಿಸದಂತೆ ವತ್ಸರ । ತೀರಿದವು ಹಲವಲ್ಲಿ ಕೇಳ್ಮೊಂದಾದ ಸುವಿನೋದ ॥ ೧ ॥

ವಾರ್ಧಿಕ

ಭೂರಿ ನೇತ್ರಜನಿತ್ತ ಭೂರಿ ವೈಭೋಗದೊಳ । ಗಾರಾಜಿಸಿದ ತಾರೆ ರುಮೆಯರ ಸಮ್ಮೇಳದಿಂ । ಭೂರಮಣ ಕೇಳತ್ತ ಸತ್ತ ಮಾಯಾವಿ ಪಿತ । ಘೋರ ದುಂದುಭಿ ರಕ್ಕಸ ॥ ಏರಿರಲ್ ಪೀಠದೊಳಗೊಂದೆಸೆಯೊಳೋರ್ವ ಚೋ । ಪ್ಪಾದ್ರ ತವ ಸುತ ಸುರರ । ಗೆಲಿದ ನೆನಲೊಂದೆಸೆಯೊ । ಚಾರನೋರ್ವಂ ನಿನ್ನ ಮಗನಿಂ ದಳಿದನೆಂದ ಗದ್ಗದ ಸ್ವರದಿ ರಭಸ ॥ ೧ ॥

ಕಂದ

ಅನಿತುವ ಕೇಳ್ದಂ ಧಿಮ್ಮನೆ । ದನುಜಾಧಿಪನಿಂದೇಣ್ದೆಸೆಗಳ ನೀಕ್ಷಿಸುತಂ । ತನುಜನ ಮೃತಿ ನಿಶ್ಚೈಸುತ । ತನು ಕೆಂಪಡರಲ್ ಕ್ರೋಧದಿ ಘರ್ಜಿಸು ತೆಂದಂ ॥ ೧ ॥

ಸೌರಾಷ್ಟ್ರ : ತ್ರಿವುಡೆ

ಕಿತ್ತರೇ ರಾಕ್ಷಸರೇರಬೇರ್ಗಳ । ಮತ್ತರೇ ದೇವೌಘ ಮತ್ಸುತ । ಮತ್ತ ವಾರಣನಸುವಗೊಂಡನೆ । ವೃತ್ತವೈರಿ ॥ ೧ ॥ ಪಗೆಗಳವರಲ್ಲದೆ ಮತ್ತೋರ್ವರು । ಮಗುಚಿನೋಳ್ಪರ ಕಾಣೆ ತ್ರೈಜಗ । ದಲಿ ಸ್ಥಾವರ ಜಂಗಮಾತ್ಮಿಕ । ರುಗಳೊಳಿಂತು ॥ ೨ ॥ ಏನ ಬಗೆದರೊ ಮನದೊಳೆನ್ನ ನಿ । ಧಾನವರಿಯದೆ ಶಿವ ಶಿವಾ

ಬಿಡೆ । ಭಾನು ತಣ್ಪಾದಡೆಯು ಪಗೆ ಗೆಲ । ದಾನು ಭಳಿರೆ ॥ ೩ ॥ ವ್ಯಾಳಶಯನ ವಿರಂಚನಾ ಶಶಿ । ಚೂಡ ತ್ರಿದಶರ ಕೆಂಗರುಳ್ಗಳ । ತೋಡುವೆನು ವರುಣಾಂಬು ಹೊಳೆ ಹರಿ । ದಾಡಲಿಂದು ॥ ೪ ॥ ಕೆಂಡವಾಗಲಿ ಲೋಕವ ಬ್ರ । ಹ್ಮಾಂಡ ಭಾಂಡವನೊದೆವೆ ನಡೆಯಲಿ । ದಂಡೆನುತ ಪೊರವಂಟ ರಿಪು ವೇ । ತಾಂಡ ಸಿಂಹ್ನ ॥ ೫ ॥

ವಾರ್ಧಿಕ

ಅರ್ಗಳದ ಕರಿ ಘಟೆಗಳರ್ಬುದಂ ಮಣಿ ಖಚಿತ । ತೇರ್ಗಳೆರಡರ್ಬುದಂ ಘೋಟಕ ಷಡರ್ಬುದಂ । ಭೋರ್ಗರವ ಪತ್ತಿಪತ್ತರ್ಬುದಂ ಚಾಮರಗಳಿಂದ ಡರ್ದು ॥ ಸ್ವರ್ಗವಂ ಮುತ್ತಿ ನಿಮಿಷಾರ್ಧದೊಳ್ ಕೈಕೊಂಡು ದುರ್ಗಮಂ ನುಗ್ಗರದು ಸುರರ ನಜಿಗಿಜಿ ಗೈದು । ಭರ್ಗವಿಕ್ರಮನೈದಿ ಜಿಷ್ಣುವಂ ಪಿಡಿದೆಳೆಯು । ತಾರ್ಭಟಿಸುತಿಂತೆಂದನು ॥ ೧ ॥

ಭೈರವಿ : ಏಕ

ನಿಲ್ ನಿಲ್ ಸುರಪತಿ ನೀನು । ಈ । ಚಲ್ ಗಿಲ್ ಸಲ್ಲದು ನಾನು । ಗಾಲ್ ಮೇಲ್ ಮಾಡದೆ ಇರೆನು । ಕರೆ । ಬಲ್ ಬಲ್ ಬೆಂಬಲದರನು ॥ ೧ ॥ ಕಳ್ಗುಡಿಕರ ಗುರು ಕೇಳು । ಕ । ಟ್ಟಾಳ್ಗಳು ಬೆದರ್ವರೆ ಪೇಳು । ಹೋಳ್ಗಳೆದೀ ಎಲುಬುಗಳೂ ನಿನ್ನ । ಬಾಳ್ಗೆಡಿಸುವೆ ತಾಳು ॥ ೨ ॥ ಪೇರ್ಬಲನಹೆ ಪುರುಹೂತ । ನಿಲ್ । ಕೊಬ್ಬಿಹ ನಿನ್ನುರೆ ರಕುತ । ಮಾರ್ಬಡೆಗಿಕ್ಕುವೆನೈ ತಾ । ತೋರ್ದಬ್ಬಾರೆನ್ನೊಡನೆನುತ ॥ ೩ ॥ ಗರ್ವದಿ ಖಳ ಪಿಡಿದೆಳೆದ । ಆ । ಗೀರ್ವಾಣೇಶ ಕೈಮು ಪೂರ್ವಾಪರದೊಳು। ಎನ್ನ । ಸರ್ವದ ಕಾಯೆನಲೆಂದ ॥ ೪ ॥ ಮತ್ಸುತ ಮಾಯಾವಿಯನು । ನೀ। ಕುತ್ಸಿತದಿಂದರಿದುದನು। ಮತ್ಸನ್ನಿಧಿಯೊಳಗಿನ್ನು । ತೋರುತ್ಸುಖದಿಂದೆನೆ ತಾನು ॥ ೫ ॥

ವಾರ್ಧಿಕ

ದೇವಪತಿ ನಡನಡುಗಿ ಖಳನ ಪಾದದೊಳೆರಗಿ । ದೇವ ನಿನ್ನಾತ್ಮಜಂ ಗೆಲಿದನಮರ ವ್ರಜಂ । ಮಾವಿಗಿಡ ಮೇಣ್ಪೋದ ಮೇಲರಿಯೆ ವಾರ್ತೆಯದೆ । ನೀವಿದಕೆ ದಣಿಯದೀಗ ॥ ಗ್ರಾಮಪತಿ ಹಿಮವಂತನಂ ಕೇಳಿರೆನೆ ಶಾಂತ । ಭಾವದಿಂ ಬೀಳ್ಕೊಂಡು ಬಂದು ತನ್ನಯ ದಂಡು । ಕೋವಿದಂ ಕೆದರಿದರೆ ಶೈಲೇಂದ್ರ ಬೆದರ ದುರೆ ಠೀವಿಯಿಂದೆಂದನಾಗ ॥ ೧ ॥

ಭಾಮಿನಿ

ಎಲೆ ಪರಾಕ್ರಮಿ ಬಂದ ಕಜ್ಜವ । ನೆಲೆಯನರಿತೆನು ಪೋಗು ವರುಣ । ಸಲೆ ವಿಚಾರಿಸೆನಲ್ಕೆ ಬಂದನಬ್ಧಿಪನ ಬೆಸಗೊಳಲು ॥ ನಿಲಲರಿಯದಾ ವರುಣ ಕಾಯ್ಕೈ । ಬಲು ಭಟನೆ ಭಾಸ್ಕರನ ಕೇಳೆನೆ । ವಿಲಯ ಭೈರವನಂತೆ । ಹ್ಯಾದಿನಗೆಂದ ಕ್ರೋಧದೊಳು ॥ ೧ ॥

ಭೈರವಿ : ಏಕ

ತರಣಿ ಪ್ರಭಾಕರ ಭಾಸ್ಕರ ಹಸ್ಕರ । ಹರಿಯೆಂಬವ ನೀನು । ಧುರಶೋಭಾಸ್ಕರ । ತಸ್ಕರನಾಗದೆ । ಪರಿಸೆಣಸೆನೆ ಭಾನು ॥ ೧ ॥ ಮೂಢನೊ ಮೂರ್ಖನೊ ಭ್ರಾಂತನೊ ರಕ್ಕಸ । ಖೋಡಿ ನೀನರಿಯಯಲ । ನೋಡು ಸಾಸಿರ ಕರ ಜೋಡಿಸಿದರೆ ನೀ । ರೂಢಿಯೊಳುಳಿಯೆ ಎಲ ॥ ೨ । ಎಂದೆನುತೀಪರಿ । ನಿಂದು ಪರಾಕ್ರಮ । ರಂದತಿ ಪೊಯಿದಾಡಿ । ದುಂದುಭಿಗೊಲಿದಿನ ಮಂದಸ್ಮಿತನುಡಿ । ಎಂದನು ನಲಿದಾಡಿ ॥ ೩ ॥ ಪೂತುರೆ ಕೋವಿದ । ಯಾತುಧಾನೇಶ್ವರ । ಯಾತರ ಪೇಕ್ಷೆಗಳು । ಪ್ರೀತಿಯೊಳೊರದರೆ । ನಾ ತರಿಸುವೆನೈ । ಏತಕೆ ಧುರ ಹೇಳು ॥೫॥ ಭಾನುವೆ ಕೇಳ್ಕ್ರಮ । ಸೂನು ಮಾಯಾವಿ ನಿ । ಧಾನವ ನೀ ಹೇಳೀ । ಮಾನಿಸಾಕವಗೇನ್ಮಾತ್ತೆನಲೆಂದನು । ದಾನವಗಾ ಹೇಳಿ ॥ ೫ ॥

ಕಲ್ಯಾಣಿ : ಏಕ

ಕೇಳು ರಾಕ್ಷಸ ಕುಲ ಶಿಖಾಮಣಿಯೇ । ಪೇಳುವೆ ನಾ ತಾನಾ । ನೆಲೆಯ ದುಂದುಭಿಯೇ । ಕೇಳು ರಾಕ್ಷಸ ಕುಲ ಶಿಖಾಮಣಿಯೇ ॥ ಪಲ್ಲ ॥ ಸಿಟ್ಟಲಿ ಜಗವ ಗೋ । ಳ್ಗುಟ್ಟಿಸಿ ವ್ಯರ್ಥ ನೀ । ನಟ್ಟ ಹಾಸದೊಳು ಕಂಗೆಟ್ಟಿಹುದಹುದೇ । ಪುಟ್ಟ ಮೊದಲೆ ಇಲ್ಲಿ । ಮುಟ್ಟಿ ಕೇಳೀರ್ದರೆ । ಧಿಟ್ಟ ನಿನ್ನರಿರ್ಘುಗ । ರ್ಘುಟ್ಟ್ಯ ತೋರಿಸುತಿದ್ದ ॥ ಕೇಳು ॥ ೧ ॥ ಸುರ ನರರೊಳು ನೀವಾ । ಲ್ಲರಿಯದಿರ್ಪೈ ಪೇಳೂ । ಧುರ ಧೀರ ರಿಪು ಮದಕರಿ ಮೃಗರಾಜಾ । ತರು ಚಾರಗ್ರಣಿ ಸುರವರ ಸುತ ಕಿಷ್ಕಿಂಧ । ದರಸ ವಾಲಿಯು ಕೇಳು ತರಳನಳಿದ ನಿಜ ॥ ಕೇ ॥ ೨ ॥ ನಿನ್ನ ಮಗನ ಕೊಂದ । ಕುನ್ನಿಯೆನ್ನಯ ಕಂದ । ನನ್ನೂ ಕೊಲಲೆಂದೂ । ಬೆನ್ನಟ್ಟಿ ಬಂದಾ । ಉನ್ನತ ಬಲ ವಾಲಿಯನು ಕಂಡರೆ ನಿನ್ನ । ಬೆನ್ನೊಳುಗಿವ ಕರುಳನ್ನು ನೀ ನಡೆಯಂದಾ ॥ ಕೇ ॥ ೩ ॥

ವಾರ್ಧಿಕ

ದಂಡಧರ ಪಿತನ ನುಡಿಗಡಿಗಡಿಗೆ ರೋಷ ಬೇ । ಗೊಂಡುರೋಮಾಳಿ ಹುರಿಗೊಂಡುದುಸುರೊಳ್ ಧೂಮ । ಕಂಡವಕ್ಷಿಗಗಳಿಂದ ವಿಸ್ಫುಲಿಂಗಂ ಮುದುರೆ ಪ್ರಳಯದ ಕಪರ್ದಿಯಂತೇ ॥ ಚಂಡಬಲ ಖಳ ನಿನನ । ಬೀಳ್ಕೊಂಡು ನಡೆಗೊಂಡು ದಂಡೆತ್ತಿ ಕಿಷ್ಕಿಂಧ । ಮುತ್ತಿನುಗ್ಗೊತ್ತಿ ಬಹು । ಹೆಂಡಿರೊಡಗೂಡಿ ಕೋಟೆಯ ಮೇಲಖಂಡಲಜನಿಕೆ ಕಂಡ ಸೀತಾಪತೇ ॥

ಭಾಮಿನಿ

ಕಂಡು ಕೋಪಾಟೋಪದಿಂದ ಪ್ರ । ಚಂಡ ಬಲ ಮತ್ಸುತನ ಮರಣವು । ಕೊಂಡು ಮುಳುಗದೆ ಬಿಡುವುದೆ ಸಲೆ ಭಂಡನಿಲ್ಲೆನುತ ॥ ಖಂಡ ಪವಶುವಿನಂತೆ ತ್ರಿವಿಯಲು । ಡೆಂಡೆಣಿಸಿ ಬಿದ್ದೆದ್ದು ನಿಲೆ ಕಪಿ ॥ ಗಂಡುಗಲಿಗಂ ನುಡಿ ದುಂದುಭಿ ತಾ ಫಚಾರಿಸುತ ॥ ೧ ॥

Scanned by CamScanner

ಪಂತುವರಾಳಿ : ಮಟ್ಟೆ

ಕಪಿಗಳರಸ ಭಳಿರೆ ನಿಲ್ಲೆಲ । ಮತ್ಸುತನ ಕೊಂದ । ಶ್ವಪಚ ನೀಚ ।
ಬಲುಹ ತೋರೆಲ ॥ ಕಪಿಗಳರಸ ಭಳಿರೆ ನಿಲ್ಲೆಲ ॥ ಪಲ್ಲ ॥ ಬಲ್ಲಿದ ಮಾಯಾವಿ
ಭಟನ । ಘುಲ್ಲಿಸುತ್ತ ಕೊಂದ ಗರ್ವಿ । ನಿಲ್ಲೆಲ ನಿಲ್ ನಿನ್ನ ರಕ್ತದಲ್ಲಿ ತರ್ಪಣವನು
ಕೊಡುವೆ । ಯಲ್ಲಿ ಮಡಿದ ವೀರನಾತಗೆ । ಮೃತ್ಯುವಿನ ತಂಗಿಯಲ್ಲ ನಿನಗೆ ಮದುವೆ
ಮಾತಿಗೆ । ಸಂತೋಷಗೊಳಲಿ । ನಲ್ಲೆಯುವರು ಸವತಿ ಪ್ರೀತಿಗೆ ॥ ಶಾಭಾಸು ನಿನ್ನ
ರ್ಘುಲ್ಲಿಗಳನು ತೋರೆನುತ್ತ । ಖುಲ್ಲ ಜರಿದು ನುಡಿದ ಮಾತ ॥ ೧ ॥ ಪುಂಡರೀಕ
ಶಯನ ಬ್ರಹ್ಮಾಂಡಭಾಂಡ । ದೊಡೆಯ ಬೊಮ್ಮ । ರುಂಡಮಾಲ ಖಂಡಲಾದಿ ।
ತಂಡ ತಂಡದಮರ ವಿತತಿ । ಹಿಂಡು ಹಿಂಡು ಕರಸಿಕೊಳ್ಳಿಲ ಬೆಂಬಲಕೆ । ಭಂಡ
ಹೆಂಡಿರೊಡನೆ ನಿಲ್ಲೆಲ ॥ ಹೂ ಗೋಲನಾಟ । ದಂಡಿ ದಂಡ ದಂಡವಲ್ಲೆಲ ಎಲೆ
ಪಂದೆ ನಿಲ್ಲುದ್ದಂಡ ಸತ್ವವೀರ್ದರೆಂದು । ಚಂಡಿಯಿಂದ ನುಡಿಯಲಸುರ ॥ ೨ ॥

ಭಾಮಿನಿ

ನುಡಿಯುತಿರಲದ ಹುಲು ಕಡ್ಡಿಗೆ । ಗಡಣಿಸದೆ ಬೆನ್ನಿತಾ ಮ । ತ್ತೊಡನೆ
ಮನೆಗೈದಿಸುತ ಪ್ರಿಯ ವಧೂಟಿಮಣಿಯರನು ॥ ಪಡೆಯ ಕರಸಿದು ಬೆಂಬಲಕೆ
ಕೈ । ದುಡುಕಿದನು ದುಂದುಭಿಯ ಕದನದಿ । ಮೃಡ ಪರಾಕ್ರಮಿ ಧೀರ ಕಪಿಕುಲ
ಸಾರ್ವಭೌಮಕನು ॥ ೧ ॥

ಕಂದ

ಅನ್ನೆಗೆ ವ್ಯೋಮಾಂಗಣದೊಳು । ಬಾನ್ನವಿರಾದಿ ವಳಿಂಪ ವ್ರಜಮುಳ್ಕ
ರೊಳಂ । ಸೋನ್ನಾಕದಿ ಮರುತ್ಪಥ ದಿನ್ನಲಿದೀರ್ದರ್ ಕಾಣಲ್ ಮಘವಜ
ಖಳಗೆಂದಂ ॥ ೧ ॥

ಶಂಕರಾಭರಣ : ಅಷ್ಟ

ಪೂತುರೇ ದಾನವಧರ್ಮ । ನೀತಿ ಬಿಟ್ಟೆನ್ನಂಗದೊಳ್ ನಿ । ರ್ಭೀತಿ
ಯಿಂದ ಕೈಮಾಡಿದೆ ನೀತಿಯೆ ಹಂದೆ ॥ ನೀತಿ ಧರ್ಮಗಿರ್ಮಂಗಳನು । ಕೋತಿಗ್ಯಾಕೊ
ಧೀರರಿಂಗೆ । ಭೀತಿಯುಂಟೆ ಮಾಯಾವಿಯ । ನ್ಯಾತಕೆ ಕೊಂದೆ ॥ ೧ ॥ ಆದರೆ
ಕೇಳಾದಡೆನ್ನ । ಸೋದರಿಯಂಜನೆ ಎನ್ನ । ಪೈದರಿಂದ ಕಾದಿ ಕೊಂದೆ । ನಾ
ದುರಾತ್ಮನ ॥ ಮೋದಗಾರ್ತಿ ಯಾರ ಕಂಡು । ಪೈದು ಜವ್ವನದ ಬಂಟರ್ ।
ಬಾಧಿಸಿದರೆ ಕೊಲುವದೇನೊ । ಕಾದು ನೀನೆಂಗ ॥ ೨ ॥ ಹಾದರೀಯೆ ಎನ್ನ ತಂಗಿ ।
ಕಾದಲವ್ರತೆಯನರಿಯ । ಸಾದು ಭಂಗ ಕಂಡಿಪ್ಪೇನೆ ಮೇದಿನಿಯೊಳು ॥ ವದರದಿರು
ಬಲ್ಲೆ ಬಲ್ಲೆ । ಪೈದು ತಮ್ಮನರಸಿಯುಳನು । ಐದಿದ ತಪ್ಪಿಂದ ಹೆಚ್ಚೀ । ನಾದುದು
ಪೇಳು ॥ ೩ ॥ ಕೂಗಬೇಡ ಕುನ್ನಿ ಸುಮ್ಮ । ನೀಗ ದ್ವೇಷ ಕಟ್ಟಿಕೊಂಡು ।
ಹೋಗು ಸಾಯಬೇಡ ಮುಂದಿ । ಗೂಗೆ ರಕ್ಕಸ ॥ ಗೂಗೆ ಗೀಗೆ ಎಂದಡಾನು ।
ಹೋಗೆ ನಿನ್ನ ಕೊಲ್ಲದಿನ್ನು । ತಾಗದೆ ಬಾಗದು ಮಂಗ । ಲಾಗ ತೋರಿಸೊ ॥ ೪ ॥

ವನಜಜಾಂಡಂವಂ ನಾದ । ಡನಿಲ ಭುಜಗ ಹಾರವಲ್ಲ್ಲೈ । ದನುಜ ಎನ್ನೊಳ್ಳಾಕದೆ
ನಿನ್ನ । ಹನನ ನಿಜವಲ್ಲ್ಲೈ । ವಿನತೆಯಾತ್ಮಜನೆ ವಾಯು । ವೆನಿಸಲ್ಹಗೆ ಪಥ್ಯ
ವೇನೊ । ವನಚರ ಎನ್ನಲ್ಲಿ ನಿನಗೆ । ಎಸು ವಲ ಬಲ್ಲ್ಲೈ ॥ ೫ ॥

ಶಂಕರಾಭರಣ : ಮಟ್ಟೆ

ಧೀರರೇ ನೈಶಾಚರೇಂದ್ರ ಸುರೆಯ ಕುಡಿದ ಬಾಯೊಳಧಿಕ । ವರಲ
ಲ್ಯಾಕೆ ನ್ಯಾಗಳಂತೆ । ಮರಳು ಸುಮ್ಮನೆ ॥ ಪರಿಕಿಸೆನ್ನ ಬಗೆಯನೆಂದು । ದುರುಳ
ನೆದೆಗೆ ತಿವಿಯೆ ಬೊಗರಿ । ತಿರುಗುವಂತೆ । ಗಿರ್ರನುತ್ತ । ತಿರುಗಿ ಧಿಮ್ಮನೆ ॥ ೧ ॥
ನಿಂದು ಖಾತಿಯಿಂದ ವಿಲಯ । ದಿಂದುಚೂಡನಂತೆ ಶರವ । ಸಂಧಿಸಿದನು ಧನು
ವಿಗಮರ ವೃಂದ ಬೆಚ್ಚಲು ॥ ಗೆಂದು ವಹ್ನಿ ವರುಣ ಯಮ ಸು । ರೇಂದ್ರ
ನಿರುತಿ ವಾಯು ಶರಗಳಿಂದ ಕವಿದನಭ್ರ ಧಾತ್ರಿ । ಯಂದವಾಗಲು ॥೨॥ ಕೊಂಬನೇ
ಕಣೇಯಯಲಯ ದು । ಗ್ರಾಂಬಕನ ವಿಕ್ರಾಂತವಾಲಿ । ಡೊಂಬಿಯಿಂದ ಹೊಕ್ಕು
ಹ್ರೊದ । ಹಂಬಲಿಸದದ ॥ ಜಂಬತನಗಳಿನಿತೆ ಮರನ । ಕೊಂಬಿನಿಂದ ಮರಕೆ ಹಾರ್ವ ।
ಕುಂಬು ಕಪಿಗೆನುತ್ತ ರ್ಘುಡಿದ । ನಂಬುಗಳನದ ॥ ೩ ॥ ಖಳನೆ ಕೇಳ್ ಕಾಲಾಗ್ನಿ
ಮಂಜು । ಮೆಳೆಗೆ ಪೈಸರಿಪುದೆ ಭಳಿರೆ । ತಿಳಿಯಲೀಶರಾಳಿಗಾನೆ । ನಳುಕುವಾತನೆ ॥
ಕಳೆಯಬೇಡ ತಲೆಯ ಗುಣವ । ನಳಿದ ಮಾಯಾವಿ ಬಳಿಗೆ । ಕಳುಹಿಸುವೆ ನೀನಪ್ಪ
ನಲ್ಲ್ಲೆ । ಹಿಳುಕ ಕಳುಹನೆ ॥ ೪ ॥ ಪೊಗಳಬೇಡ ನಿನ್ನ ನೀನೆ । ಟಗರು ತೋಳ
ಗಿದಿರೆಯದರ । ಬಗಿದು ತೆಗವೆಯಳಿದ ಮಗನ । ಹಗರಣದೊಳೆನ್ನ ॥ ಬಗೆಯ
ನೋಡೆನುತ್ತಲಾರ್ದು । ಗಿದ ನಕ್ಷಯಾಸ್ತ್ರಗಳನು । ಜಗತಿ ಗಗನ ಕಾಣದ್ಯಾತ್ತು ।
ಪೊಗಳಲೇನದ ॥ ೫ ॥

ಭಾಮಿನಿ

ತವೆ ನಿಧಾಗದ ರವಿಯ ಕತ್ತಲೆ । ಕವಿದು ಗೆಲಿವುದೆ ವಾಲಿ ಬಗೆವನೆ ।
ದಿವಿಜ ವೈರಿಯ ಶರವ ಮಿಗೆಲಳಿಯೇರಿ ಪಟುಭಟರು ॥ ಶಿವನ ಕೂಡ ಗಜಾ
ಸುರನು ವಿ । ಷ್ಣುವಿನೊಡನೆ ಕೈಟಭನು ಹೋರಿದ । ರವಣೆಯಲೆ ಹೋರಿದರು
ದುಂದುಭಿಮಘವನಂದನರು ॥ ೧ ॥

ಮಾರವಿ : ಏಕ

ಮತ್ತೆ ವರೂಥವನಡರಿ ಧನು । ಎತ್ತಿ ಶರೌಘವ ಕೆದರಿ । ಕೃತ್ತಿ
ವಾಸಾದಿ ಮ । ಹೋತ್ತಮ ಪಟುಭಟ । ರೊತ್ತಾದರುನು । ಗ್ಗೊತ್ತುವೆ ನಿಲ್
ಕಪಿ ॥ ೧ ॥ ನಕ್ತಂಚರ ಕೇಳ್ನಿನ್ನಾಘನ ಶಕ್ತಿದಳ್ಯಾಕೈ । ಎನ್ನ । ಯುಕ್ತಿಯ
ನೋಡದ । ಮುಕ್ತಿಯ ನೀವೆನು । ಶಕ್ತಿಯೊಳೆನುತ ಯಥೋಕ್ತಲಂಘಿಸುತಲಿ ॥೨॥
ಘನರಥಧನುಗಳ ಮುರಿದ । ಪೊಸ । ತನುಖಳ ನೇರಲು ತರಿದ । ಇನಿ ತೊಂದ
ರ್ಬುದ । ಧನು ಶರಗಳ ನೆ । ಟ್ಟನೆ ಕೆಡಹಲು ಮಾ । ದನುಜನಸಿಯಗೊಳೆ ॥ ೩ ॥

Scanned by CamScanner

ಅದಕುಲ್ಲಂಘಿಸುತವನು । ಮುರಿ । ದೊದೆಯಲುಮಿಗೆ ದಾನವನು । ಪದ ಗತಿಯಲಿ ನಿಮ್ಮ । ದದುಭತರವದಿನಿಲ್ । ಮದವಮುಖ ಕಪಿತಲೆ । ಉದುರಿಪೆನೆಂದನು ॥೪॥ ಸುರರಹವಿಯ ಸೆಳದುಂಡ । ಗರ್ವ । ಗಿಂಗಿರಿಗಿದೊ ಹಿರತುಂಡ । ಪೊರೆವವನೀರ್ದರೆ ಬರಲೆಂದಾರ್ದುರೆ । ಯರಗಲ್ ದುಂದುಭಿ ಧಂಸಿ ಮಹೋಗ್ರವ ॥ ೫ ॥ ಕೊಲೆ ಗಳಸಿದೆ ಸೋದರನ । ನಿಜ । ಕುಲರಕುಠಾರಕ ನಿನ್ನ । ತಲೆ ಚಂಡಾಡುವೆ । ಕಲ ಕುವೆ ಮಿಗೆ ಸುರ । ಜಲಧಿಯನೆಂದ । ಬಲುಭುಜ ತಿವಿದನು ॥ ೬ ॥ ಈರ್ಬರ ಪ್ರೈದಾಟದೊಳು । ಲ । ಕ್ಷಾರ್ಬುದ ಸಂಖ್ಯೆಯು ಮಿಗಿಲು । ಈರ್ಬರ ಕಡಿವಡ । ದೂರ್ಬಿಗೆ ಕೆಡದುದು । ಮಾರ್ಬಡೆಗೌತಣ । ದರ್ಭಾರಾಯಿತು ॥ ೭ ॥

ವಾರ್ಧಿಕ

ಮುರಿದಸ್ಥಿಸಮಿಧೆ ದೂರ್ವಾಂಕುರಂ ನರಕೇಶ । ವರಕುಶಂ ವೇತಾಂಡ ಕುಂಭ ಕುಂಭಂಗಳಂ । ನುಡಿದ ಮಿದುಳಿನ ಚರ್ವೆಯುರು ಜಲಾದಾಜ್ಯದಿ । ಗ್ವರಣಂಶಾಕಿನಿಗಳೂ ॥ ಉರಿಯೆ ಕ್ರೋಧಾಯೆ ಕ್ರೋಧಾಗ್ನಿ ಕೃಷ್ಣಾಜಿನಂ । ಮಜಿನ ಸುರವರರೆ ದೀಕ್ಷರುತ್ವಿಜನೆ ತಾಕೀಶನೆನೆ ಧುರಕಣಂ । ಮೆರೆವ ಯಜ್ಞಾಂಗಣವ ಪೋಲ್ದುದೈ ಧಾರುಣಿಪ ಧಾರಣದೊಳು ॥ ೧ ॥

ಭಾಮಿನಿ

ನಾಡೊಳಗ್ಗದ ಬಲರು ಖಾಡಾ । ಖಾಡಿ ಕೇಶಾಕೇಶಿಯಿಂ ಪಯ । ಪಾಡರಿದು ಹೋರಿದು ನಿಂತಮರೌಘ ಬೆರಗಾಗೆ ॥ ನೋಡಲಬ್ಧಗಳೆರಡು ಸಾವಿರ । ಗೂಡಿಯ್ಯೆ ನೂರಾಯ್ತು ಮಿಗೆ ಖಳ । ನೋಡಿ ಯುಕ್ತಿಯನೊಂದ ತಾ ನಿಂತೆಂದ ಬಲವಾಗಿ ॥ ೧ ॥

ಸೌರಾಷ್ಟ್ರ : ತ್ರಿವುಡೆ

ಸಿದ್ಧಿಯೋಗದೊಳಿಂ ಜಯಸಂ । ಸಿದ್ಧಿಸುವೆ ಮಾಯಕದೊಳಹಿತನ । ನುದ್ಧರುಟುತನ ಕರವೆ ಮದ್ದನು । ಬದ್ಧವಾಗಿ ॥ ೧ ॥ ಘೋರ ಮಹೀಶಾಕೃತಿಯೊಳೀತನ । ಹೋರಿ ಸಮರಾಂಗಣದಿ ನೆತ್ತರ । ಹೀರುವೆನು ಮಝಭಾಪೆನುತಲು । ದ್ಧಾರ ಬಲನು ॥ ೨ ॥ ಝುಡಿದರಿಯನಾರ್ಭಟಿಸುತ ಭ್ರುಕೆ । ಸಿಡಿದು ಸೈರಿಭನಾಗಿ ಗೂರ್ಮಿಸ । ಲಡಗಿತಿನರುಚಿಕುಲ ಶಿಲೋಚ್ಚಯ । ನಡುಗಿ ತಾಗ ॥ ೩ ॥

ವಾರ್ಧಿಕ

ಕಡಲುರಿಯ ಪೋಲುವರುಣಚ್ಛವಿಯ ಕಣ್ಗಳಿಂ । ಝುಡಿವೆಗಗಳ ಕಡು ಬಿಣ್ಪುದೋರಡಿಗಳಿಂ । ನಿಡುಪುಚ್ಛ ದೌಂಪ್ಟ್ರಗಳಿಂದೆಸೆ ಧ್ವನಿಗಳಿಂ ಪೊಡವೀತಳಂ ಬೆಚ್ಚಲು ॥ ಅಡಿರಸಾತಳದಿ ಕೋಡುಗಳ ಧ್ರುವಲೋಕ । ದೆಡೆಯೊಳಿರೆ ಹೂಂಕೃತಿಗೆ ಜಡಜಜಾಂಡ ಕಟಾಹ ಒಡದುದೆನೆ ಮೈದೋರ್ದ ನದ್ಭುತಾಕಾರದಿಂ ನುಡಿಯಲೆ ನಿನ್ನಾಗಳ್ ॥ ೧ ॥

ಭೈರವಿ : ತ್ರಿವುಡೆ

ಕಡಲದೇಳ್ ಕುದಿದುಕ್ಕಿ ಮೇಲ್ ಸಿಡಿ । ಸಿಡಿದು ತಾರಾಕರ ಹಾರಿದು । ಜಡಿಯಿಡಲು ಫಣಿಕೂರ್ಮ ದಿಗ್ಗಜ । ನಡುಗಿತೇಣ್ದೆಸೆ ರ್ಝೋಂಪಿಸಿ ತುರವ । ಕೊಡನೆಲಯು ಭೈರವನ ರೋಷದಿ । ನಡದರಿಯ ಬಡಿದೇಕಿ ಹಾಯುತ । ಅಡಿಗಡಿಗೆ ಹೂಂಕರಿಪ ಬಿಂಕದ । ಕಡುಭಯಂಕರವಾದ ಸಮರವೇನನೆಂಬೆ ॥ ೧ ॥ ಹಾ ಎನುತ ಬಹಿರ್ಮುಖಾವಳಿ । ಬಾಯ ಬಿಟ್ಟುದದತ್ತಲಿತ್ತಲು । ತಾಯಿಗಾತ್ಮಜರಾಗದೋಡಿತು ಗಾಯಗೊಂಡವನೇಕಸಾವಳಿ । ರಾಯ ಕೇಳೇನಲ್ಪನೇ ವ । ಜ್ರಾಯುಧಾತ್ಮಜ । ಬಗವನೇರಿದು । ಹಾಯೆ ಹಾರುತ ಹಾರಿ ಮೂರ್ದಿನಿಯ । ನೋಯ ಮೆಟ್ಟಿದ ಶೃಂಗಗಳ ಪಿಡಿ । ದೇನನೆಂಬೆ ॥ ೨ ॥ ಬಿಡುಬಿಡುತಲೆ ರಕ್ಕಸ ನಪುಂಸಕ ತುಡುಕೆ ಕೈತವದಿಂದಲೆನ್ನಯ । ಕಡುಸಮರ್ಥಿತೆ ಗೆಲುವೆಯಾ ಫಡ ಫಡ । ಪರಾಕ್ರಮ ನೋಡೆನುತ ಬೆ । ನ್ನೊಡವ ಓರ್ ತರು ಶೈಲ ಹೆಗ್ಗಿರಿ । ಜಡಿದು ಕಿತ್ತೊಡನೊಡನೆ ಬಡಿ ಬಡಿ । ದಡಗುಡುಗಿನೋಲ್ ಧನಿ । ಗೊಡುತ ಸಾವಿರ ವರುಷ ಕಾದಿದರೇನನೆಂಬೆ ॥ ೩ ॥

ಭಾಮಿನಿ

ಜರಿದುದಬುಜ ಭವಾಂಡವಿಬ್ಬರ । ಧುರದ ಹೋರಟೆಗಮರ ಸಂತತಿ । ಸರಕ ತೆಗೆದುದು ಸಿಡಿದು ಹಾರಿದವದ್ರಿ ಶಿಖರಚಯ ॥ ಜರಿದುದಂಬುಧಿಯವನಿವನಿ ಬಿಕ್ಕನೆ ಬಿರಿದು ಓರ್ಗುಡಿಸಿದವು ಬಂಧುರ । ಧುರಭಯಂಕರವ್ಯಾತ್ತು ಲೋಕಕೆ ಕೇಳು ರಘುರಾಯ ॥ ೧ ॥

ಮಾರವಿ : ಏಕ

ಮತ್ತಾತನುಮರ ಸುತ್ತವನೌಕಸಮತ್ತನೆ ಕೇಳೆಲವೊ । ಬಿತ್ತಿದೆಯ್ಯೆಖತಿ । ವೆತ್ತಾ ಕೋಣನಿ । ಗೆತ್ತಣ ಘನಗಿಲ್ಲೊ ॥ ೧ ॥ ಎನಲೆಂದನು ಹುಲು ದನುಜ ಭಟೋತ್ತಮ । ನೆನಿಪೆಯ ನೀನಿನ್ನು । ಬಿನುಗುತ ಕೃತಕದೋರ್ । ಘನವ ಪರೀಕ್ಷಿಪು । ದೆನುತ ತಿವಿಯಲವನು ॥ ೨ ॥ ಆದಡೆ ನಿಲ್ಲೆಂದೈದಿ ಜಗಾಂತ್ಯದ । ವೈದೀಭ್ರೂಜನಂತೇ । ಕ್ರೋಧದಿ ಝುಟ್ಟಿಗನಾದ ತ್ರೈಲೋಕವ । ಭೇಧಿಪನೆಂಬಂತೆ ॥ ೩ ॥

ಭೈರವಿ : ಏಕ

ಉಬ್ಬಟೆಯಲ್ಲಿ ಬಂ । ದಬ್ಬುತ ವಾಲಿಯ । ಕಿಬ್ಬಿದಿಯಂ ಬಿಡ । ದೊಬ್ಬಿ ಹುಂಕಾರದಿ । ಯಬ್ಬರಿಸಲು ಜಗ ತಬ್ಬಿಬ್ಬಾದುದು ॥ ೧ ॥ ಬೊಬ್ಬೆಗೆ ವಾರಿಜಗಬ್ಬನು ನಡುಗಿದ ॥ ೨ ॥ ನೀಡಿದ ಜಿಹ್ವೆ ಕೆಂ । ಪೊಡಿದ ನೇತ್ರ ಜೊ । ತಾಡುವ ಕರ್ಣ ಸೊಂ । ಪಾಡುವ ಭುಜಗಳ । ಪಾಡಿ ನಲಿಂದು ಕೂಗ್ಯಾಡುತ ನಿಲ್ಕಪಿ । ಖೋಡಿ ಎನುತ ಸುಳಿ । ದಾಡುತ ಕಣನೊಳು ಏನನೆಂಬೆ ॥ ೨ ॥ ಏನು ವಿಚಿತ್ರವೊ ದಾನವನಾವಹವ ತಾನೆನಲೆಸೆಯಲು । ಭಾನು ಸುತಾಗ್ರಜ । ಶ್ವಾನನೆ ನಿಲ್ ಫಡ

ನೋಡೆನ್ನಗೆಯನು । ತೋರಿಪೆನೆಂದು ಸ್ಯ । ಧಾನದಿ ಗೆಲಿದಾ ॥ ೩ ॥ ಖೂಳನು ಮಿಗೆ ದೌಂಷ್ಟ್ರಾಳಿಯು ಕಪ್ಪು ಕ । ರಾಳದೃಶೋನ್ನತ । ವಾಳಿಗೆದರ್ದನಿ । ಲಾಳಕ ಜಾಲದಿ । ಮೇಳವಿಸುತ ಮಹಂ । ಕಾಳಿ ಜ್ವಾಲಿನಿ ಖೇಳದಿನಿಂದದನೇನ ನೆಂಬೆ ॥ ೪ ॥ ಅದ್ದುದೊ ಧರೆ ಮೇ । ಲೆದ್ದುದೊ ಜಲವೆನ । ಲುದ್ಧದ ರೋಪದಿ । ಪೊದ್ದಿದಡಿಂದ್ರಜ । ಗುದ್ದಿದನೆರೆಮರನದ್ಗಿರಿಚಯದಿ ಮೇಣ್ । ಗೆದ್ದ ಬಲಾಢ್ಯನು ಸದ್ದಿನೊಳಾ ಜಯನೇನನೆಂಬೆ ॥ ೬ ॥

ವಾರ್ಧಿಕ

ಖಂಡ ಮಯವೆತ್ತಲುಂ ಕಡಿವಡದು ಬಿದ್ದವೇ । ತಾಂಡಮಯಪೆತ್ತಲುಂ ಕುಣಿಕುಣಿವ । ಮರುಳು ಬಲ । ತಂಡಮಯ ವೆತ್ತಲುಂ ಸುತ್ತಲು ಪರಿರಕ್ತಾಂಬು ಮಯಭೀಕರದೊಳು ॥ ರುಂಡಮಯವೆತ್ತಲುಂ ಕೆಟ್ಟೋಡೆ ನಡವಖಳ । ತಂಡ ಮಯಪೆತ್ತಲುಂ ಮುರಿಮುರಿದ ಕೈದುಗಳ । ತುಂಡಮಯವೆತ್ತಲುಂ ತಾನೆನಿಸಿರಣ ರಂಗವೀರ್ದುದಮರರ್ಪೊಗಳಲು ॥ ೧ ॥

ಭಾಮಿನಿ

ಹರಿಶರಭ ಕಾಡ್ಗೋಣ ಸೂಕರ । ಕರಡಿಯೋಲ್ ಸೆಣಸಿದೆನು ಮಿಗೆ ಗಿಣಿ । ಮುರುಲೆಗೃಧ್ರ ಸಮೂಕ ಕಾಕಕಪೋತಕಲವಿಂಕಾ ॥ ಸುರಭುಜಂಗ ಶ್ವಪಚ ಸಚರಾ । ಚರದ ರೂಪವಧರಿಸುತಿಂತಾ ಸುರದಿ ಕಾದಿದನೈದು ಸಾವಿರ ವರುಷ ಸವೆವನಕಾ ॥ ೧ ॥

ಕಂದ

ಕಡುಧುರ ಜಯಮಂ ಕಾಣದೆ । ಖಿಡಿಯಿಡುತ ಸುರಾ ಲಯ ಸಿಡಿ ಲ್ಲೋಲ್ ಘರ್ಜಿಸುತಂ । ಪಿಡಿದು ಸುಗಂಧಾಕ್ಷತೆಯಿಂ । ಬಿಡದರ್ಚಿತ ಶೂಲವ ಹಸ್ತದಿ ಪಿಡಿದೆಂದಂ ॥ ೧ ॥

ಸೌರಾಷ್ಟ್ರ : ತ್ರಿವುಡೆ

ವಾಲಿ ಕೇಳೀ ಮುಖಕಜ । ನೀಲವೋಹಿತ ವಿಷ್ಣುಗಳ ಲಯ । ಕಾಲ ವೈಗುಣ ಬೇರೆಯುಂಟಿದನಾಲಿಸುವದು ॥ ೧ ॥ ಈ ಮನುಷ್ಯ ಮಹೋರಗಾಸುರ । ಭೂಮಿಭಂಜನವಿದುಕಣಾ ಹೊರ । ಗೋಮಿನೀಯುಕ್ತಿ ನೀನೊಳಗೆ ಸು । ತ್ರಾಮ ಜಾತ ॥ ೨ ॥ ಕಾಯುಲಾಪುವರಿಲ್ಲ ಬೊಮ್ಮನು । ಬಾಯದೆಗೆಯಲಿ ನುಡಿಯ ಲೀಶನು । ನಾಯಿಗಳ ಹೇಳದಿರು ದಿವಿಜರ । ಜೇಯನಹನೈ ॥ ೩ ॥ ಖಳರೊಳಗೆ ಬ್ಬಾ ಬಡಿಕನಹೆ ನೀ । ಗಳಹುವರೆ ನಮಗೀ ನುಡಿಯ ಫಡ ಕಳುಹು ಶೂಲ ಕ್ಕಳುಕುವೆನೆ ದೋ । ರ್ವಳನೆ ಭಳಿರೆ ॥ ೪ ॥ ಆದಡಿದಕೊ ಎನುತ ಕರ್ಕಶ । ಕೈದುವನು ಕುಬು ಬಿರಿದು ಹಾಣಿಸೆ । ಕೈದುಡುಗಿ ಮುಂದಬ್ಧಿಗಿಟ್ಟಕ್ರವ್ಯಾದ ಬೆದರೆ ॥ ೫ ॥

ಶಂಕರಾಭರಣ : ಮಟ್ಟೆ

ಕಡುಕಠೋರ ಬಲಸು ಕಾಣು । ತ್ತೊಡನೆ ಗದೆಯಗೊಂಡು । ನುಡಿದ ನೆಲವೊ ಕೋತಿ ಗರ್ವ । ವಿಡದಿರ್ಕೈ ಬಲ ॥ ಕಡಲ ಕಡೆದ ಗರ್ವವೆನ್ನ । ಒಡಲ ಮಗನ ಗೆಲಿದ ಗರ್ವ । ದೃಢಕುಲಾದ್ರಿ ಕುಲಿಶ । ವಿದಕೊ । ತಡೆದುಕೊಳ್ಳೆಲ ॥ ೧ ॥ ತಡೆವದೇನು ಮೂರ್ಖ ದಿವಿಜ । ರೆಡೆಯ ಹವಿಯ ಕಳುವ ದ್ರೋಹಿ । ಬಿಡದೆ ಸುರೆಯ ಕುಡಿವ ಮೂರ್ಖ । ರೊಡೆಯ ಭಾಪುರೆ ॥ ಕಡುಹ ಬಲ್ಲೆ ನಿಲ್ಲು ನಿನ್ನ । ಹೆಡತಲೆಯ ಲೇಖನದ ಋಣವ । ಬಿಡದೆ ತಿದ್ದಿ ಕೊಡುವೆನಿಂದು ॥ ನುಡಿದೆ ಯಾದರೆ ॥ ೨ ॥ ಸೋದರನ್ನ ಗೆಲಿದ ನೀಚ । ನಾದಿನಿಯಳನ್ನೊಯ್ದ ನೀಚ । ಕಾದು ಪ್ಲವಗ ನೀಚ ಶಿರವ । ಕಾದುಕೋ ಇಂದು ಮೋದಗಾರ್ತಿಯರನು ಕರಸಿ । ಯೋದುತ್ತರವನರುಹಿ ಸಹಸಿ । ಯಾದ ಬಲ ಬೆಂಬಲಕೆ ಕರಸಿ । ರೋದಿಸೆನ ಲಂದು ॥ ೩ ॥ ನಿನ್ನ ಕೊಂದು ಮತ್ತೆ ಕರಸಿ । ಕನ್ನೆಯರೊಳು ನುಡಿವೆ ಮಾತ । ಖುಲ್ಲ ನಿಲ್ಲೆನುತ್ತ ನುಡಿಯು । ವನ್ನೆಗಾ ಖಳ । ಇನ್ನು ನೋಡೆನುತ್ತ ಶರವ । ನನ್ನಿಯಿಂ ಗದಾಗ್ರದಿಂದ । ಭಿನ್ನಿಸುವ ಓಲೆಚ್ಚ ಕಾಣು । ತುನ್ನುತಾ ಬಲ ॥ ೪ ॥ ಧುರಸ ಭಾಗ್ಯ ವಾಲಿ ಗದೆಯ । ಕರದಿ ಪಿಡಿದು ಮೆಟ್ಟಿ ಮುರಿದು । ದುರುಳನುರು ಕಪಾಲ ತಿವಿದು । ತಿರುಗೆ ದನುಜನು ॥ ಭರದೊಳಿವನ ವಕ್ಷಕೆರಗೆ । ತರಹರಿಸುತ ಲೆದ್ದು ಪ್ರಳಯ । ಹರನ ಓಲುಬ್ಬೆದ್ದು ಶಕ್ರ । ತರಳ ಪ್ರಬಲನು ॥ ಮಾಯ ಗೀಯದಾಯಿತೆಕೆ ಗ । ಳಾಯಿ ಕೀಶಭಾಸು ನೀಚ । ನಾಯಿ ಎನುತ ನಗುತ ಖಳನ । ಬಾಯ ಮೆಟ್ಟುತ । ಸಾಯೆನುತ್ತ ಶಿರವ ತಿವಿದ । ಡಾಯೆನುತ್ತ ಮುಗುಳೆ ತಿವಿದ । ಗಾಯ ಬಗೆಯದಾಗ ಲಮುಮ । ರಾಯ ನಿಜಸುತ ॥ ೬ ॥ ಹಾರಿದಿಗ್ದನಿಯ ಗೊಡುವೊ । ಲೈದಿ ವೈರಿವಕ್ಷ ತಿವಿದಡಾಗ । ಭಾರಿ ರಕುತ ಕಾರಿ ಧರೆಗೆ । ಕ್ರೂರ ನೊರಗಿದ ॥ ಮೋರೆ ನೆಗಹುವದರೊಳಾರು ನೂರು ಗುದ್ದಿ ಕುಣಿಯಲುರದೊಳ್ । ಜಾರಿತಸುವು । ತಿಳಿಯೆ ಪೋದ ದಾರಿಯನು ಬದ್ದ ॥ ೭ ॥

ವಾರ್ಧಿಕ

ದುಂದುಭಿಯ ಮರಣದೊಳಗಮರಿಯರ್ ನಲಿದು ಜಯ । ದುಂದುಭಿಯ ಧ್ವಾನದಿಂ ಸುಮವೃಷ್ಟಿಯಂ ಸುರಿಸ । ಲಿಂದ್ರಜನ ಸಿರಿಮುಡಿಗೆ ಇಂದ್ರಾದಿ ವೈಮಾನಿಕಪ್ರತಿತಂತಮ್ಮಯ ॥ ಮಂದಿರವ ಪೊಕ್ಕರೈ ಪೊಗಳುತ್ತ ವಾಲಿಯಂ ಬಂದು ಜಯ । ದುಂದುಭಿಯದುಬ್ಬಿನಿಂದಿತ್ತ ಋಕ್ಷಜಮನೆಗೆ । ಮಿಂದು ಮಡಿ ವರ್ಗದಿಂ ರಂಜಿಸಿದರಾಮ ಕೇಳ್ । ಸಂಗರದಿ ಖಳನ ಕಾಯ ॥ ೧ ॥

ಕಂದ

ಬಡಿಯಲ್ ದುದುಭಿ ರಕುತಂ । ಸಿಡಿದೆರಗಿತು ಋಶ್ಯಮೂಕಗಿರಿಶಿಖರ ದೊಳ್ । ಮೃಡನಂತೆಸೆಯುವ ತಾಪಸ । ಮೃಡನುತ್ತುಂಗ ಮತಂಗಂ ಕಂಡಪ ಖತಿಯಿಂ ॥ ೧ ॥

Scanned by CamScanner

ಭಾಮಿನಿ

ವಿಶ್ರಮಸ್ಥಳವೆಮ್ಮದೀಗಮ । ಹಾಶ್ರಮಕೆ ನಮ್ಮಯ ತಪಕ್ಕೆ ಸ । ಹಸ್ರನತ್ರನನಗಲ್ಗಣೆಗೆಘನವಾಯಿತ್ತಲ ಎನುತ ॥ ಮಿಶ್ರಿತಾರುಣ ನಯನನಾ ಬಲ । ವಿಶ್ರುತನ ಶಪಿಸಿದ ಮದೀಯ ಮ । ಹಾಶ್ರಮಕೆ ಬರೆ ಮರಣ ಮೈಗೊಡಲೆಂದು ಜನಜನಿತ ॥ ೧ ॥

ಪರಿವರ್ಧಿನಿ

ದಿನಪಂ ತಿಳಿದದ ತನ್ನ ಕುಮಾರನ । ಮುನಿಪನ ಕೈಯ್ಯಲಿ ರಕ್ಷೆಗೆ ಕೊಟ್ಟಡೆ । ಮನೆಯ್ಯಾತ್ತಂದಿಂದಾ ಗಿರಿ । ಸುಗ್ರೀವನಿಗಾನಂತರದಿ । ಹನುಮ ನಳಾದ್ಯರು ಮಂತ್ರಿಗಳಾದರು । ಇನನಾಜ್ಞೆಗಳಿಂ ಸುಖಿಸಿದರುಮೆ ಪತಿ । ಜನಪ ಕೇಳ್ ಮುಂಗತೆಯಿತ್ತ ಚಿರಕಾಲ ಕಳಿಯೆ ಶುಭದಿ ॥ ೧ ॥

ಶರಷಟ್ಪದಿ

ಇಂದ್ರಜಗುದಿಸಿದ । ಚಂದ್ರಾನನೆ ತಾರೆ । ಇಂದಲಿ ಶುಭದಿನದಿ ವಂದತ್ತನೆ ದಿನ । ಕಂದನ ಎತ್ತಿ ಬಂದೆಂದಳು ತಾರೆ ಪತಿಗೆ ॥ ೧ ॥

ಸುರುಟಿ : ಏಕ

ಲಾಲಿಸೆನ್ನ ಮಾತ । ಸುಗುಣ ವಿ । ಶಾಲಭಾಗ್ಯವಂತ ॥ ಪಲ್ಲ ॥ ಆಲೋಚಿಸುತವರಡಿಗೊಂಡೆರಗದ । ಮೇಲೆ ಶಶಾಂಕನ ಕಂಡೆ ಕನಸಿನೊಳು ॥ ೧ ॥ ಚಂದ್ರನಂತ ಕಂದಾ । ಜನಿಸಿದನಿಂದು ನೋಡು ಚಂದಾ । ಮುಂದೆ ನಮ್ಮಯ ಕುಲ । ಚಂದ್ರಮನಿವಗಾ । ನಂದಿಸು ಬಹಳಾನಂದದಿ ಮೋಹನ ॥ ೨ ॥ ನಾಮಕರಣ ಗೈಸು । ನವಮಣಿ । ಹೇಮಪದಕೆ ತೊಡಿಸು । ಶ್ಯಾಮಾಂಬರಗಳ । ಪ್ರೇಮದೊಳುಡಿಸುತ । ನೀ ಮುದ್ದಾಡು ಸು । ತ್ರಾಮ ಸನ್ನಿಭಗೆನೆ ॥ ೩ ॥

ನೀಲಾಂಬರಿ : ಏಕ

ಕಾಂತೇ ಶ್ರೀಮಂತೆ ಸ್ವಂತ ಸುಖವಾಂತೆ । ಕಂತು ಮದನನೆ । ನಿಂತು ವಲಿದನೆ ॥ ೧ ॥ ಚಂದ್ರನಂಶಜಾ । ಕಂದನಿವನಿ ಜಾ । ಸಾಂದ್ರ ಗಂಧವು । ಮುಂದೆ ನಾಮವು ॥ ೨ ॥ ಅಂಗದನೆಂದು । ಮಂಗಳಾಮಿಂದು ಭೃಂಗಕುಂತಳೆ । ಯಂಗನೆ ಕೇಳು ॥ ೩ ॥

ವಾರ್ಧಿಕ

ಹೊತ್ತಾಯ್ತು ಮಧ್ಯಾಹ್ನದತ್ತಲೇರಿದ ಸೂರ್ಯ । ಗುತ್ತಮಘ್ರ್ಯವನಿತ್ತು ಬಹೆನೆಂದು ಕಂದನಂ । ಮತ್ತೆ ಬೋಳೈಸಿ ನಿಜಲೋಲೆಯಿಂ ಬೀಳ್ಕೊಂಡು । ಲವಣಾಬ್ಧಿಗೈದಿ ಮಿಂದು ॥ ಮಿತ್ರಾಯ ಹಂಸ ಸಾವಿತ್ರಾಯಯಂದರ್ಘ್ಯ । ವಿತ್ತು ಕುಳ್ಳಿರಲತ್ತ ದಶಕಂಠ ಪುಷ್ಪಕದಿ । ನಿತ್ತ ವಿಭೀಷಣ ಪ್ರಹಸ್ತರೊಡನೈತರುತ । ವಾಲಿಯಂ ಕಂಡು ನಿಂದು ॥ ೧ ॥

ಸೌರಾಷ್ಟ್ರ : ತ್ರಿವುಡೆ

ಧುರ ಸಭಾಗ್ಯನು ಮತ್ಸರಿಸುತಿಂ । ತೊರೆದ ಭಾಪುರೆ ಮರ್ಕಟರುಹರ । ಹರವಿಭಾವಸುಗರ್ಘ್ಯವೀವುದೆ । ಕೊರತೆ ನಮಗೆ ॥೧॥ ಅದರಿನಿಂದೀ ಕಪಿಯ ಕೊಂಡ್ಯೊ । ದೊದಗಿಕಾರಾಗಾರಕಿಕ್ಕುವೆ । ಮುದದೊಳೆಂದಾರ್ಭಟಿಸಿ ಬಂದವ । ಗೊದೆದು ನುಡಿದ ॥ ೨ ॥ ಎಲವೊ ಪ್ಲವಗಭ್ರುಹನೆ ಬಿಡು ಬಿಡು । ಸಲಿಲವನುಮರಗೊಂಬನುಳಿದೀ । ಕಲಿತನವ ನೀನೆಲ್ಲಿ ಕಲಿತೆಯೊ । ಕುಲಕುಠಾರ ॥ ೩ ॥ ದರ್ಪಕಾರಿಪ್ರಿಯರು ನಾವ್ ನಮ । ಗೀರ್ಪುದಲ್ಲದೆ ಸಲುಗೆ ನಿನಗೀ । ತರ್ಪಣವು ಫಡನಿಲ್ಲೆನುತಲತಿ । ದರ್ಪದಿಂದ ॥ ೪ ॥ ತೋಳುಗಳ ಬಲಿದೌಕಿಯಲುಗಿಸೆ । ಗಾಳಿಗೊಡ್ಡಿದ ದೀಪದೋಲ್ ಧರೆ । ಯೋಳು ನಡುಗಿದವಾಗಲಿಂದ್ರಜ । ಖೂಳಖಳನಾ ॥ ೫ ॥

ಭಾಮಿನಿ

ಕರಗಳೌಕಿದ ತನ್ನ ವಕ್ಷವ । ಭರಿತ ಬಲ ಬಿಗಿದೊತ್ತಿ ಹಾರಿದ । ನರರೆ ಪಶ್ಚಿಮ ಪೂರ್ವದುತ್ತರ ವಾರಿನಿಧಿಗಳಲಿ ॥ ತರಣಿಗರ್ಘ್ಯವನಿತ್ತು ಬಂದಾ । ಸುರ ವಿರೋಧಿಯ ಪುರದ ಬಾಹ್ವೆಯೊ । ಳಿರಿಸೆ ಮೈಮುರಿದೆದ್ದು । ದಶಶಿರ ನುಡಿದ ಕ್ರೋಧದಲಿ ॥ ೧ ॥

ಭೈರವಿ : ಏಕ

ಬಲ್ಲಿದನಾದೆಯ ಕಪಿಯೆ । ಎ । ನ್ನಲ್ಲಿ ಹಂಕಾರವೆ ಶಭಿಯೆ । ಚೆಲ್ಲುವೆ ಕೆಂಗರುಳರಿಯೆ । ನಿಲು । ಬಲ್ಲಡೆ ಧುರಕ್ಕೈಗುರಿಯೆ ॥ ೧ ॥ ಬೆರಳುಂಗುರಗಳ ಪರಿಯ । ನೋಡೆ । ವರ ಮುಕರುಗಳ್ಯಾಕಯ್ಯ । ಕರತರಮಲಕ ನೀನರಿಯ । ನೇತ್ರರನಿಳಿಸುವೆ ನೀ ಬಾಯ ॥ ೨ ॥ ಆದಡೆ ನಿಲ್ಲೆಂದೆನುತ । ಖಳ । ಕ್ರೋಧದಿ ಸೆಣಸಿದಡಾ ತಾ । ಕೈದುಮೆಳೆದು ಗುದ್ದುತ್ತ । ಅರೆ । ಮೇದಿನಿಗುರುಳಿದ ಧೂರ್ತ ॥೩॥

ವಾರ್ಧಿಕ

ಬಿದ್ದ ದಶಕಂಠನಂ ಸುರರ ಪೊಗಳಿಕೆಯಿಂದ । ಉದ್ಧತ ಪರಾಕ್ರಮಂ ವಾಲಿ ಬಾಲದಿ ಬಿಗಿದು । ಗದ್ದಳದ ಜಯ ಘೋಷದಿಂದೈದಿ ಭವನವಂ । ಪೊಕ್ಕು ಬಹಳಾನಂದದಿ ॥ ಮುದ್ದು ಮಗ ನಾಟಕಿಪತ್ತು ತಲೆ ಹುಳುವು ಸಂ । ಸಿದ್ಧಿಸಿತೆನುತ್ತ ತೊಟ್ಟಿಲ ತೋಳ್ಗೆ ಬಿಗಿದು ನಿಜ । ಮುಗ್ಧೆಯೊಡಗೂಡಿ ಜೋ ಜೋ ಎಂದು ತೂಗಿದಂ ಶಕ್ರಜಂ ಸತ್ವಗುಣದಿ ॥ ೧ ॥

ಸಾಂಗತ್ಯ ರೂಪಕ

ಸಾಕೇತಪತಿ ಕೇಳ್ ಪ್ರಹಸ್ತಾದಿಗಳ ಗೆಲ್ದು । ಏಕ ಕಪಿಂಗಲಿನತ್ತಲಾಗಾ । ಸಾಕಾರ ವೈಮಾನ ಕೊಂಡ್ಯೊದ ನೀ ವಾರ್ತೆ । ತಾ ಕೇಳಿ ಪೌಲಸ್ತ್ಯರಾಗ ॥ ೧ ॥ ಆದಿತ್ಯನೊಲ್ ಜಗರ್ಝುಗಿಸಿ ಕಿಷ್ಕಿಂಧವ । ನೈದಲಿಂದ್ರಜ ಕಂಡು ಮಣಿದಾ । ಪಾದ ಪೂಜೆಯ ಗೈದು । ಮನ್ನಿಸುತೆತ್ತಣ । ದೀ ದರುಶನ

Scanned by CamScanner

ವೇನಿಂದೂ ॥ ೨ ॥ ಸುಗುಣಾಢ್ಯರುಸುರಿ ಬೇಗೆನಲೆಂದ ಪರಸಿ ಕೈ । ನೆಗಹಿ ಮೌನಿಪ ತಂದೆ ತಂದೆ । ಮಗನ ನಿನ್ನಯ್ಯ ಸೋದರನಾವಿಗದರಿಂದ । ಮಗು ನಿನ್ನನು ನೋಡಬಂದೆ ॥ ೩ ॥ ಸಿರಿ ಬಿಂಗ ತೇಜದಿ ಹರಿ ಹರ ಭಾಸ್ಕರ । ರೆರಕವ್ವೆ ನಿನಗೆ ಬಲ್ ಬಲನೆ । ತರಿಹರಿಯೊಳು ತೊಡಗಿದ ಹಾಗೆ ದಶಕಂಠ । ದುರುಳ ನಿನ್ನನು ಕೆಣಕಿದನೆ ॥ ೪ ॥ ಅವನೆನ್ನ ಪೌತ್ರ ನೀ ಸೆರೆಗೊಂಡೆ ಬಿಡು ಸಾಕು । ಭುವನದೊಳ್ನಗೆಗೇಡ್ಯಾತ್ತಲ್ಲೆ । ತವೆ ಮಾನವಂತರಿಗವಮಾನ ಸಾಲದೆ । ದಿವಿಜೇಂದ್ರಸುತ ನೀನೆ ಬಲ್ಲೈ ॥ ೫ ॥

ವಾರ್ಧಿಕ

ಎನೆ ಹಸಾದವು ಜೀಯ ನಿಮ್ಮಡಿಯನುಜ್ಞೆಯಿಂ । ಘನವಲಾ ಮಿರುವೆನೆ ನಿನುತಾಗ ರಾವಣನ । ಜನರರಿಯೆ ಬಿಟ್ಟು ಮೌನಿಯು ಪದಕೆ ಕುಂಬಿಟ್ಟು ನಿಲಲಳ್ಕರಿಂ ಮನ್ನಿಸಿ ॥ ಅನಲ ಸಾಕ್ಷಿಯಲಿ ರಾವಣ ವಾಲಿಯುರ ಮಿತ್ರ । ರೆನಿಸೆ ನಾನೀರ್ದು ನಿನ್ನನು ಸಾಯ ಬಿಡೆನೆಂದು । ಘನ ಭಾಷೆಯಿತ್ತು ಮನ್ನಿಸಲಾಗ ವಾಲಿಯುಂ ಬಿಳ್ಕೊಂಡು ಮೌನಿಪರಸಿ ॥ ೧ ॥

ಭಾಮಿನಿ

ಮತ್ತೆ ದಶಮುಖನುಚಿತದಲಿ ನಿಜ । ಮುತ್ತಯನ ಕಳುಹುತ್ತ ದನದನ । ವತ್ತಿ ಪುಷ್ಪಕಗೊಂಡು ಲಂಕೆಗೆ ನಡೆದನೊಲವಿನಲಿ ॥ ಇತ್ತ ಬರ್ದಿಲರಾಣ್ಮ ನಿಜಸುತ । ಮತ್ತವಾರಣನೆಡೆಗೆ ಬರೆ ಸಂ । ಸ್ತುತ್ಯದಿಂದಿರೆ ನುಡಿದ ಮಗಗಿಂತೆಂದು ವಿನಯದಲಿ ॥ ೧ ॥

ಭೈರವಿ : ಝಂಪೆ

ಮಗನೆ ನೀನಿನಿತೆಲ್ಲ । ನೆಗಳಿದುದು ಲೇಸು ತ್ರೈ । ಜಗದಲ್ಲಣಗೆ ಭಾಷೆ । ಯಾಗಿದುದತಿ ಮೋಸ ॥ ೧ ॥ ಬೆನ್ನೊತ್ತಿ ಬಂದನುಜನನ್ನು ದೂಡಿದೆಯವಗ । ಕನ್ನಿಕೆಯ ನೀನಾಳ್ವ । ದ ನ್ಯಾಯವಲ್ಲೈ ॥ ೨ ॥ ತಪ್ಪು ಸಾವಿರವಿರಲು । ಒಪ್ಪು ಗೊಳಬೇಕೆನ್ನ । ಬೊಪ್ಪ ಇಂದಿಗೆ ಬಿಟ್ಟೆ । ಸರ್ಪವೇಣಿಯನು ॥ ೩ ॥ ಕಂಡೆ ಲೇಸ್ಯಾತ್ತು ಕೇಳ್ । ದುಂದುಭಿ ವಧಾ ಸಮಯ । ದಿಂದರುಣ ಜಲ ಚೆಲ್ಲಿ । ದಿಗ್ದೆಸೆಗೆ ॥೪॥ ಅಂಗದಲಿ ಬೀಳೆ ಮಾ । ತಂಗ ಶಪಿಸಿದ ಋಷ್ಯಶೃಂಗಕೈದಲು ವಾಲಿ । ಹಿಂಗಲಸುವೆಂದು ॥ ೫ ॥ ಅರುತಿಪ್ಪುದದರ ನೀನೀ । ಮರೆಯದಿರು ಸುಗ್ರೀವ । ನಿರುತಿಪ್ಪನಾರ್ಯ ಮನ । ಕರುಣದಿಂದಲ್ಲಿ ॥ ೬ ॥ ತಂದೆ ನಿಮ್ಮಾಜ್ಞೆಯನು । ಹಿಂದುಗಳವೆನೆ ಎನುತ । ಲಂದೆರಗಲೆತ್ತಿದನು ಮಗುವನಮರೇಂದ್ರ ॥ ೭ ॥

ವಾರ್ಧಿಕ

ಮಾರ್ತಾಂಡಕುಲಜ ಕೇಳ್ ಮಾಗ ಬಲು ಭಕ್ತಿಯಿಂ । ದಾರ್ತನಾಗುತ ವಾಲಿ ತಂದೆಯಂ ಶ್ರುತಿ ಮತದಿ । ಪ್ರಾರ್ಥಿಸಿದಡಳ್ಕರಿಂ ಮಗನೊಡನೆ ಸಿಂಹ ಪೀಠ

ದೊಳೊಪ್ಪಲಮರೇಂದ್ರನು ॥ ಸ್ವಾರ್ಥವೀ ಕಾಲವೆಂದಬ್ಜಾಕ್ಷಿಯರ್ನಲಿಯು । ತರ್ತಿಯಿಂ ಬಟ್ಟ ಕುಚಭಾರದಿಂ ಬಂದಿದೇ । ಕರ್ತವ್ಯವೆಂದು ಪೊಂಬಣ್ಣದ್ಧರಿವಾಣ ದೊಳು ಎತ್ತಿದರು ಆರತಿಗಳ ॥ ೧ ॥

ಧವರಾಳ : ತ್ರಿವುಡೆ

ಇಂದ್ರಗೆ ಸದ್ಗುಣಸಾಂದ್ರಗೆ । ನಿರ್ಮಲ ವೃಂದಾರಕಮುನಿವಂದ್ಯಗೆ । ಸುಬಲಗೆ । ಚಂದ್ರಶೇಖರನಾಭಕತಗೇ ॥ ಚಂದ್ರಶೇಖರನಭಕತೆಗೆ ವಾಲಿಗೆ ॥ ಕುಂದಣ ದಾರತಿಯ ಬೆಳಗೀರೆ ॥ ಶೋಭಾನಂ ॥ ೧ ॥ ಪಿಡಿನಡು ಬೆಡಗಿನ । ಮಿಡಿ ಮೊಲೆ ಕಡುಹಿನ । ಹುಡುಗಿಯರು ನಿಂದು । ನಲಿದಂದು ॥ ಹುಡುಗಿಯರು ನಿಂದು ನಲಿ ದಿಂದ್ರಗೆ ನವ । ಜಡಜಾದಾರತಿಯ ಬೆಳಗೀರೆ ॥ ೨ ॥ ಸಂಗರ ಶೂರ ಪ್ಲ । ವಂಗೇಶ್ವರಗೆ । ಮ । ತಂಗಧ್ವಜಗೆ ಸುರೇಂದ್ರಗೆ ಸುಗುಣಗೆ । ಭೃಂಗಾಲಕಿಯರು ಪೊಗಳುತ ಪಾಡುತ । ಮಂಗಳಾರತಿಯ ಬೆಳಗೀರೆ ॥ ೩ ॥

ವಾರ್ಧಿಕ

ಧರಣೇಂದ್ರ ಕೇಳಾನಿಳಿಂಪೇಂದ್ರ ಮೇಣ್ಮಗನ । ಪರಸಿ ನಡದಂ ದಿವಕೆ ತತ್ತನುಜ ಸಾಮ್ರಾಜ್ಯ । ದುರುಭೋಗದಿಂದೆಸದನತ್ತ ಋಷ್ಯಾದ್ರಿಯೊಳಗರ್ಕಜಂ ಸುಖದೊಳೀರ್ದ ॥ ಮರುತಜಂ ಮಂತ್ರಿಯಾಗೀರ್ದರೇನಿನಜಂಗೆ । ಪರಿಪರಿಧಿಯಂ ಗೆಲಿಲ್ ಪೂರ್ವ ಶಾಪನಿಮಿತ್ತ । ಮರದಿರ್ದ ತನ್ನಗ್ಗಳಿಕೆಯನಿದು ನಿನ್ನಿಂದ ಸ್ವಾರ್ಥ ವ್ಯಾತ್ತೆಂದುಸುರ್ದ ॥ ೧ ॥

ಭಾಮಿನಿ

ಆಯಿತೇತವ ಪ್ರಶ್ನೆಗುತ್ತರ । ರಾಯ ಕೇಳೆಂಬಾಯಶೋನಿಧಿ । ರಾಯ ಮೌನಿಯನರ್ಚಿಸಿದ ಸರ್ವಾತ್ಮ ಮನವಲಿದೂ ॥ ಪ್ರೀಯದಾಪ್ತರ ಪೊರೆವ ನಿರ್ಮಲ। ತೋಯಜಾಂಬಕ ಸತಿಸಹಜರೊಡ । ನಾಯದಿಂ ರಂಜಿಸುವ ರಾಘವನೆಮ್ಮ ರಕ್ಷಿಪುದು ॥ ೧ ॥

ವಾರ್ಧಿಕ

ಇಂತೆಸೆಯುವಂಜನ ವಿಲಾಸವಂ ಧಾತ್ರಿಯೊ । ಳ್ಕಾಂತಿಯುತ ಸೀಮೆ ವಿಟ್ಠಲ ಗ್ರಾಮ ಬಾಯಾರೊ । ಳಂತೊಳಪ ದ್ವಿಜತಿಲಕ ಜತ್ತಿ ಕೃಷ್ಣಯ್ಯ ತತ್ಸತಿ ಗೌರಿಯರ ತನುಭವಾ ॥ ಸ್ವಂತ ಪಿತೃಮಾತೃಮಾನಸ ಪದ್ಮದಿನನಾಥ । ನಂತೀರ್ಪ ಬಾಲನೀಶ್ವರನೆ ನಾಂ ರಚಿಸಿ ಗುರು । ಕಂತುಹರ ವಿಶ್ವೇಶಗೊಪ್ಪಿಸಿದೆ ನಳ್ಕರಿಂ ಪೊರೆಗೆನ್ನ ಗೌರೀಧವ ॥ ೧ ॥

ಭಾಮಿನಿ

ಸಿರಿಯು ಪರಮಾಯುವನು ಸೌಖ್ಯೋ । ತ್ಕರವಧನ ಧಾನ್ಯಾಭಿವೃದ್ಧಿಯ । ಕರುಣಿಸುಗೆ ಶಿವನೆನಗೆ ಈ ಕಥೆ ಕೇಳ್ದ ಸುಜನರಿಗೆ । ಸರುವ ಗುಣ

ದೋಷಕ್ಕೆದನಿನೀ । ಗುರುವೆ ವಿಶ್ವೇಶ್ವರನೆ ಗಂಗಾ । ಧರನೆ ಮಂಗಲಗೈವೆ ಗತಿ ನೀನೆನಗನಾಥಂಗೆ ॥ ೧ ॥

ಮೋಹನ : ಮಟ್ಟೆ

ಮಂಗಳಾಂತಂ ಭವತು ಸರ್ವ । ಮಂಗಳೇಶಗೆ । ಅಂಗಭವನು । ತ್ತುಂಗ ಮದವು । ತಂಗ ಸಿಂಗಗೆ ॥ ವರಸುಧಾ ಮಯೂಖ ಶೇಖರ । ಶರಣ ಗತಿಕಗೆ । ಗಿರಿಸುತಾನನಾಬ್ಜ ಮಧುಪ । ದುರುಳ ಮಥನಗೆ ॥ ೧ ॥ ಖಂಡಿತಾಹವಾಗ್ರ ಗಣ್ಯರುಂಡಮಾಲಗೆ । ಕುಂಡಲೀಶ ಕುಂಡಲ ಬ್ರ । ಹ್ಮಾಂಡ ಪಾಲಗೆ ॥ ಪಂಚ ಪಂಚತೀತ ಗುರುಶ್ರೀ । ಪಂಚಲಿಂಗಗೆ । ವಾಂಛಿತಾರ್ಥಪ್ರದ ವಿಶ್ವೇಶ । ಪಂಚ ಬ್ರಹ್ಮಗೆ ॥ ೨ ॥

**

Scanned by CamScanner